# ಕರ್ನಾಟಕ ವಿಧಾನಪರಿಷತ್ತು

**ಬುಧವಾರ, 12ನೇ ಜನವರಿ 2011**

**ಸದನವು ವಿಧಾನಸೌಧದಲ್ಲಿರುವ ವಿಧಾನಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರ ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಸ್ವಾಮಿ ವಿವೇಕಾನಂದರ ಜನ್ಮ ದಿನದ ಪ್ರಸ್ತಾವನೆ

**(ವಿರೋಧ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿಂತಿದ್ದರು)**

**ಸಭಾಪತಿಯವರು:** ಇವತ್ತು ಜನವರಿ 12 ನೇ ತಾರೀಖು. ನಮ್ಮ ಇಡೀ ದೇಶ ಒಂದು ರೀತಿಯಲ್ಲಿ ಗರ್ವದಿಂದ ಹೇಳಿಕೊಳ್ಳಬೇಕಾದ ದಿವಸ. ಈ ಪದ ಸರಿ ಹೋಗುತ್ತದೋ ಇಲ್ಲವೋ ಗೊತ್ತಿಲ್ಲ. ನಮ್ಮ ದೇಶದ ಒಬ್ಬ ವೀರ ಸನ್ಯಾಸಿ ಹುಟ್ಟಿದ ದಿವಸ. ಇಂದು ಸ್ವಾಮಿ ವಿವೇಕಾನಂದ ಅವರ ಜನ್ಮ ದಿವಸ. ಅವರು ಈ ದೇಶ, ಪ್ರಪಂಚದ ಅಗ್ರಗಣ್ಯ ರಾಷ್ಟ್ರಗಳಲ್ಲಿ ಒಂದಾಗಬೇಕು ಎಂಬ ಕನಸನ್ನು ಹೊಂದಿದ್ದರು. ಆಗ ಇನ್ನೂ ಭಾರತದ ನಾಗರಿಕರು ದಾಸ್ಯದಲ್ಲಿ ಇದ್ದರು. ಭಾರತ ಆ ದಾಸ್ಯದಿಂದ ಹೊರಗೆ ಬಂದು ಪ್ರಪಂಚದಲ್ಲಿ ಅಗ್ರಗಣ್ಯ ದೇಶ ಆಗಬೇಕೆಂದು ಕನಸು ಕಂಡಿದ್ದರು. ಒಂದು ರೀತಿಯಲ್ಲಿ ಮಲಗಿದೆ ಎಂದು ಅಂದುಕೊಂಡಿದ್ದಂತಹ ಸಮಾಜಕ್ಕೆ ಆ ಸಮಾಜವನ್ನು ಕುರಿತು ಏಳಿ ಎದ್ದೇಳಿ ಎಂದು ಕರೆ ಕೊಟ್ಟಂತಹ ವೀರ ಸನ್ಯಾಸಿಯ ಜನ್ಮ ದಿವಸ. ಈ ಕೇಂದ್ರ ಸರ್ಕಾರ ಈ ಕುರಿತು ಬಹಳ ದೊಡ್ಡ ಕಾರ್ಯಕ್ರಮವನ್ನು ದೇಶದಾದ್ಯಂತ ನಡೆಸಬೇಕೆಂದು ಹೇಳಿದ್ದಾರೆ. ಅದು ತಮಗೂ ಕೂಡ ಗೊತ್ತಿದೆ ಎಂದು ಭಾವಿಸಿದ್ದೇನೆ. ಇಂದು ಯೂತ್ ಡೇ ಎಂದು ಆಚರಿಸಲಾಗುತ್ತಿದೆ. ಇಡೀ ದೇಶದ ಎಲ್ಲಾ ರಾಜ್ಯಗಳೂ ಆ ವೀರ ಸನ್ಯಾಸಿಯ ಜನ್ಮ ದಿನ ಎಂದು ಹೇಳಿ ಆಚರಿಸಲಾಗುತ್ತಿದೆ. ಇಡೀ ದೇಶದ ಎಲ್ಲಾ ರಾಜ್ಯಗಳೂ ಆ ವೀರ ಸನ್ಯಾಸಿಯ ಜನ್ಮ ದಿನ ಎಂದು ಹೇಳಿ ಒಂದು ರೀತಿಯಲ್ಲಿ ಗರ್ವಪಡತಕ್ಕಂತಹ ಒಂದು ದಿವಸ ಅದನ್ನು ನೆನಪು ಮಾಡಿಕೊಳ್ಳುತ್ತಾ ನಮ್ಮ ಸದನವನ್ನು ಪ್ರಾರಂಭ ಮಾಡೋಣ. ಇದಕ್ಕೆ ಎಲ್ಲರೂ ಕೂಡ ಸಹಕಾರವನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಪ್ರಶ್ನೋತ್ತರ ಕಾರ್ಯ ಕಲಾಪವನ್ನು ಪ್ರಾರಂಭ ಮಾಡೋಣ. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ......

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೆ, ನಾನು ಒಂದು ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

**ಶ್ರೀ ಸಿ.ಹೆಚ್.ವಿಜಯಶಂಕರ್:-** ಮಾನ್ಯ ಸಭಾಪತಿಯವರೆ, ತಾವು ಇಂದು ಅಪರೂಪದ ಸಂತನನ್ನು ಅವರ ಅಪರೂಪದ ಒಂದು ವ್ಯಕ್ತಿತ್ವವನ್ನು ಸ್ಮರಣೆ ಮಾಡಿಕೊಂಡಿದ್ದೀರಿ. ಸ್ವಾಮಿ ವಿವೇಕಾನಂದರ ಜನ್ಮದಿನ ಎಂದು ಈ ಸದನದಲ್ಲಿ ಸ್ಮರಣೆ ಮಾಡಿದ್ದೀರಿ. ಅದಕ್ಕೆ ಪೂರಕವಾಗಿ ನಾನು ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ ವಿರೋಧ ಪಕ್ಷದ ನಾಯಕರು (ತಮ್ಮ ಸ್ಥಾನದಲ್ಲಿ ನಿಂತಿದ್ದರು):-** ಮಾನ್ಯ ಸಭಾಪತಿಯವರೆ, ನನಗೂ ಮಾತನಾಡಲು ಒಂದೆರೆಡು ನಿಮಿಷ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ನಾನು ಮೊದಲು ತಮಗೆ ಮಾತನಾಡಲು ಕಾಲಾವಕಾಶವನ್ನು ಕೊಡಬೇಕೆಂದು ಇದ್ದೆ. ಯಾವಾಗಲೂ ವಿರೋಧ ಪಕ್ಷದವರಿಗೆ ಮೊದಲು ಆದ್ಯತೆ ಇರುತ್ತದೆ. ಆದರೆ ಸಭಾ ನಾಯಕರು......

**ಶ್ರೀಮತಿ ಮೋಟಮ್ಮ:-** ನಾನು ತಾವು ಮಾತ್ರ ಅವರ ಬಗ್ಗೆ ಸ್ಮರಿಸಿ ಮಾತನಾಡುತ್ತೀರಿ ಎಂದು ಭಾವಿಸಿದ್ದೆ.

**ಸಭಾಪತಿಯವರು:-** ಇಲ್ಲ. ತಾವು ಮಾತನಾಡಲು ಅವಕಾಶವನ್ನು ಕೇಳಲಿಲ್ಲ. ಅವಕಾಶವನ್ನು ಕೇಳದೆ ಹೇಗೆ ಕೊಡುವುದು? ತಾವು ಅವಕಾಶವನ್ನು ಕೇಳಿದ್ದಿದ್ದರೆ ಕೊಡುತ್ತಿದ್ದೆ. ನೀವು ಈಗ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿದೀರಿ. ಆದ್ದರಿಂದ ತಮಗೂ ಅವಕಾಶ ಕೊಡುತ್ತೇನೆ. ಸರ್ಕಾರದ ಪರವಾಗಿ ಒಬ್ಬರು ಯಾರಾದರೂ ಮಾತನಾಡಲಿ. ವಿರೋಧ ಪಕ್ಷದ ನಾಯಕರಿಗೆ ಒಬ್ಬರಿಗೆ ಅವಕಾಶ ಕೊಡುತ್ತೇನೆ. ದಯವಿಟ್ಟು ಸಹಕರಿಸಿ. ಆದರೆ ಈ ವಿಚಾರ ಇಂದಿನ ಅಜೆಂಡಾದಲ್ಲಿ ಇಲ್ಲ.

**(ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಎಲ್ಲ ಸದಸ್ಯರುಗಳು ತಮ್ಮ ತಮ್ಮ ಸ್ಥಳಗಳಲ್ಲಿ ಆಸೀನರಾದರು)**

**ಸಭಾಪತಿಯವರು:** ಸ್ವಾಮಿ ವಿವೇಕಾನಂದರ ಬಗ್ಗೆ ಎಲ್ಲರಿಗೂ ಗೌರವ ಇದೆ. ಹೆಚ್ಚು ಹೊತ್ತು ಯಾರೂ ಮಾತನಾಡಬೇಡಿ. ಸಭೆಯ ಭಾವನೆಗಳನ್ನು ಎಲ್ಲರೂ ಅರ್ಥ ಮಾಡಿಕೊಳ್ಳಿ. ಎಲ್ಲರೂ ಅವರ ಪ್ರಖರತೆ ಹೋಗಿ ಬಿಡುತ್ತದೆ. ಆದುದರಿಂದ ಮಾತನಾಡುವ ಸದಸ್ಯರು ನಾಲ್ಕು ಮಾತುಗಳಲ್ಲಿ ನಿಮ್ಮ ಭಾವನೆಗಳನ್ನು ವ್ಯಕ್ತ ಮಾಡಿದರೆ ಹೆಚ್ಚು ಜನರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವಾದರೆ ನನಗೂ ಕಷ್ಟವಾಗುತ್ತದೆ. ಒಬ್ಬರೇ ಹೆಚ್ಚು ಹೊತ್ತು ಮಾತನಾಡಿದರೆ ನನಗೆ ಇಕ್ಕಟ್ಟಾಗುತ್ತದೆ.

**ಶ್ರೀ ಸಿ.ಹೆಚ್.ವಿಜಯಶಂಕರ್ ಅರಣ್ಯ ಮತ್ತು ಪರಿಸರ ವಿಜ್ಞಾನ ಹಾಗೂ ಸಣ್ಣ ಕೈಗಾರಿಕಾ ಸಚಿವರು:-** ಮಾನ್ಯ ಸಭಾಪತಿಯವರೆ, ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಸ್ವಾಮಿ ವಿವೇಕಾನಂದರ ಬಗ್ಗೆ ನಮಗೆ ಬಹಳ ಗೌರವ ಇದೆ. ನಾನು ಅವರ ಬಗ್ಗೆ ಕೆಲವು ಮಾತುಗಳನ್ನು ಆಡಬೇಕಂದು ಆಸೆಪಡುತ್ತಿದ್ದೇನೆ. ನಾನು ಎಸ್.ಎಸ್.ಎಲ್.ಸಿ ಓದುವ ಸಂದರ್ಭದಲ್ಲಿ 'ರಾಷ್ಟ್ರಕವಿ ಕುವೆಂಪು' ಅವರ 'ಯಾರಿವನು' ಅನ್ನುವಂತಹ ಒಂದು ಕೃತಿಯ 2-3 ಸಾಲುಗಳನ್ನು ನಾನು ಈ ಸಮಯದಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ರಾಷ್ಟ್ರಕವಿ ಕುವೆಂಪು ಅವರ ತಮ್ಮ ದೃಷ್ಟಿಯಲ್ಲಿ ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ನೆನಪು ಮಾಡಿಕೊಳ್ಳುತ್ತಾ, ವರ್ಣನೆ ಮಾಡುತ್ತಾ ಹೋಗುತ್ತಾರೆ. ಆ ವ್ಯಕ್ತಿತ್ವದ ಇಡೀ ಜೀವನವನ್ನು ಅಧ್ಯಯನ ಮಾಡುತ್ತಾ, ತುಲನೆ ಮಾಡುತ್ತಾ ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು ಅರ್ಥೈಸುತ್ತಾ ಬರೆಯುತ್ತಾ ಹೋಗುತ್ತಾರೆ. ಸ್ವಾಮಿ ವಿವೇಕಾನಂದರು ಈ ರೀತಿ ಹೇಳುತ್ತಾ ಹೋಗುತ್ತಾರೆ. **"ದೀನರು ಎನ್ನ ದೇವರು, ದರಿದ್ರರು ಎನ್ನ ದೇವರು, ಪಾಪಿಗಳು ಎನ್ನ ದೇವರು ಅವರ ಮುಕ್ತಿಗಾಗಿ ಹಲವು ಜನ್ಮಗಳನ್ನು ಎತ್ತಿ ಬರುವೆ. ನನ್ನ ಆತ್ಮ ಕಲ್ಯಾಣ, ಕಿಂಚಿತ ಸ್ವಾರ್ಥತೆಯೇ ದೂರ ಸರಿ ದೂರ ಸರಿ"** ಎಂದು ಹೇಳುತ್ತಾರೆ. ಮತ್ತೆ ಸ್ವಾಮಿ ವಿವೇಕಾನಂದರ ಮುಂದುವರಿದು **"ಮನ್ನಿಸು ತಾಯೆ ಮನ್ನಿಸು ಈ ನಿನ್ನ ಮಕ್ಕಳ ಪಾಪವನ್ನು ಮನ್ನಿಸು, ಅನಂತಳಾದ ನಿನ್ನಲ್ಲಿ ಬಗೆಗಳನ್ನು ಬಗೆದು ಕೆಟ್ಟ, ಹಲವು ಗೊಡ್ಡು ಸಂಪ್ರದಾಯಗಳನ್ನು ಧರ್ಮವೆಂದು ನಂಬಿ ಕೆಟ್ಟ ಈ ನಿನ್ನ ಮಕ್ಕಳ ಪಾಪವನ್ನು**

**ಮನ್ನಿಸು ತಾಯೆ, ಮನ್ನಿಸು"** ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರ ಇನ್ನೊಂದು ಸಾಲನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಸ್ವಾಮಿ ವಿವೇಕಾನಂದರು ಮುಂದುವರೆದು ಈ ರೀತಿ ಹೇಳುತ್ತಾರೆ. **"ನೀ ನನ್ನ ಜೊತೆಗಿರಲು ಜಗವೆಲ್ಲ ಜೊತೆಗಿರಲು ಜಗವೆಲ್ಲ ಎದುರಾಗಿ ಇರಲಿ ಭಯವೇನು, ನೀನೊಬ್ಬ ನನ್ನ ಜೊತೆಗಿಲ್ಲದಿರೆ ಜಗವೆಲ್ಲ ಜೊತೆ ಇದ್ದರೂ ಸುಖವೇನು ಸುಖವೇನು"** ಎಂದು ಹೇಳುತ್ತಾರೆ. ಭರತ ಭೂಮಿಯ ಬಗ್ಗೆ ಬಹಳ ಅಪರೂಪದ ಕನಸನ್ನು ಕಂಡು ಆ ರೀತಿಯಲ್ಲಿ ಬದುಕನ್ನು ಇಲ್ಲಿ ರೂಪಿಸಬೇಕೆಂದು ಕನಸನ್ನು ಕಂಡವರು ಸ್ವಾಮಿ ವಿವೇಕಾನಂದರು, ರಾಷ್ಟ್ರದ ಯುವಕರನ್ನು ರಾಷ್ಟ್ರದ ಆಸ್ತಿಯನ್ನಾಗಿ ರಾಷ್ಟ್ರಮುಖಿಯಾಗಿ ಮಾಡಬೇಕೆಂಬ ಕನಸನ್ನು ಕಂಡಿದ್ದರು. ಈ ದೇಶದ ಘನತೆ ಗೌರವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವಾಮಿ ವಿವೇಕಾನಂದರು ಎತ್ತಿ ಹಿಡಿದಿದ್ದಾರೆ. ಒಂದು ಅಪರೂಪದ ಸಂದೇಶವನ್ನು ಈ ನಾಡಿಗೆ ಈ ದೇಶಕ್ಕೆ ಕೊಟ್ಟಂತಹವರು. ಸ್ವಾಮಿ ವಿವೇಕಾನಂದರು ಈ ದೇಶದ ಸನಾತನ ಧರ್ಮದ ಸಾತ್ವಿಕತೆಯನ್ನು, ಸ್ವಂತಿಕೆಯನ್ನು ಈ ಬದುಕಿನ ಇತಿಹಾಸವನ್ನು ಎತ್ತಿ ಹಿಡಿದು ಭಾರತಕ್ಕೆ ಬಹಳ ಸ್ಪಷ್ಟ ಮಾರ್ಗದರ್ಶನವನ್ನು ಮಾಡಿದರು. ಅಂತಹ ಒಂದು ವ್ಯಕ್ತಿತ್ವವನ್ನು ಸ್ವಾಮಿ ವಿವೇಕಾನಂದರವರು ಹೊಂದಿದ್ದರು. ಇವತ್ತಿಗೂ ಅವರು ವಿಚಾರಗಳನ್ನು ಪ್ರಸ್ತುತವಾಗಿದೆ. ನಮ್ಮ ಯುವ ಶಕ್ತಿಗೆ ಅದು ಒಂದು ಮಾರ್ಗದರ್ಶನವಾಗಿದೆ ಇದೆ. ಅಂತಹ ಮಹನೀಯರ ಸೇವೆಯನ್ನು ಇಂದು ಬೆಳಿಗ್ಗೆ ಇಲ್ಲಿ ಸ್ಮರಣೆ ಮಾಡಿ ನನ್ನ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟ ಈ ಸದನಕ್ಕೆ ಮತ್ತು ತಮಗೆ ನಾನು ಆಭಾರಿಯಾಗಿದ್ದೇನೆ.

**ಶ್ರೀಮತಿ ಮೋಟಮ್ಮ ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಯವರೆ, ಇವತ್ತು ಸ್ವಾಮಿ ವಿವೇಕಾನಂದರು ಹುಟ್ಟಿದ ದಿನ. ನಮಗೆಲ್ಲರಿಗೂ ಒಂದು ರೀತಿಯಲ್ಲಿ ಹಬ್ಬ ಇದ್ದಂತೆ ಇದೆ. ನಾನು ನನ್ನ ವಿದ್ಯಾರ್ಥಿ ಜೀವನದಲ್ಲಿ ಸ್ವಾಮಿ ವಿವೇಕಾನಂದರವರು ಸಣ್ಣ ವಯಸ್ಸಿನವರಾಗಿದ್ದಾಗ ಅವರ ಬಾಲ್ಯವನ್ನು ಹೇಗೆ ಕಳೆದರು ಎಂದು ಓದಿದ್ದೇನೆ. ಅವರು ಸಣ್ಣವರಾಗಿದ್ದಾಗ ಬಹಳ ಹಠಮಾರಿತನವನ್ನು

ತುಂಟಾಟವನ್ನು ಆಡಿ ಯಾವ ರೀತಿ ಅವರ ತಾಯಿಗೆ ತೊಂದರೆ ತೊಂದರೆಗಳನ್ನು ಕೊಡುತ್ತಿದ್ದರು ಎಂಬುದನ್ನು ಓದಿ ತಿಳಿದುಕೊಂಡಿದ್ದೇನೆ. ಅವರ ತಾಯಿ ಇವರ ಕೋಪವನ್ನು ತಣಿಸುವುದಕ್ಕೆ ಒಂದು ಕೊಡದ ನೀರನ್ನು ಅವರ ತಲೆಯ ಮೇಲೆ ಸುರಿಯುತ್ತಿದ್ದರು ಎಂದು ಓದಿದ್ದೇನೆ. ಸ್ವಾಮಿ ವಿವೇಕಾನಂದರವರು ತಮ್ಮ ಬಾಲ್ಯದಲ್ಲಿ ಮರವನ್ನು ಹತ್ತಿದರೆ ಕೆಳಕ್ಕೆ ಇಳಿಯುತ್ತಿರಲಿಲ್ಲ. ಇದೆಲ್ಲವನ್ನೂ ಓದಿದ್ದೇನೆ. ನಂತರ ಕೆಲವು ದಿನಗಳಲ್ಲಿ ದೇವರು ಎಲ್ಲಿ ಇದ್ದಾನೆ ಎಂದು ಪ್ರಶ್ನೆ ಮಾಡಿಕೊಂಡು ದೇವರ ಹುಡುಕಾಟಕ್ಕೆ ಹೊರಟಿದ್ದನ್ನು ಯಾರೂ ಮೆರೆಯುವಂತಿಲ್ಲ. ರಾಮಕೃಷ್ಣ ಪರಮ ಹಂಸರವರ ಆಶ್ರಮದಲ್ಲಿ ಪ್ರವೇಶ ಮಾಡಿ ಅಲ್ಲಿ ಅವರಿಗೆ ನೀವು ದೇವರನ್ನು ನೋಡಿದ್ದೀರಾ ಎಂದು ಪ್ರಶ್ನೆ ಮಾಡಿದಾಗ, ಅವರು ನಾನು ದೇವರನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ಅದಕ್ಕೆ ಸ್ವಾಮಿ ವಿವೇಕಾನಂದರವರು ಹಾಗಾದರೆ ನನಗೆ ಏಕೆ ಈ ದೇವರು ಕಾಣುವುದಿಲ್ಲ ನನಗೂ ಕೂಡ ದೇವರನ್ನು ತೋರಿಸಿ ಎಂದು ಕೇಳುತ್ತಾರೆ. ಆ ವಯಸ್ಸಿನಲ್ಲಿ ಅವರ ಒಂದು ದಿಟ್ಟತನ ಇದೆಯಲ್ಲ ಅದನ್ನು ನಾವು ನಿಜವಾಗಲೂ ಮೆಚ್ಚಬೇಕಾಗುತ್ತದೆ. ರಾಮಕೃಷ್ಣ ಪರಮ ಹಂಸರವರು ಸ್ವಾಮಿ ವಿವೇಕಾನಂದರವರಿಗೆ ನೀನು ದೇವರನ್ನು ನೋಡಬೇಕಾದರೆ ಕಾಳಿ ಮಾತೆಯ ಬಳಿ ಹೋಗಿ ಪ್ರಾರ್ಥನೆ ಮಾಡು ಆಕೆ ನಿನಗೆ ದರ್ಶನವನ್ನು ಕರುಣಿಸುತ್ತಾಳೆ ಎಂದು ಹೇಳುತ್ತಾರೆ. ಅದರಂತೆ ಸ್ವಾಮಿ ವಿವೇಕಾನಂದರವರು ಕಾಳಿ ಗುಡಿಗೆ 2–3 ಬಾರಿ ಹೋಗಿ ಪ್ರಾರ್ಥನೆಯನ್ನು ಮಾಡಿದಾಗಲೂ ದೇವರು ಕಾಣಿಸದೆ ಇದ್ದಾಗ ಅವರು ಮತ್ತೆ ರಾಮಕೃಷ್ಣ ಪರಮ ಹಂಸರವರು ಬಳಿಗೆ ಬಂದು ನೀವು ಸುಳ್ಳು ಹೇಳುತ್ತೀರಿ ದೇವಿ ನನಗೆ ಪ್ರತ್ಯಕ್ಷವಾಗಲಿಲ್ಲ. ನಿಮಗೂ ದೇವರು ಕಂಡಿಲ್ಲ. ನನಗೂ ದೇವರನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾರೆ. ಆಗ ರಾಮಕೃಷ್ಣ ಪರಮ ಹಂಸರವರು ಇನ್ನೊಮ್ಮೆ ಹೋಗಿ ಭಕ್ತಿಯಿಂದ ಪ್ರಾರ್ಥನೆ ಮಾಡು ಎಂದು ಸ್ವಾಮಿ ವಿವೇಕಾನಂದರವರಿಗೆ ಹೇಳಿದಾಗ ಅದರಂತೆ ಅವರು ಕಾಳಿ ಹತ್ತಿರ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಆ ಪ್ರಾರ್ಥನೆಗೆ ಮೆಚ್ಚಿ ದೇವಿ ಪ್ರತ್ಯಕ್ಷಳಾಗುತ್ತಾಳೆ. ಆ ದೇವಿಯ ಬಳಿ ಏನು ಕೇಳಬೇಕೆಂದು ಗೊತ್ತಾಗದೆ

ವಾಪಸ್ ಬರುವುದು. ಮತ್ತೆ ಪರಮ ಹಂಸರವರ ಹತ್ತಿರ ಬಂದು ನಮ್ಮ ಮನೆಯಲ್ಲಿ ಬಹಳ ಬಡತನ ಇದೆ ಎಂದು ಹೇಳಿದಾಗ ಅವರು ನೀನು ಹೋಗಿ ದೇವಿಯ ಬಳಿಯಲ್ಲಿ ಕೇಳು ಎಂದು ಹೇಳಿದಾಗ ಅವರು ದೇವರ ಹತ್ತಿರ ಎರಡನೆಯ ಬಾರಿ ಹೋದಾಗ ಯಾವುದೇ ವರವನ್ನು ಕೇಳುವುದಿಲ್ಲ. ಆ ದೇವಿಯ ದರ್ಶನಕ್ಕೆ ಮಾರು ಹೋಗಿ ಆಕೆಯ ಹತ್ತಿರ ಏನು ಕೇಳುವುದಿಲ್ಲ. ಆ ದೇವಿಯ ದರ್ಶನವಾದ ಮೇಲೆ ಅಲ್ಲಿಂದ ವಾಪಸ್ ಬಂದು ರಾಮಕೃಷ್ಣ ಪರಮಹಂಸರವರ ಶಿಷ್ಯರಾಗಿ ಮುಂದೆ ಅವರ ಕೆಲವು ತತ್ವ ಸಿದ್ಧಾಂತಗಳನ್ನು ಪ್ರಚಾರ ಮಾಡಿಕೊಂಡು ಹೊರಟರು. ನಮ್ಮ ರಾಷ್ಟ್ರೀಯ ಭಾವನೆಗಳ ಜೊತೆಗೆ ದೇಶದ ಬಗ್ಗೆ ಗೌರವ ಪ್ರೀತ್ಯಾದರಗಳನ್ನು ಇಟ್ಟುಕೊಳ್ಳಬೇಕೆಂದು ಸಾರಿದರು. ಹೋರದೇಶಗಳಿಗೆ ಹೋಗಿ ತಮ್ಮ ಭಾಷಣವನ್ನು ಮಾಡಿದ್ದಾರೆ. ಸ್ವಾಮಿ ವಿವೇಕಾನಂದರವರು ಚಿಕಾಗೊದಲ್ಲೆ ತಮ್ಮ ಮೊಟ್ಟಮೊದಲ ಭಾಷಣವನ್ನು ಮಾಡಿದರು. ಅಲ್ಲಿನ ಜನ ಸಮೂಹವನ್ನು ಉದ್ದೇಶಿಸಿ ಅಣ್ಣ ತಮ್ಮಂದಿರೆ, ಅಕ್ಕತಂಗಿಯರೆ ಎಂದು ಭಾಷಣವನ್ನು ಮಾಡಿದಾಗ ಅಲ್ಲಿನ ಜನರ ಮನಸ್ಸಿನಲ್ಲಿ ಬಹಳ ಬದಲಾವಣೆ ಆಯಿತು. ನಮ್ಮ ಭಾರತೀಯರಾಗಿ ಅಲ್ಲಿ ಹೋಗಿ ಅವರುಗಳನ್ನು ಕುರಿತು ಅಣ್ಣ ತಮ್ಮಂದಿರೆ, ಅಕ್ಕತಂಗಿಯರೆ ಎಂದು ಅವರಿಗೆ ಉದ್ದೇಶಿಸಿ ಮಾತನಾಡುತ್ತಾ ಗೌರವಾಭಿಮಾನವನ್ನು ತೋರಿಸಿದರು. ಇದರಿಂದಾಗಿ ಆ ಜನಗಳಲ್ಲಿ ಆದ ಮನೋಬದಲಾವಣೆ ಅವರಿಗೆ ಸ್ವಾಮಿ ವಿವೇಕಾನಂದರ ಬಗ್ಗೆ ಮೂಡಿ ಬಂದ ಗೌರವ ಇವೆಲ್ಲವನ್ನು ನಾವು ಮರೆಯುವಂತಿಲ್ಲ. ಇದು ನಮ್ಮ ದೇಶದ ಇತಿಹಾಸವನ್ನು ಸೃಷ್ಟಿ ಮಾಡಿತು ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಅವರು ಹೊರದೇಶಗಳಿಗೆ ಹೋದಾಗ ಅಲ್ಲಿ ಐಷಾರಾಮಿ ಹೋಟೆಲುಗಳಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದಾಗ ಅಲ್ಲಿ ಉಳಿದುಕೊಂಡಿದ್ದಾಗಲೂ ನಮ್ಮ ದೇಶದ ಬಡವರ ಬಗ್ಗೆ ಯೋಚನೆ ಮಾಡುತ್ತಿದ್ದರು. ಅವರು ಹಾಸಿಗೆಯ ಮೇಲೆ ಮಲಗುತ್ತಿರಲಿಲ್ಲ, ನೆಲದ ಮೇಲೆಯೇ ಮಲಗುತ್ತಿದ್ದರು. ನನ್ನ ದೇಶದ ಎಲ್ಲ ಜನರು ಬಡತನದಲ್ಲಿ ಇದ್ದಾರೆ, ಸಂಕಷ್ಟದಲ್ಲಿದ್ದಾರೆ, ನೋವಿನಲ್ಲಿದ್ದಾರೆ. ಹೀಗಿರುವಾಗ ನಾನು

ಐಷಾರಾಮಿ ಹೋಟೆಲಿನಲ್ಲಿನ ಮಂಚದ ಮೇಲೆ ಏಕೆ ಮಲಗಬೇಕು ಎಂದು ಹೇಳಿ ನೆಲದ ಮೇಲೆ ಮಲಗುತ್ತಿದ್ದರು.

**11.30 ಗಂಟೆಗೆ**

ಆದರೆ ನಾವು ಇವೊತ್ತು ಏನಾಗಿದೇವೆ? ಯಾವುದಕ್ಕೋಸ್ಕರ ಚಿಂತನೆ ಮಾಡುತ್ತೇವೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಆ ಟಿನ್ ಶೆಡನಲ್ಲಿ ಸಾವು ನೋವಿನ ಸಂಕಟವನ್ನು ಅನುಭವಿಸುತ್ತ ನಮ್ಮ ಎಷ್ಟು ಜನ ನಿರಾಶ್ರಿತರು ಸಂಕಟದಲ್ಲಿದ್ದಾರೆಂದು ನಾವು ನೋಡಬೇಕು. ನಾವು ಇಲ್ಲಿಯೇ ಇದ್ದುಕೊಂಡು ಅವರ ಬಗ್ಗೆ ಎಷ್ಟರಮಟ್ಟಿಗೆ ಗಮನಹರಿಸುತ್ತಿದ್ದೇವೆಂದು ನಾವು ನಮ್ಮ ಅಂತರಂಗವನ್ನು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ನಮ್ಮ ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ಮಾರ್ಗದರ್ಶನವನ್ನು ಕೊಟ್ಟಿದ್ದಾರೆ. ಅವರ ಆದರ್ಶ, ಮಾರ್ಗದರ್ಶನವನ್ನು ನಾವು ಹಾಗೂ ಸಮಾಜ ಬದುಕಿನಲ್ಲಿ ಅಳವಡಿಸಿಕೊಂಡರೆ ಬಹಳಷ್ಟು ಸುಧಾರಣೆ ಮಾಡಲಿಕ್ಕೆ, ಗೌರವವನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕು. ಕೇವಲ ಸ್ಮರಣೆ ಆಚರಣೆಯಲ್ಲಿ ಅರ್ಥ ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ ಹಾಗೂ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

**ಶ್ರೀ ಗೋ.ಮಧುಸೂದನ್ ಪದವೀಧರರ ಕ್ಷೇತ್ರ:** ಮಾನ್ಯ ಸಭಾಪತಿ ಯವರೆ, ಸ್ವಾಮಿ ವಿವೇಕಾನಂದರು ಅತ್ಯಂತ ಕಡಿಮೆ ಅವಧಿಯವರಿಗೆ ಬದುಕಿದಂಥ ಒಬ್ಬ ರಾಷ್ಟ್ರ ಭಕ್ತರು. ವಿವೇಕಾನಂದರನ್ನು ಈ ದೇಶ ಒಂದು ಸಂಗತಿಗಾಗಿ ಯಾವಾಗಲೂ ನೆನಪಿಸಬೇಕಾದಂಥದ್ದಿದೆ. ಅದೇನೆಂದರೆ ಈ ದೇಶ ಇಂಗ್ಲೀಷರ ದಾಸ್ಯದಲ್ಲಿದ್ದಾಗ ಅವರು ಜನ್ಮ ತಳೆದರು. ನಾವು ದಾಸ್ಯದಲ್ಲಿದ್ದಾಗಲೇ ಅವರ ದೇಹ ದಹನವಾಯಿತು. ಈ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸ್ವಾಮಿ ವಿವೇಕಾನಂದರ ಬಹಳ ದೊಡ್ಡ ಕೊಡುಗೆ ಇದೆ. ಯಾರೆಲ್ಲಾ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದರು ಅವರು ಗಾಂಧೀಜಿಯವರ ನೇತೃತ್ವದಲ್ಲಿ ಶಾಂತಿ ಮಂತ್ರವನ್ನು ನೆನಸಿರಬಹುದು,

ಅಥವಾ ಭಗತ್‌ಸಿಂಗ್, ರಾಜಗುರು, ಸುಖದೇವ್, ಖುದಿರಾಂ ಬೋಸ್ ಇವರ ನೇತೃತ್ವದಲ್ಲಿ ಬಾಂಬಗಳನ್ನು ಹಿಡಿದಂಥವರಿರಬಹುದು. ಎಲ್ಲರೂ ಸಹ ಸ್ವಾಮಿ ವಿವೇಕಾನಂದರಿಂದ ಒಂದಲ್ಲ ಒಂದು ರೀತಿಯಲ್ಲಿ ಸ್ಫೂರ್ತಿಯನ್ನು ಪಡೆದಂಥವರು. ಒಂದು ಕಾಲದಲ್ಲಿ ಒಂದು ಮಾತು ಇತ್ತು. What Bengal does today, India wil not do it tomorrow ಎಂದು ಹೇಳುತ್ತಿದ್ದರು. ಇಂದು ಆ ಬಂಗಾಳ ಪ್ರಾಂತ ಏನು ಮಾಡುತ್ತದೆ ನಾಳೆ ಭಾರತ ಅದನ್ನು ಮಾಡುತ್ತದೆ ಎನ್ನುವಂಥ ಒಂದು ಮಾತನ್ನು ಹೇಳಿದ್ದರು. ಅದಕ್ಕೆ ಕಾರಣ ಸ್ವಾಮಿ ವಿವೇಕಾನಂದರಾದಿಯಾಗಿ ಅಲ್ಲಿ ಹುಟ್ಟಿದಂಥ ಅನೇಕ ಮಹಾಪುರುಷರು, ಕ್ರಾಂತಿಕಾರರು, ಮಹಾಪುರುಷರು ಸುಭಾಷಚಂದ್ರ ಬೋಸ್ ಇರಬಹುದು, ಅರವಿಂದ್ ಘೋಷ್ ಇರಬಹುದು, ಆ ಮಾತಿಗೆ ಅನೇಕ ಜನರು ಕಾರಣರಿದ್ದಾರೆ. ಸ್ವಾಮಿ ವಿವೇಕಾನಂದರನ್ನು ಅವರು ಹೇಗೆ ಪ್ರಪಂಚದ ಎಲ್ಲಾ ಧರ್ಮಗಳಲ್ಲಿ ಹಿಂದು ಧರ್ಮಶ್ರೇಷ್ಠ ಎಂದು ತೋರಿಸಿದರೋ ಅದೇ ರೀತಿ ಹಿಂದು ಧರ್ಮದಲ್ಲಿರುವಂಥ ಕುರೀತಿಗಳು, ಕುನೀತಿಗಳು ಇದರ ಬಗ್ಗೆಯೂ ಬಹುಶಃ ಪ್ರಪಂಚದ ಯಾರೂ ಟೀಕೆ ಮಾಡಿದರು. ಅವರು ವಿದೇಶಕ್ಕೆ ಹೋಗಬೇಕೆನ್ನುವಂಥ ಸಂದರ್ಭದಲ್ಲಿ ಕೇರಳದಿಂದ ಹೋಗಬೇಕಾಯಿತು ಆವೊತ್ತು ಕೇರಳದಲ್ಲಿದ್ದಂಥ ಸ್ಥಿತಿ ಏನೆಂದರೆ ಬ್ರಾಹ್ಮಣರು ಅಥವಾ ಮೇಲ್ವರ್ಗದ ಜನ ವಾಸ ಮಾಡುತ್ತಿರುವಂಥ ಕುರೀತಿಗಳ, ಕುನೀತಿಗಳು ಇದರ ಬಗ್ಗೆಯೂ ಬಹುಶಃ ಪ್ರಪಂಚದ ಯಾರೂ ಟೀಕೆ ಮಾಡದೇ ಇರುವಷ್ಟು ಕಠಿಣವಾದಂಥ ಶಬ್ದಗಳಲ್ಲಿ ಹಿಂದು ಧರ್ಮವನ್ನು ಟೀಕೆ ಮಾಡಿದರು. ಅವರು ವಿದೇಶಕ್ಕೆ ಹೋಗಬೇಕೆನ್ನುವಂಥ ಸಂದರ್ಭದಲ್ಲಿ ಕೇರಳದಿಂದ ಹೋಗಬೇಕಾಯಿತು. ಆವೊತ್ತು ಕೇರಳದಲ್ಲಿದ್ದಂಥ ಸ್ಥಿತಿ ಏನೆಂದರೆ ಬ್ರಾಹ್ಮಣರು ಅಥವಾ ಮೇಲ್ವರ್ಗದ ಜನ ವಾಸ ಮಾಡುತ್ತಿರುವಂಥ ಕೇರಿಗಳಲ್ಲಿ ದಲಿತರು ಓಡಾಡಬೇಕಾದರೆ ಚಪ್ಪಲಿ ಹಾಕಿಕೊಂಡು ಓಡಾಡುವಂತಿರಲಿಲ್ಲ. ಚಪ್ಪಲಿಯನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುವಂಥ ಸ್ಥಿತಿ ಇತ್ತು. ಇದನ್ನು ಕಂಡು ಅವರು ಕೇರಳದ ಬಗ್ಗೆ it is a lunatic asylum ಎಂದು ಹೇಳಿದರು. ಕೇರಳ ಹುಚ್ಚರ ಆಸ್ಪತ್ರೆ ಎಂದು ಹೇಳಿದರು. ಅಷ್ಟರಮಟ್ಟಿಗೆ ಉಗ್ರವಾದಂಥ ಟೀಕೆ ಮಾಡಿದರು.

ಅವರು ಈ ದೇಶದ ಹಿಂದುಗಳಿಗೆ ಆಹ್ವಾನ ಕೊಟ್ಟರು. ನಿಮ್ಮೆಲ್ಲಾ 33 ಕೋಟಿ ದೇವ–ದೇವತೆಗಳನ್ನು ನೀವು ಹಗ್ಗದಲ್ಲಿ ಕಟ್ಟಿ ಸಮುದ್ರಕ್ಕೆ ಎಸೆಯಿರಿ, ಇವೊತ್ತು ಈ ದೇಶಕ್ಕೆ ಬೇಕಾಗಿರುವಂಥದ್ದು ದೀನ ದೇವೋಭವಃ, ದಲಿತ ದೇವೋಭವಃ, ದರಿದ್ರ ದೇವೋಭವಃ, ಈ ದೇಶದ ದೀನ ದಲಿತರು ಯಾರು ಇದ್ದಾರೆ ಅವರು ನಮಗೆ ದೇವರಾಗಬೇಕು, ಅವರು ನಮಗೆ ಆರಾಧ್ಯರಾಗಬೇಕೆಂದು ಹೇಳಿದ್ದಾರೆ. ಅಂತ್ಯೋದಯದ ಕಲ್ಪನೆ ಕೊಟ್ಟಂಥವರು ಸ್ವಾಮಿ ವಿವೇಕಾನಂದರು. ನಮ್ಮ ಸದನದಲ್ಲಿ ಒಂದು ಚರ್ಚೆ ನಡೆಯಿತು, ಕೂಪ ಮಂಡೂಕ ಎಂದು. ಈ ಕಥೆಯನ್ನು ಪ್ರಪಂಚಕ್ಕೆ ಹೇಳಿದಂಥವರು ಸ್ವಾಮಿ ವಿವೇಕಾನಂದರು. 1893 ರ ಅವರ ಚಿಕಾಗೋ ಭಾಷಣದ ಬಗ್ಗೆ ಸಹೋದರಿ ಮೋಟಮ್ಮನವರು ಉಲ್ಲೇಖ ಮಾಡಿದರು. ಅವರು ಪ್ರಪಂಚದಲ್ಲಿ ಆವೊತ್ತು ವಿಶ್ವಧರ್ಮ ಸಮ್ಮೇಳನ ಮಾಡಿದ್ದರು, ವಿಶ್ವದ ಎಲ್ಲಾ ಧರ್ಮಗಳ ಬಗ್ಗೆ ತಿಳಿದುಕೊಳ್ಳಬೇಕು ಎನ್ನುವಂಥ ಆಸಕ್ತಿಯಿಂದ ಅಮೇರಿಕಾದಿಂದ ಮಾಡಿದ್ದಲ್ಲ. ಅದು ಪ್ರಪಂಚದ ಎಲ್ಲಾ ಧರ್ಮಗಳಿಗಿಂತ ಕ್ರೈಸ್ತ ಧರ್ಮ ಮೇಲಿದೆ ಎಂದು ಹೇಳತಕ್ಕಂಥ ಒಂದು ಸಭೆ ಅದು. ಅಲ್ಲಿ ಮಾತನಾಡಲು ಸ್ವಾಮಿ ವಿವೇಕಾನಂದರಿಗೆ ಮೊದಲನೇ ದಿವಸ ಅವಕಾಶ ಇರಲಿಲ್ಲ. ಎರಡನೇ ದಿವಸ ಅವಕಾಶ ಇರಲಿಲ್ಲ. ಆಮೇಲೆ ಅವಕಾಶ ಸಿಕ್ಕಾಗ ಸ್ವಾಮಿ ವಿವೇಕಾನಂದರು ಹೇಳಿದಂಥ ಮೊದಲನೆ ಕಥೆ ಕೂಪ ಮಂಡೂಕದ ಕಥೆ. ಊರಿನಲ್ಲಿರುವಂಥ ಒಂದು ಬಾವಿಗೆ ಸಮುದ್ರದಲ್ಲಿರುವಂಥ ಒಂದು ಕಪ್ಪೆ ಬಂದು ಸೇರಿಕೊಂಡಿತು. ಆ ಊರಿನ ಬಾವಿಯಲ್ಲಿರುವಂಥ ಕಪ್ಪೆ ಸಮುದ್ರದಲ್ಲಿರುವಂಥ ಕಪ್ಪೆಯನ್ನು ಸಮುದ್ರ ಎಷ್ಟು ದೊಡ್ಡದು ಎಂದು ಕೇಳಿತು. ಸಮುದ್ರದ ಕಪ್ಪೆ ಸಮುದ್ರ ತುಂಬಾ ದೊಡ್ಡದು ಎಂದು ಹೇಳಿತು. ಊರಿನಲ್ಲಿರುವಂಥ ಬಾವಿಯಲ್ಲಿರುವ ಕಪ್ಪೆ ಇಷ್ಟು ದೊಡ್ಡದಾ ಎಂದು ತನ್ನ ಕೈಯನ್ನು ಅಗಲ ಮಾಡಿ ತೋರಿಸಿತು. ಆಗ ಸಮುದ್ರದ ಕಪ್ಪೆ ಇಲ್ಲ ತುಂಬಾ ದೊಡ್ಡದು ಎಂದು ಹೇಳಿತು. ಊರಿನ ಬಾವಿಯಲ್ಲಿರುವ ಕಪ್ಪೆ ಇಲ್ಲಿಂದ ಅಲ್ಲಿಗೆ ಹಾರಿ ಇಷ್ಟು ದೊಡ್ಡದಾ ಎಂದು ಕೇಳಿತು. ಆಗ ಸಮುದ್ರದ ಕಪ್ಪೆ ಇಲ್ಲ ತುಂಬಾ ದೊಡ್ಡದು ಎಂದು ಹೇಳಿತು. ಆಗ ಊರಿನ ಬಾವಿಯ ಕಪ್ಪೆ ದಮ್ ಕಟ್ಟಿ ಈ ತುದಿಯಿಂದ ಆ ತುದಿಗೆ ಹಾರಿ ಇದಕ್ಕಿಂತ ನಿನ್ನ ಸಮುದ್ರ ದೊಡ್ಡದಿರಲಿಕ್ಕೆ

ಸಾಧ್ಯವಿಲ್ಲ ಎಂದು ಹೇಳಿತು. ಸ್ವಾಮಿ ವಿವೇಕಾನಂದರು ತಮ್ಮ ಚಿಕಾಗೋ ಭಾಷಣದಲ್ಲಿ ಈ ಕೂಪ ಮಂಡೂಕದ ಕಥೆಯನ್ನು ಪ್ರಪಂಚಕ್ಕೆ ಹೇಳಿ ತೋರಿಸಿದಂಥವರು. ಅಷ್ಟೇ ಅಲ್ಲ ಅವರು ಆ ನಂತರದ ಭಾರತದ ಉಪನಿಷತ್ತು, ಭಾರತದ ವೇದ, ಭಾರತದ ಗೀತೆ, ಭಾರತದ ರಾಮಾಯಣ, ಮಹಾಭಾರತ ಎಲ್ಲವನ್ನು ತೆಗೆದುಕೊಂಡು ಆ ಋಷಿಗಳ ಸಂತಾನ ನಾವು ಎಂದು ಹೇಳಿ ಋಷಿಗಳ ಪರವಾಗಿ ಅವರು ಪ್ರಪಂಚದ ಎಲ್ಲರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸಿದಂಥವರು. ಅಂತಹ ಸ್ವಾಮಿ ವಿವೇಕಾನಂದರು ನನಗೆ ಯಾವೊತ್ತು ಪೂಜ್ಯರು, ಅವರು ಯಾವೊತ್ತು ಸಹ ಈ ದೇಶದ ಯುವಕರಿಗೆ, ಈ ದೇಶದ ಎಲ್ಲಾ ಜನರಿಗೆ ಆದರ್ಶ. ಇವೊತ್ತು ಇಡೀ ದೇಶದಲ್ಲಿ, ಪ್ರಪಂಚದಲ್ಲಿ ಮತಾಂತರದ ಚರ್ಚೆ ಬರುತ್ತಿದೆ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕೆಂದರೆ ಸ್ವಾಮಿ ವಿವೇಕಾನಂದರ ಜೊತೆಯಲ್ಲಿ ಸಿಸ್ಟರ್ ನಿವೇದಿತಾ ಎಂಬ ಒಬ್ಬ ವಿದೇಶಿ ಹೆಣ್ಣುಮಗಳು ಭಾರತಕ್ಕೆ ಬರುತ್ತಾಳೆ. ಅವರು ಬಂದಂಥ ಸಮಯದಲ್ಲಿ ಅನೇಕ ಜನ ನೀವು ಸಿಸ್ಟರ್ ನಿವೇದಿತಾರವರನ್ನು ಹಿಂದು ಧರ್ಮಕ್ಕೆ ಮತಾಂತರ ಮಾಡಿದ್ದೀರಾ ಎಂದು ಕೇಳುತ್ತಾರೆ. ಆಗ ಸ್ವಾಮಿ ವಿವೇಕಾನಂದರು ನಾನು ಸಿಸ್ಟರ್ ನಿವೇದಿತಾರವರನ್ನು ಮತಾಂತರ ಮಾಡಿಲ್ಲ ಎಂದು ಹೊಸ ವ್ಯಾಖ್ಯಾನವನ್ನು ಕೊಟ್ಟರು. You can be a very good Hindu being a very good Christian ಎನ್ನುವಂಥ ಮಾತನ್ನು ಸ್ವಾಮಿ ವಿವೇಕಾನಂದರು ಹೇಳಿದರು. ಬಹುಶಃ ಪ್ರಪಂಚದಲ್ಲಿ ಮತಾಂತರ ಮಾಡುತ್ತಿರುವಂಥ ಅನೇಕರಿಗೆ ಇದು ಚಾಟಿ ಏಟಾಗಬೇಕಾಗಿದೆ. ಇದು ಆದರ್ಶ ಆಗಬೇಕಾಗಿದೆ. ಹಿಂದು ಧರ್ಮ ಯಾವ ರೀತಿ ಬದುಕಿದೆ ಎಂದು ಪ್ರಪಂಚಕ್ಕೆ ತೋರಿಸಿದಂತಹ ಮಹಾನ್ ಸಂತರು ಸ್ವಾಮಿ ವಿವೇಕಾನಂದರು. ಇನ್ನು ಎರಡು ವರ್ಷಕ್ಕೆ ಸ್ವಾಮಿ ವಿವೇಕಾನಂದರು ಜನ್ಮ ತಳೆದು 150 ವರ್ಷ ಆಗುತ್ತಿದೆ. ಈ ಸಮಯದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ದಯಮಾಡಿ ತಾವು ಒಂದು ಮಾತನ್ನು ಸರ್ಕಾರಕ್ಕೆ ಹೇಳಬೇಕು. ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರ 150 ನೇ ಜನ್ಮ ದಿನೋತ್ಸವ ಏನಾಗುವುದಿದೆ ಆ ಸಂದರ್ಭದಲ್ಲಿ ಇಡೀ ಶಾಲಾ ಕಾಲೇಜುಗಳಲ್ಲಿ

ಸ್ವಾಮಿ ವಿವೇಕಾನಂದರ ಒಂದು ಚರ್ಚೆಯಾಗಬೇಕು, ಪಠ್ಯಕ್ರಮಕ್ಕೆ ಸ್ವಾಮಿ ವಿವೇಕಾನಂದರ ಬಗ್ಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೇರಬೇಕು. ವಿವೇಕರು ನಮಗೆ ಏನು ವಿವೇಕವನ್ನು ಬಿಟ್ಟುಹೋಗಿದ್ದಾರೆ ಅದು ಮುಂದೆ ಬರುವಂಥ ಪೀಳಿಗೆಗಳಿಗೆ ಅದು ಆದರ್ಶಮಯವಾಗುವ ರೀತಿಯಲ್ಲಿ ಒಂದು ವಿಶೇಷವಾದಂಥ ಪ್ರಯತ್ನವನ್ನು ಕರ್ನಾಟಕ ಸರ್ಕಾರ ಮಾಡಬೇಕೆನ್ನುವಂಥದ್ದನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ತಾವು ವಿವೇಕಾನಂದರ ಬಗ್ಗೆ ಇಷ್ಟು ದೊಡ್ಡದಾದಂಥ ಒಂದು ಭಕ್ತಿಯಿಂದ, ಶ್ರದ್ಧೆಯಿಂದ ಉಲ್ಲೇಖ ಮಾಡಲಿಕ್ಕೆ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ ತಮಗೆ ನಾನು ವಂದಿಸುತ್ತ ವಿವೇಕಾನಂದರ ಬಗ್ಗೆ ನಮ್ಮ ಎಲ್ಲಾ ಸದಸ್ಯರು ಗೌರವದಿಂದ ಬಾವಿಯಿಂದ ಈಚೆ ಬಂದು ತಾವು ಮಂಡೂಕಗಳಲ್ಲ ಎಂದು ತೋರಿಸಿದ್ದಾರೆ ಅವರಿಗೂ ಅಭಿನಂದನೆಗಳನ್ನು ನಾನು ಸಲ್ಲಿಸುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಯವರೇ, ಇವೊತ್ತು ವಿಶ್ವದಲ್ಲಿ ನಮ್ಮ ರಾಷ್ಟ್ರದ ಎರಡು ಮಹಾನ್ ನಾಯಕರಾಗಿ ಮೆರೆದವರಲ್ಲಿ ಹಾಗೂ ಇವೊತ್ತಿಗೂ ಮೆರೆಯುತ್ತಿರುವ ಒಬ್ಬರು ಮಹಾತ್ಮಾ ಗಾಂಧೀಜಿಯವರು, ಇನ್ನೊಬ್ಬರು ಸ್ವಾಮಿ ವಿವೇಕಾನಂದರು. 39ನೇ ವರ್ಷದಲ್ಲಿ ಸ್ವಾಮಿ ವಿವೇಕಾನಂದರನ್ನು ದೇವರು ಕರೆದುಕೊಂಡು ಹೋದರು. ಆದರೆ ವಿವೇಕಾನಂದರು ನಮ್ಮ ರಾಷ್ಟ್ರಕ್ಕೆ ನಮ್ಮ ರಾಷ್ಟ್ರದ ಜನತೆಗೆ, ನಮ್ಮ ರಾಷ್ಟ್ರದ ನಾನಾ ಜಾತಿಗಳು, ನಾನಾ ಧರ್ಮಗಳು ಮತ್ತು ಬಹಳ ಎತ್ತರದಲ್ಲಿರ ತಕ್ಕಂಥ ಸಾಧು ಸಂತರು, ಮಠಾಧೀಶರರು, ಸ್ವಾಮಿಜಿಗಳು ಇವರೆಲ್ಲರಿಗೂ ಸ್ವಾಮಿ ವಿವೇಕಾನಂದರು ಮಾರ್ಗದರ್ಶನ ಆಗಿದ್ದಾರೆ ಎಂದು ಹೇಳುತ್ತಿರ ತಕ್ಕಂಥ ಪ್ರಶ್ನೆ ಇವೊತ್ತಿಗೂ ನಮ್ಮೆಲ್ಲರನ್ನು ಕಾಡುತ್ತದೆ, ನಾವೆಲ್ಲಾ ಇಷ್ಟು ದೊಡ್ಡದಾಗಿ ಮಾತನಾಡುತ್ತಿರತಕ್ಕಂಥವರು ನಮ್ಮ ಸಮಾಜ ಏನು ಎಂದು ಹೇಳುತ್ತಿರ ತಕ್ಕಂಥದ್ದರ ಬಗ್ಗೆ ನಾವು ಯಾವುದೇ ಚಿಂತನೆ ಮಾಡುತ್ತಿಲ್ಲ. ಕೇವಲ ವರ್ಷಕ್ಕೆ ಒಂದು ಸಲ ಈ ತರಹ ಪರಿಸ್ಥಿತಿ ಬಂದಾಗ ನಾವು ಇವರನ್ನು ನಡೆಸಿಕೊಂಡು ಇಡೀ ಪ್ರಪಂಚವೇ ಒಂದು ಎಂದು ಹೇಳುತ್ತಿರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡು ಸ್ವಾಮಿ ವಿವೇಕಾನಂದರನ್ನು ಇವೊತ್ತು ಕೇವಲ..

ಮಾನ್ಯ ಸಭಾಪತಿಯವರೆ, ಕೆಲವು ಸಂದರ್ಭದಲ್ಲಿ ಇದನ್ನು ಯಾರೂ ಅನ್ಯಥಾ ಭಾವಿಸಬೇಡಿ. ಕೆಲವು ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರನ್ನು ಕೂಡ ರಾಜಕೀಯಕ್ಕೋಸ್ಕರವಾಗಿ, ಧರ್ಮಕ್ಕೋಸ್ಕರವಾಗಿ ಉಪಯೋಗಿಸಿಕೊಂಡು ಬರುತ್ತಿರುವುದನ್ನು ನಾವು ಅಲ್ಲಿ ಇಲ್ಲಿ ನೋಡುತ್ತಿದ್ದು ಇದೊಂದು ದುರಂತ ವಾಗಿದೆ. ಇದನ್ನು ಯಾರೂ ಅನ್ಯಥಾ ಭಾವಿಸಬಾರದು. ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಬೇಕು ಎಂದು ಹೇಳುತ್ತಿರತಕ್ಕಂತಹ ಪರಿಸ್ಥಿತಿ ಇದೆ. ಸ್ವಾಮಿ ವಿವೇಕಾನಂದರು ಚಿಕಾಗೋಗೆ ಹೋಗದೆ ಇದ್ದಿದ್ದರೆ. ಅಲ್ಲಿಗೆ ಹೋಗುವುದಕ್ಕೆ ಅವರಿಗೆ ಆಹ್ವಾನ ಏನು ಇರಲಿಲ್ಲ. ಅವರು ಆಹ್ವಾನ ಇಲ್ಲದೇ ಹೋದರು. ಮಾನ್ಯ ಗೋ. ಮಧುಸೂಧನ್‌ರವರು ಹೇಳಿದಂತೆ ಅವರು ಕೂಪಮಂಡೂಕ ಭಾಷಣವನ್ನೇನು ಮಾಡಲಿಲ್ಲ.

ಶ್ರೀ **ಗೋ.ಮಧುಸೂದನ್**: ಮಾನ್ಯ ಸಭಾಪತಿಯವರೇ, ಇದು ದಾಖಲೆಗಳಲ್ಲಿಯೇ ಹೇಳಿರುವಂಥದ್ದು. ಕೂಪಮಂಡೂಕ ಅವರು ಉಪಯೋಗಿಸಿದಂತಹದ್ದು.

**ಶ್ರೀ ಎಂ.ಸಿ.ನಾಣಯ್ಯ:-** ಉಪಯೋಗಿಸಿರುವಂಥದ್ದು ಇಲ್ಲ.

**ಶ್ರೀ ಗೋ.ಮಧುಸೂದನ್:-** ಅವರು ಮಾಡಿದಂತಹ ಚಿಕಾಗೋ ಭಾಷಣದಲ್ಲಿಯೇ ಇದೆ.

**ಶ್ರೀ ಎಂ.ಸಿ.ನಾಣಯ್ಯ:-** ಇರಲಿ.

**ಸಭಾಪತಿಯವರು:-** ಅದರ ಬಗ್ಗೆ ಚರ್ಚೆ ಬೇಡ.

ಶ್ರೀ **ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಚಿಕಾಗೋದಲ್ಲಿ ಅವರು ಮಾಡಿದಂತಹ ಭಾಷಣ ಕೇವಲ 2 ನಿಮಿಷ 26 ಸೆಕೆಂಡಗಳು ಮಾತ್ರ, ಒಂದು ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದು ಸತ್ಯ. ಚಿಕಾಗೋ ಎಂದು ಹೇಳುತ್ತಿರತಕ್ಕಂತಹ World Parliament of Religions ಅದು ಮಾಡಿರ ತಕ್ಕಂಥದ್ದು. ಆ ಸಂದರ್ಭದಲ್ಲಿ Christianity, Christian Pope ಅದರಲ್ಲಿರ ತಕ್ಕಂತಹ heaven and hell ಎಂದು ಹೇಳುತ್ತಿರತಕ್ಕಂಥದ್ದನ್ನು ಇದು ಪ್ರಪಂಚಕ್ಕೆ

ಸಾರುವುದಕ್ಕೆ ಇರತಕ್ಕಂಥದ್ದಕ್ಕೆ ಮತ್ತು ಅವರ ಸಾರ್ವಭೌಮತ್ವವನ್ನು ಪ್ರದರ್ಶನ ವನ್ನು ಮಾಡುವುದಕ್ಕೆ ನಡೆದಿರತಕ್ಕಂಥದ್ದು ಎಂದು ಹೇಳುತ್ತಿರತಕ್ಕಂಥದ್ದು ಸತ್ಯ. ನಾನು ಒಪ್ಪುತ್ತೇನೆ. ನಾನು ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿರ ತಕ್ಕಂತಹ ಹಿನ್ನೆಲೆಯಲ್ಲಿಯೇ ಮಾತನಾಡುತ್ತಿದ್ದೇನೆ. ಅವರು ಆ ಸಂದರ್ಭದಲ್ಲಿ ಆಡಿರತಕ್ಕಂತಹ ಮಾತುಗಳಲ್ಲಿ, ಇಡೀ ಪ್ರಪಂಚದಲ್ಲಿರತಕ್ಕಂತಹ ಪ್ರತಿಯೊಬ್ಬರು ಕೂಡ ಯಾವುದೇ ಜಾತಿ, ಧರ್ಮಕ್ಕೆ ಸೇರಿದಲ್ಲಿ ನಾವು ವಿಶ್ವ ಮಾನವರಾಗುವ ಎಂದು ಹೇಳುತ್ತಾ ಇರತಕ್ಕಂತಹ ಶ್ರೀ ಕುವೆಂಪುರವರ ಚಿಂತನೆ ಇದೆಯಲ್ಲಾ, ಜಾತಿ, ಮತ, ಭೇದ, ಕಂದಕಗಳನ್ನು ತೆಗೆದು ಹಾಕಿ ದೇವರುಗಳನ್ನು ಹೊರಗೆ ಹಾಕಿ ವಿಶ್ವಮಾನವರಾಗಿ ಇರತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಎಂದು ಹೇಳುತ್ತಿರತಕ್ಕಂತಹ ಶ್ರೀ ಕುವೆಂಪುರವರ ಆ ಚಿಂತನೆ ಇದೆಯಲ್ಲಾ ಅದಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ ಇದೆಯಲ್ಲಾ, ಆ ಕೊಡುಗೆ ಬಹಳಷ್ಟು ಅಪಾರವಾಗಿರತಕ್ಕಂಥದ್ದು. ಅವತ್ತು ಸ್ವಾಮಿ ವಿವೇಕಾನಂದರವರು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅವರು ಆಡಿರತಕ್ಕಂತಹ ಒಂದೇ ಒಂದು ಪದ education is the manifestation of perfection already in man, ಪ್ರತಿಯೊಬ್ಬರಿಗೂ ಕೂಡ ಬುದ್ಧಿ ಇದೆ. ನಾನು ಹೇಳುತ್ತಿರತಕ್ಕಂಥದ್ದು ಅವನು ಬಹಳ ಬುದ್ಧಿವಂತ, ಇವನು ಬುದ್ಧಿವಂತನಲ್ಲ ಎಂದಲ್ಲ. ಪ್ರತಿಯೊಬ್ಬರಲ್ಲಿಯೂ ಬುದ್ಧಿ ಇದೆ. ಅದನ್ನು ಹೊರಗೆ ತರುವುದಕ್ಕೆ there should be out side catalytic forces to take that ಎಂದು ಹೇಳುತ್ತಿರತಕ್ಕಂಥದ್ದು education is the manifestationof perfection already in man ಎಂದು ಅವರು ಹೇಳಿರ ತಕ್ಕಂಥದ್ದು. ಆದ್ದರಿಂದ ಇವತ್ತು ಅವರನ್ನು ಯಾವುದಕ್ಕೆ ಬಳಸಿಕೊಳ್ಳಬೇಕು ಎಂದರೆ ಇಡೀ ಪ್ರಪಂಚದಲ್ಲಿ, ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಶಾಂತಿ, ನೆಮ್ಮದಿಯನ್ನು ಬೆಳೆಸಿ, ನಾವೆಲ್ಲರೂ ಕೂಡ ಎಲ್ಲಾ ಜಾತಿ, ಜನಾಂಗ ಭಾಷೆಯವರು ಒಂದು ಎಂದು ಹೇಳತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಬಹು ಸಂಸ್ಕೃತಿ ಅತ್ಯಂತ ಪ್ರಬಲವಾಗಿರತಕ್ಕಂತಹ ರಾಷ್ಟ್ರವನ್ನಾಗಿ ಬೆಳೆಸುತ್ತಾ ಇರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ನಾನೇ ಹೆಚ್ಚು, ನನ್ನದೇ ಹೆಚ್ಚು ಎನ್ನುವಂತಹ ಹುಚ್ಚುತನ ಇದೆಯಲ್ಲಾ, ಹುಚ್ಚುತನಕ್ಕೆ ಕಡಿವಾಣ

ಹಾಕುವುದಕ್ಕೆ ಇರತಕ್ಕಂಥದ್ದು ಬಹುಶಃ ಇಂದು ನಾವು ಮಾತನಾಡುತ್ತಿರ ತಕ್ಕಂಥದ್ದು ಎಲ್ಲರಿಗೂ ಮಾರ್ಗದರ್ಶನವಾದರೆ ಅದೇ ಒಂದು ಬಹಳ ಉತ್ತಮವಾದಂತಹ ನಿದರ್ಶನವೆಂದು ನಾನು ಭಾವಿಸುತ್ತೇನೆ.

ಅವರು ಒಂದು ಮಾತನ್ನು ಏನು ಹೇಳಿದರು ಎಂದರೆ, Expansion is Love ಮನುಷ್ಯನ ಹೃದಯ ವೈಶಾಲ್ಯತೆ Expansion is Love, Contraction is Death. Love is life, Hatred is death. ಇದು ಇದೆಯೇ? ಹೃದಯ ವೈಶಾಲ್ಯತೆ ಇದೆಯೇ? ಪ್ರೇಮ ಎನ್ನುವಂಥದ್ದು ಕಾಣುತ್ತಿದೆಯೇ? ಎಲ್ಲರೂ ಜಾತಿ, ಮತ, ಭೇದಗಳನ್ನು ಬಿಟ್ಟು, ಧರ್ಮಗಳನ್ನು ಬಿಟ್ಟು, ಧರ್ಮ ಧರ್ಮಗಳ ನಡುವೆ ಹೋರಾಟ ನಡೆಯುತ್ತಿದ್ದು, ನಾನು ಮುಂದು, ನಾನು ಮುಂದು ಎಂದು ಇವತ್ತು ನಿರ್ಮಾಣ ಮಾಡುತ್ತಿರುವಂತಹ ಈ ರಾಷ್ಟ್ರ ಇದೆಯಲ್ಲಾ, ಈ ರಾಷ್ಟ್ರಕ್ಕೆ ಸ್ವಾಮಿ ವಿವೇಕಾನಂದರು ಮಾರ್ಗದರ್ಶಕರು ಇವತ್ತು ಯುವಕರಿಗೆ ಮಾರ್ಗದರ್ಶನ ಮಾಡುವುದಕ್ಕೆ ಬಹಳ ದೊಡ್ಡ ಹೋರಾಟ ನಡೆಯುತ್ತಿದೆ. ಸ್ವಾಮಿ ವಿವೇಕಾನಂದರ ಮಾರ್ಗದರ್ಶನ ಬೇಕಾಗಿರುವುದು ಇವತ್ತು ಈ ರಾಷ್ಟ್ರಕ್ಕೆ ಬುದ್ಧಿವಂತರಿಗೆ, ಹಿರಿಯರಿಗೆ, ಹಣವಂಥವರಿಗೆ, ಸ್ಥಿತಿವಂತವರಿಗೆ, ಈ ರಾಷ್ಟ್ರದಲ್ಲಿ ಲಕ್ಷಗಟ್ಟಲೆ ಇರುವಂತಹ ಸ್ವಾಮೀಜಿಗಳು, ಸಂತರು, ಮಠಾಧಿಪತಿಗಳು ಅವರೆಲ್ಲರಿಗೂ ಇವರ ಮಾರ್ಗದರ್ಶನವಾಗಬೇಕು. ಆ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಈ ರಾಷ್ಟ್ರ, ಈ ಪ್ರಪಂಚ ಒಂದಾಗುವಂತಹ ಕನಸು ಇದೆಯಲ್ಲಾ, ಆ ಕನಸನ್ನು ನಿರ್ಮಾಣ ಮಾಡುತ್ತಿರತಕ್ಕಂತಹ ಹಂತದಲ್ಲಿ ಶ್ರೀಮಾನ್ ರಾಮಕೃಷ್ಣ ಪರಮಹಂಸರನ್ನು ಯಾರೋ ಕೆಲವು ಜನರು ಇವರು ನಮಗೆ ಸೇರಿರತಕ್ಕಂಥವರೆಂದು ಈ ಪ್ರಪಂಚದ ಉದ್ದಗಲಕ್ಕೂ ಹೇಳಿಕೊಂಡು ಹೋಗುತ್ತಿದ್ದರಲ್ಲಾ, ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಅವರ ಶಿಷ್ಯರಾಗಿದ್ದರಿಂದ ಸ್ವಾಮಿ ವಿವೇಕಾನಂದರು ಇಬ್ಬರೂ ಈ ಪ್ರಪಂಚದ ಆಸ್ತಿ. ನಾನು ಗುರುಗಳು, ಸ್ವಾಮಿಗಳು, ಸಂತರು ಎಂದು ಕರೆಯುವುದಿದ್ದರೆ ಒಬ್ಬರು ಶ್ರೀ ರಾಮಕೃಷ್ಣ ಪರಮಹಂಸರನ್ನು ಕರೆಯುತ್ತೇನೆ. ಇನ್ನೊಬ್ಬರು ಅವರ ಶಿಷ್ಯರಾಗಿರುವ ಸ್ವಾಮಿ ವಿವೇಕಾನಂದರನ್ನು ಕರೆಯುತ್ತೇನೆ. ಶ್ರೀ ರಾಮಕೃಷ್ಣ ಪರಮಹಂಸರ ಧರ್ಮಪತ್ನಿಯವರಾದಂತಹ ಶಾರದಾದೇವಿಯವರನ್ನು

ಅವರು ಎಲ್ಲಿಯೂ ಕೂಡ ಪತ್ನಿ ಎಂದು ಕರೆಯಲಿಲ್ಲ. ತನ್ನ ಹೆಂಡತಿಯನ್ನೇ ಕುಳ್ಳಿರಿಸಿಕೊಂಡು ಅವರನ್ನೇ ದೇವರು ಎಂದು ಪರಿಗಣಿಸಿ, ಅವರ ಜೊತೆಯಲ್ಲಿ ಪೂಜೆ ಮಾಡಿ, ಅವರ ಕಾಲು ಮುಟ್ಟಿ ನಮಸ್ಕಾರ ಮಾಡುವಂತಹ ಪರಿಸ್ಥಿತಿಯನ್ನು ಶ್ರೀ ರಾಮಕೃಷ್ಣ ಪರಮಹಂಸರ ಪುಸ್ತಕದಲ್ಲಿ ಅಥವಾ ಶಾರದಾ ದೇವಿಯವರ ಪುಸ್ತುಕದಲ್ಲಿ ಓದಿಕೊಂಡು ಬಂದಿದ್ದೇವೆ. ರಾಮಕೃಷ್ಣ ಪರಮಹಂಸರು ಶಾರದದೇವಿಯಲ್ಲಿ ಕಂಡಿರತಕ್ಕಂಥದ್ದು ಶಕ್ತಿಯನ್ನು, ಅವರು ಪತ್ನಿಯನ್ನು ಕಾಣಲಿಲ್ಲ. ಇಂತಹ ಪರಿಸ್ಥಿತಿಯು ನಿರ್ಮಾಣವಾಗುತ್ತಿರುವಂತಹ ಈ ಜಗತ್ತಿನ ಮಾನ್ಯ ಗೋ.ಮಧುಸೂದನ್‌ರವರಿಗೆ ನಾನು ಹೇಳುವುದೇನೆಂದರೆ, ದಯವಿಟ್ಟು ಆತ್ಮಾವಲೋಕನ ಎಲ್ಲಿಂದ ಶುರುವಾಗಬೇಕು ಎನ್ನುವುದನ್ನು ನೀವು ನಿಮ್ಮ ಕಡೆಯಿಂದ ಶುರು ಮಾಡಿಕೊಂಡು ಹೋಗಿ. ನಾವು ನಮ್ಮ ಕಡೆಯಿಂದ ಶುರು ಮಾಡಿಕೊಂಡು ಹೋಗಬೇಕಾಗುತ್ತದೆ. ಕಡೆಗೆ ನಾವು ನೀವು ಎಂದು ಹೇಳುತ್ತಿರತಕ್ಕಂಥದ್ದು ಕೆಲವು ಸಂದರ್ಭದಲ್ಲಿ, ಕೆಲವು ವಿಚಾರಗಳಲ್ಲಿ ಸಮಾಜದಲ್ಲಿ ಶಾಂತಿ, ನೆಮ್ಮದಿ ಕದಡುತ್ತಿರತಕ್ಕಂಥಾದ್ದರಲ್ಲಿ ಬಹುಶಃ ನಾನು ಹೇಳುವುದೇನೆಂದರೆ, ಜಾತಿ, ಧರ್ಮಗಳನ್ನು ಬಿಟ್ಟು ಸ್ವಲ್ಪ ಮೇಲಕ್ಕೆ ಎತ್ತುವಂತಹ ಪ್ರಯತ್ನವನ್ನು ಮಾಡಿದರೆ, ನಾವು ಇವತ್ತು ಮಾಡಿರ ತಕ್ಕಂತಹ ಈ ಒಂದು ರೆಫರನ್ಸ್ ಇದೆಯಲ್ಲಾ, ಈ ಒಂದು ಸೂಚನೆಗೆ ಸಂಬಂಧಪಟ್ಟ ಹಾಗೆ ಬಹುಶಃ ಅದು ಇಡೀ ರಾಷ್ಟ್ರಕ್ಕೆ, ಪ್ರಪಂಚಕ್ಕೆ ಮಾರ್ಗ ದರ್ಶನವಾಗಲಿ. ನಾವು ನೀವು ಎಲ್ಲರೂ ಒಟ್ಟಾರೆ ಸೇರಿ ಈ ರಾಷ್ಟ್ರದಲ್ಲಿರ ತಕ್ಕಂತಹ 120 ಕೋಟಿ ಜನರೂ ಕೂಡ ಈ ಸಮಾಜದ ಆಸ್ತಿ, ಈ ಸಮಾಜದ ಆಸ್ತಿಗೆ ನಾವೆಲ್ಲರೂ ಪಾಲುದಾರರು ಎನ್ನುವುದನ್ನು ಚಿಂತನೆ ಮಾಡಿ, ಇದು ನನ್ನ ಗುತ್ತಿಗೆ ಎನ್ನುವಂತಹ ಪರಿಸ್ಥಿತಿಯನ್ನು ಯಾರೂ ನಿರ್ಮಾಣ ಮಾಡಬೇಕಾಗಿಲ್ಲ.

**ಸಭಾಪತಿಯವರು:–** ಇಷ್ಟೊಂದು ಆಸಕ್ತಿಯನ್ನು ತೋರಿಸುವುದರಿಂದ ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಯಾರ್ಯಾರು ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ ಅವರ ಹೆಸರುಗಳ ಪಟ್ಟಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರುಗಳು ಎಲ್ಲರಿಗೂ

ಮಾತನಾಡುವುದಕ್ಕೆ ಅವಕಾಶ ಸಿಗಬೇಕು ಎನ್ನುವುದನ್ನು ನೆನಪು ಇಟ್ಟುಕೊಂಡು ನಾಲ್ಕು ಮಾತುಗಳನ್ನಾಡಿ ತಮ್ಮ ಮಾತುಗಳನ್ನು ಮುಗಿಸಬೇಕು.

**ಶ್ರೀ ಮನೋಹರ್ ಮಸ್ಕಿ ಪದವೀಧರರ ಕ್ಷೇತ್ರ:** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿರುವುದಕ್ಕೆ ಧನ್ಯವಾದಗಳು. ಯಾವುದೇ ವಿಷಯವನ್ನು ಪುನರಾವರ್ತನೆ ಮಾಡದಂತೆ ಎಚ್ಚರವಹಿಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡುವುವಂತಹ ಸಂದರ್ಭದಲ್ಲಿ ಬಹುಶಃ ಕರ್ನಾಟಕ ರಾಜ್ಯಕ್ಕೆ ಮತ್ತು ಸ್ವಾಮಿ ವಿವೇಕಾನಂದರಿಗೆ ಇರುವಂತಹ ನಂಟಿನ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಅದು ಸರಿಯಾಗುವುದಿಲ್ಲವೆಂಬುದು ನನ್ನ ಒಂದು ಭಾವನೆ. ಸ್ವಾಮಿ ವಿವೇಕಾನಂದರು  ಇವತ್ತು ನಮಗೆಲ್ಲಾ ಚಿರಪರಿಚಿತರಾಗಿದ್ದರೆ. ಆದರೆ ವಿವೇಕಾನಂದ ಎನ್ನುವಂತಹ ಹೆಸರನ್ನು ಯಾರು ಇಡಲಿಲ್ಲ. ಅವರ ಗುರುಗಳ ಇಚ್ಛೆಯಂತೆ ಇಡೀ ದೇಶದಲ್ಲಿ ಸನ್ಯಾಸಿಯಾಗಿ ಸಂಚಾರ ಮಾಡುತ್ತಿದ್ದರು. ದೇಶವನ್ನು ಅಧ್ಯಯನ ಮಾಡುತ್ತಿದ್ದರು. ಜನಜೀವನವನ್ನು ಅಧ್ಯಯನ ಮಾಡುತ್ತಿದ್ದರು, ಚಿಂತನೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರು ಹೋದಾಗ ಯಾವುದೋ ಒಂದು ಹೆಸರಿನಲ್ಲಿ ಒಂದು ದಿವಸ ಅಖಿಲಾನಂದ ಎಂದು ಹೇಳುತ್ತಿದ್ದರು, ಯಾವ್ಯಾವುದೋ ಹೆಸರನ್ನು ಹೇಳುತ್ತಿದ್ದರು. ಅವರಿಗೆ ಯಾವುದೇ ಹೆಸರು ಇರಲಿಲ್ಲ. ಯಾರೋ ಒಬ್ಬರು ಕೇಳಿದರೆ ಆ ಕ್ಷಣದಲ್ಲಿ ಏನು ಹೆಸರು ಬರುತ್ತದೆ ಅದನ್ನು ಹೇಳಿ, ಯಾರದೋ ಶ್ರೀಮಂತರ ಮನೆ ಇರಬಹುದು, ಬಡವನ ಗುಡಿಸಲು ಇರಬಹುದು ಅಲ್ಲಿ ಮಲಗಿ, ಒಂದು ರೊಟ್ಟಿಯನ್ನೋ ಇನ್ನೊಂದನ್ನು ತಿಂದು ಇಡೀ ದೇಶದಲ್ಲಿ ಓಡಾಡುತ್ತಿದ್ದರು. ಅವರು ಕರ್ನಾಟಕದ ಮೈಸೂರಿಗೆ ಬಂದಾಗ ಅಷ್ಟು ಹೊತ್ತಿಗೆ ಅವರು ಚಿಕಾಗೋ ಧರ್ಮ ಸಮ್ಮೇಳನಕ್ಕೆ ಹೋಗಬೇಕೆಂದು ಮನಸ್ಸು ಮಾಡಿದ್ದರು. ಅವರನ್ನು ಇಷ್ಟಪಡುವಂತಹ ಅನೇಕ ಯುವಕರು ಅವರ ಖರ್ಚು ವೆಚ್ಚಕ್ಕೋಸ್ಕರವಾಗಿ ದೇಣಿಗೆಯನ್ನು ಸಂಗ್ರಹ ಮಾಡಿ ಹಣವನ್ನು ಕೊಡುತ್ತಿದ್ದರು. ಆ ಸಂದರ್ಭದಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಚಿಕಾಗೋಗೆ ಹೋಗುವುದಕ್ಕೆ ಹಡಗಿನಲ್ಲಿ ಪ್ರಯಾಣ ಮಾಡುವುದಕ್ಕೆ

ಟಿಕೇಟ್‌ನ ವ್ಯವಸ್ಥೆ ಮಾಡಿಕೊಟ್ಟರು. ಆ ಟಿಕೇಟ್ ವ್ಯವಸ್ಥೆ ಮಾಡುವಂತಹ ಸಮಯದಲ್ಲಿ ಪ್ರಯಾಣ ಮಾಡುವವರ ಹೆಸರನ್ನು ಬರೆಯಬೇಕಾಗಿತ್ತಲ್ಲವೇ, ಹಿಂದೆ ಇವರು ಯಾವ್ಯಾವ ಹೆಸರುಗಳನ್ನು ಹೇಳಿದ್ದರು. ಅವತ್ತಿನ ದಿವಸ ಮೈಸೂರಿನ ಮಹಾರಾಜರು ಶ್ರೀ ವಿವೇಕಾನಂದ ಎನ್ನುವ ಹೆಸರಿನಿಂದ ಟಿಕೇಟ್ ಮಾಡಿಸಿದ್ದರಿಂದ, ವಿವೇಕಾನಂದ ಎನ್ನುವಂತಹ ಹೆಸರು ಶಾಶ್ವತವಾಯಿತು. ವಿವೇಕಾನಂದ ಎನ್ನುವಂತಹ ಹೆಸರಿನಲ್ಲಿ ಅವರು ಚಿಕಾಗೋ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡರು. ಆದ್ದರಿಂದ ವಿವೇಕಾನಂದ ಎನ್ನುವ ಹೆಸರನ್ನು ನಮ್ಮ ಮೈಸೂರು ಮಹಾರಾಜರು ಟಿಕೇಟ್‌ನಲ್ಲಿ ನಮೂದಿಸಿದ್ದರಿಂದ ನಮ್ಮ ಕರ್ನಾಟಕಕ್ಕೂ ಸ್ವಾಮಿ ವಿವೇಕಾನಂದರಿಗೂ ನಂಟಿದೆ. ಆದ್ದರಿಂದ ಇವತ್ತಿಗೂ ನಾವು ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ರಾಮಕೃಷ್ಣ ಆಶ್ರಮಗಳನ್ನು ಕಾಣುತ್ತೇವೆ. ಅದೇ ರೀತಿ ಬೆಳಗಾವಿಯಲ್ಲಿ ಇರಬಹುದು, ಇತ್ತೀಚೆಗೆ ಗದಗ್‌ನಲ್ಲಿ ಕೂಡ ರಾಮಕೃಷ್ಣ ಆಶ್ರಮವಾಗಿದೆ. ಅನೇಕರಲ್ಲಿ ಆ ಚಿಂತನೆ ಬೆಳೆಯುತ್ತಿದೆ. ಆದ್ದರಿಂದ ಆ ಮಹಾತ್ಮನ ಹೆಸರು ಬರುತ್ತಿದ್ದಂತೆ ಇವತ್ತು ಕಳೆದ 2–3 ದಿನಗಳಿಂದ ಸದನದಲ್ಲಿ ಇದ್ದಂತಹ ಕೋಲಾಹಲ ಕಡಿಮೆಯಾಗಿ ಇವತ್ತು ಶಾಂತವಾಗಿ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಹತ್ತನೇ ತರಗತಿಯಿಂದ ವಿವೇಕಾನಂದ ರ ವಿಚಾರಧಾರೆಗಳನ್ನು ಅಧ್ಯಯನ ಮಾಡಿಕೊಂಡು ಬಂದಿದ್ದೇನೆ. ಹೀಗಾಗಿ ನಾನು ಕೆಲವು ವಿಷಯಗಳನ್ನು ಸ್ಪಷ್ಟಪಡಿಸಬಯಸುತ್ತೇನೆ. ಈಗಾಗಲೇ ಮಾತನಾಡಿದಂತಹ ಮಾನ್ಯ ಸದಸ್ಯರೊಬ್ಬರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಮೊದಲನೆಯ ಮತ್ತು ಎರಡನೆದಿವಸ ಅವರಿಗೆ ಮಾತನಾಡಲು ಅವಕಾಶ ಸಿಗಲಿಲ್ಲ ಎಂದು ಹೇಳಿದರು. ಆದರೆ ಅವರಿಗೆ ಪರಿಚಯಪತ್ರ ಕೊಟ್ಟಿದ್ದಂತಹ ಒಂದು ಉಲ್ಲೇಖವನ್ನು ನೋಡಿ ಮೊದಲನೆಯ ದಿವಸ ಆ ಸಮ್ಮೇಳನದ ಉದ್ಘಾಟನೆಯ ನಂತರವೇ ಆ ಕಾರ್ಯಕ್ರಮದ ಸಂಘಟಕರು ಈಗ ನೀವು ಮಾತನಾಡುವುದಾದರೆ ಮಾತನಾಡಿ ಎಂದು ನಿಜಕ್ಕೂ ಅವರನ್ನು ಕರೆದರು. ಆದರೆ ಅಲ್ಲಿಗೆ ಆಗಮಿಸಿದಂತ ಗಣ್ಯರು, ದೊಡ್ಡ ದೊಡ್ಡ ವ್ಯಕ್ತಿಗಳು, ಅವರ ಭಿನ್ನವತ್ತಳೆ, ಅವರ ಜೊತೆಗಿರುವ ವ್ಯವಸ್ಥೆ ಇವೆಲ್ಲವನ್ನೂ ನೋಡಿ

ಇವರೊಬ್ಬ ಬಿಡಿ ಸನ್ಯಾಸಿಯಾಗಿ ಕುಳಿತುಕೊಂಡಿದ್ದಾರೆ. ಇವರಿಗೆ ಭಯವಾಯಿತು. ಆ ಕ್ಷಣದವರೆಗೆ ಅಂತಹ ದೊಡ್ಡ ಸಭೆಗಳಲ್ಲಿ ಅವರು ಪಾಲ್ಗೊಂಡು ಮಾತನಾಡಿದಂತಹವರಲ್ಲ. ಆದ್ದರಿಂದ ಇಲ್ಲ, ನಾನು ಆಮೇಲೆ ಮಾತನಾಡುತ್ತೇನೆ ಎಂದರು. ಅನಂತರ ಸಾಯಂಕಾಲ ಮತ್ತೊಮ್ಮೆ ಸಂಘಟಕರು ಅವರನ್ನು ಮಾತನಾಡುವಂತೆ ಕರೆದರು, ಅವರು ಬರಲಿಲ್ಲ. ಆ ಸಂದರ್ಭದಲ್ಲಿ ಸಂಘಟಕರು ಈ ಮನುಷ್ಯನಿಗೆ ಇಷ್ಟು ದೊಡ್ಡ ಪರಿಚಯ ಪತ್ರ ಕೊಟ್ಟಿದ್ದಾರೆ, ಅಮೇರಿಕಾದಲ್ಲಿರುವ ಎಲ್ಲ ಬುದ್ಧಿಜೀವಿಗಳನ್ನು ಒಟ್ಟುಗೂಡಿಸಿ ದರೂ ಅವರಿಗಿಂತ ಒಂದು ಅಂಶ ಜಾಸ್ತಿಯಾಗುವಂತಹ ಬುದ್ಧಿವಂತ ಈತ ಎಂದು ಪರಿಚಯ ಪತ್ರ ಕೊಟ್ಟಿದ್ದಾರೆ. ಈತ ನೋಡಿದರೆ ಮಾತನಾಡಲು ಮುಂದೆ ಬರುತ್ತಲೇ ಇಲ್ಲ, ಏನು ಮಾಡುವುದು ಎಂದು ಹೇಳಿ ಕೊನೆಗೆ ಅವರ ಹೆಸರನ್ನು ಅನೌನ್ಸ್ ಮಾಡಿಬಿಡುತ್ತಾರೆ. ಆ ಸಂದರ್ಭವನ್ನು ಕುರಿತು ಸ್ವಾಮಿ ವಿವೇಕಾನಂದರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. 'ಮಾತನಾಡುವುದಕ್ಕಾಗಿ ವೇದಿಕೆಯ ಮೇಲೆ ಹೋಗುವಂತಹ ಸಂದರ್ಭದಲ್ಲಿ ನನಗೆ ನಖಶಿಖಾಂತ ಬೆವರುತ್ತಿತ್ತು. ಏನು ಮಾತನಾಡಬೇಕೆಂದು ನನಗೆ ಗೊತ್ತಾಗಲಿಲ್ಲ. ಆದ್ದರಿಂದ ನನ್ನ ಆರಾಧ್ಯದೈವ ತಾಯಿ ಸರಸ್ವತಿಯನ್ನು ನೆನಪು ಮಾಡಿಕೊಂಡೆ, ಕೂಡಲೇ ನಖಶಿಖಾಂತ ಚೈತನ್ಯ ತುಂಬಿ ಹೋಯಿತು' ಎಂದು ಅವರೇ ಬರೆದಿದ್ದಾರೆ. ಆ ಸಂದರ್ಭದಲ್ಲಿ ಅವರು ಮಾತನಾಡಿದ ಶಬ್ದಗಳ ಬಗ್ಗೆ ನಮಗೆಲ್ಲಾ ಗೊತ್ತಿದೆ, ಇವತ್ತು ಆ ಶಬ್ದಗಳು ಇಲ್ಲಿ ಉಲ್ಲೇಖಿಸಿದರೆ ನಮಗೆ ಅವು ಅಷ್ಟು ಮುಖ್ಯ ಅನಿಸದಿರಬಹುದು, ಆದರೆ ಜಗತ್ತಿನ ವೇದಿಕೆಯಲ್ಲಿ ಒಂದು ದೇಶದ ಜನ ಇನ್ನೊಂದು ದೇಶದ ಜನವನ್ನು, ಒಂದು ಧರ್ಮದ ಜನ ಇನ್ನೊಂದು ಧರ್ಮದ ಜನರನ್ನು ನನ್ನ ಸೋದರ–ಸೋದರಿಯರೇ ಎಂದು ಕಲ್ಪನೆ ಮಾಡಬಹುದು ಎಂದು ಅವರಿಗೆ ಗೊತ್ತಿರಲಿಲ್ಲ. ಅಂತಹ ಒಂದು ದೊಡ್ಡ ಉದಾತ್ತ ಕಲ್ಪನೆಯನ್ನು ಅವರು ಜಗತ್ತಿಗೆ ಕೊಟ್ಟರು. ಆದ್ದರಿಂದ ಅಂತಹ ಒಬ್ಬ ವೀರಸನ್ಯಾಸಿಗೆ, ಅವರಿಗೆ ಅಂತಹ ಒಂದು ಶಾಶ್ವತ ಹೆಸರನ್ನು ಕೊಟ್ಟಂತಹ ನಮ್ಮ ಮೈಸೂರಿನ ಮಹಾರಾಜರಿಗೆ ಇಬ್ಬರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

**ಶ್ರೀ ವೀರಣ್ಣ ಮತ್ತೀಕಟ್ಟಿ ವಿಧಾನಸಭಾ ಕ್ಷೇತ್ರ:–** ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಾವಷ್ಟೇ ಅಲ್ಲ, ಇಡೀ ಭಾರತ ದೇಶದ ಜನತೆಗೆ ಬಹಳ ಮಹತ್ವಪೂರ್ಣವಾದಂತಹ ಹಾಗೂ ಆದರ್ಶಯುತವಾದಂತಹ ದಿನ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಹಾಗೂ ಭಾರತದಲ್ಲಿರತಕ್ಕಂತಹ ಜ್ಞಾನ ಸಂಪತ್ತು ಕೆಲವೇ ಜನರಲ್ಲಿ ಕ್ರೋಢೀಕೃತವಾಗಿದ್ದಂತಹ ಸಂದರ್ಭದಲ್ಲಿ ಭಾರತ ದೇಶ ಅಂದರೆ ಪರದೇಶಗಳ ದೃಷ್ಟಿಯಲ್ಲಿ ಬಡತನ ಮತ್ತು ಜಾತೀಯತೆಯ ಕೂಪ ಎಂಬ ರೀತಿಯ ಭಾವನೆ ಏನಿತ್ತು ಅದನ್ನು ಮೊಟ್ಟಮೊದಲ ಬಾರಿಗೆ ಹೊಡೆದುಹಾಕಿ ಈ ದೇಶದ ಎಲ್ಲ ಶಕ್ತಿಗಳಿಗಿಂತ ಅಗಾಧವಾದ ಮೂಲ ಶಕ್ತಿಯಾಗಿದ್ದು ವಿವಿಧ ಧರ್ಮ, ಜಾತಿ–ಜನಾಂಗಗಳೆಲ್ಲಾ ಒಂದಾಗಿ ಬದುಕತಕ್ಕಂತಹ ಶೋಷಣೆ ರಹಿತವಾದಂತಹ ಸಮಾಜವನ್ನು ಕಟ್ಟಬೇಕೆಂಬ ಚಿಂತನೆಯ ಆರಾಧಕರಾಗಿ ಸ್ವಾಮಿ ವಿವೇಕಾನಂದರು ಪುಟಿದೆದ್ದಂತಹವರು. ಸನ್ಮಾನ್ಯ ಮಧುಸೂದನ್‌ರವರು ಮತ್ತು ನಾಣಯ್ಯನವರು ಮಾತನಾಡಿದಂತಹ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳಲ್ಲಿ ಬಹಳ ಪ್ರಮುಖವಾದ ವಿಚಾರವೆಂದರೆ ಈ ದೇಶದ ಮೊದಲು ಸ್ವಾಮಿ ವಿವೇಕಾನಂದರನ್ನು ಒಪ್ಪಲಿಲ್ಲ, ಬಹಳಷ್ಟು ಜನ ಅಂದಿನ ಧಾರ್ಮಿಕ ಮುಖಂಡರೆನಿಸಿಕೊಂಡವರು ಅವರನ್ನು ವಿರೋಧಿಸಿದರು. ಸ್ವಾಮಿ ವಿವೇಕಾನಂದರು ಚಿಕಾಗೋದಿಂದ ಮರಳಿ ಮದ್ರಾಸಿಗೆ ಬಂದಂತಹ ಸಂದರ್ಭದಲ್ಲಿ ಶ್ರೇಣಿಕೃತ ಸಮಾಜ ವ್ಯವಸ್ಥೆಯ ಮೂಲಭೂತವಾದಿಗಳೇನಿದ್ದರು ಅವರು ವಿವೇಕಾನಂದರ ವಿರುದ್ಧ ವಿರೋಧವನ್ನು ವ್ಯಕ್ತಪಡಿಸಿದರು. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಆ ಸಂದರ್ಭದಲ್ಲಿ ಮಹಾಶಕ್ತಿ, ಮಹಾಚೈತನ್ಯ ಉದಯಿಸಿ ಬಂದು ಸಾಮಾಜಿಕ ವ್ಯವಸ್ಥೆಯಲ್ಲಿರುವಂತಹ ಪಟ್ಟಭದ್ರ ಹಿತಾಸಕ್ತಿಗಳೇನಿದ್ದವು ಅವುಗಳ ವಿರುದ್ಧವಾಗಿ ಜನಸಮುದಾಯದ ಪ್ರತಿನಿಧಿಗಳಾಗಿ ಅವರು ಹೊರಹೊಮ್ಮುತ್ತಾರೆ. ಅಂತಹ ಮಹತ್ತರವಾದ ಧಾರ್ಮಿಕ ನಾಯಕತ್ವವಹಿಸಿದವರಲ್ಲಿ ಸ್ವಾಮಿ ವಿವೇಕಾನಂದರು ಒಬ್ಬರು. ಅವರು ಕೇವಲ ನಮ್ಮ ದೇಶದ ಜನತೆಗ ಮಾತ್ರವಲ್ಲ ವಿಶ್ವದ ಎಲ್ಲ ಜಾತಿ, ಎಲ್ಲ ಧರ್ಮಗಳ ಜನತೆಗೆ ಸಹೋದರ–ಸಹೋದರಿಯರೇ ಎಂದು ಸಂಭೋದಿಸಿ

ಅದನ್ನು ಪ್ರತಿಪಾದಿಸಿದಂತಹವರು. ಅದರ ಜೊತೆಗೆ ಅವರು ಅವತ್ತಿನ ಧಾರ್ಮಿಕ ವ್ಯವಸ್ಥೆಯಲ್ಲಿ ಕೇವಲ ಶ್ರೀಮಂತರಿಗೆ ಮತ್ತು ಅಧಿಕಾರ ಇದ್ದವರಿಗೆ ಸೀಮಿತವಾದ ಮಠ–ಮಾನ್ಯಗಳು, ಸ್ವಾಮಿಗಳೇನಿದ್ದಾರೆ ಅವರ ಅವಶ್ಯಕತೆ ಇವತ್ತು ಈ ರಾಷ್ಟ್ರದಲ್ಲಿರತಕ್ಕಂತಹ ದೀನರು–ದಲಿತರು, ಬಡವರು ಇಂತಹ ಶೋಷಿತ ವರ್ಗಕ್ಕಿದೆ, ಬಹುಪಾಲು ಜನಾಂಗಕ್ಕೆ ಅವರ ಅವಶ್ಯಕತೆ ಇದೆ ಎಂಬುದನ್ನು ಮೊಟ್ಟಮೊದಲು ಪ್ರತಿಪಾದನೆ ಮಾಡಿದವರು ಸ್ವಾಮಿ ವಿವೇಕಾನಂದರು. ಯುವಕರು ಈ ದೇಶದ ಸಂಪತ್ತು, ನಮ್ಮ ದೇಶದ ಭವಿಷ್ಯವನ್ನು ನಿರ್ಮಾಣ ಮಾಡತಕ್ಕಂತ ಶಕ್ತಿ ಯುವಕರಿಗಿದೆ. ಆಲಸ್ಯ ಹಾಗೂ ನಿರ್ಲಿಪ್ತತೆಯಿಂದ ಆ ಯುವಕರೇನು ಬದುಕುತ್ತಿದ್ದಾರೆ ಅವರನ್ನು ಬಡಿದೆಬ್ಬಿಸಿ ಹೊಸ ಚೈತನ್ಯ ಕೊಟ್ಟು ಏಳಿ! ಎದ್ದೇಳಿ!! ಎಲ್ಲಾ ಒಂದಾಗಿ ಮುನ್ನುಗ್ಗಿ ಎಂದು ಕರೆಕೊಟ್ಟು ನವ ಭಾರತವನ್ನು, ವಿಶ್ವ ಮಾನ್ಯತೆ ಪಡೆಯತಕ್ಕಂತಹ ಬಲಾಢ್ಯ ಭಾರತವನ್ನು ಕಟ್ಟಲಿಕ್ಕೆ ಆದೇಶ ಕೊಟ್ಟಂತಹ ಮಹಾಪುರಷ ಸ್ವಾಮಿ ವಿವೇಕಾನಂದರು. ವಿದ್ಯಾರ್ಥಿ ಜೀವನದಲ್ಲಿ ನನಗೆ ಎರಡು ಆಸೆಗಳಿದ್ದವು. ಅವುಗಳೆಂದರೆ ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೋದಲ್ಲಿ ವಿಶ್ವಧರ್ಮ ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡಿದ ಸ್ಥಳವನ್ನು ನೋಡಬೇಕೆಂಬುದು ಮೊದಲನೆಯ ಆಸೆಯಾದರೆ ಮತ್ತೊಂದು ಈ ದೇಶಕ್ಕಷ್ಟೆ ಅಲ್ಲ, ವಿಶ್ವ ಮಾನ್ಯತೆಯನ್ನು ಪಡೆದಂತಹ ಮಹಾನಾಯಕ ಮಹಾತ್ಮ ಗಾಂಧೀಜಿಯವರು ಮೊಟ್ಟಮೊದಲ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿ ನೀಗ್ರೋಗಳ ಮೇಲೆ ಬಿಳಿಯರು ಅಧಿಕಾರಯುತವಾಗಿ ನಡೆಸುತ್ತಿದ್ದ ದಬ್ಬಾಳಿಕೆ ಹಾಗೂ ಶೋಷಣೆಯ ವಿರುದ್ಧ ಶೋಷಿತ ಜನಸಮುದಾಯದ ಧ್ವನಿಯಾಗಿ ಪ್ರಾರಂಭಿಸಿದಂತಹ ಒಂದು ಆಶ್ರಮ ಏನಿತ್ತು ಆ ಆಶ್ರಮಕ್ಕೆ ಭೇಟಿ ಕೊಡಬೇಕೆಂಬುದು ಎರಡನೆಯ ಆಸೆಯಾಗಿತ್ತು. ಈ ರಾಜ್ಯದ ಜನತೆಯ ಆಶೀರ್ವಾದ, ಸದನದ ಎಲ್ಲ ಮಿತ್ರರ ಆಶೀರ್ವಾದದಿಂದ ನಾನು ಈ ಸದನದ ಸಭಾಪತಿಯಾದಾಗ ಈ ಎರಡು ಸ್ಥಳಗಳಿಗೆ ಹೋಗುವಂತಹ ಒಂದು ಅವಕಾಶ ಸಿಕ್ಕಿದರಿಂದ ನಾನು ಆ ಎರಡು ಸ್ಥಳಗಳನ್ನು ನೋಡಿ ಧನ್ಯವಾದೆನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವತ್ತಿಗೂ ಕೂಡ ಸ್ವಾಮಿ ವಿವೇಕಾನಂದರ ನಮಗೆ ಆದರ್ಶವಾಗಿದ್ದಾರೆ. ಇವತ್ತಿನ ಈ ಸಂಘರ್ಷಮಯವಾದಂತಹ ವಾತಾವರಣದಲ್ಲಿ, ಕಲುಷಿತ ವಾತಾವರಣದಲ್ಲಿ ಸೌಹಾರ್ದತೆ, ಭ್ರಾತೃತ್ವ, ಪ್ರೀತಿಯನ್ನು ಪ್ರತಿಪಾದನೆ ಮಾಡತಕ್ಕಂತಹ ಸಮಾಜವನ್ನು ಕಟ್ಟಬೇಕು.ಈ ದೇಶದ ಮೂಲ ಚೈತನ್ಯಕ್ಕೆ ಹೆಚ್ಚು ಶಕ್ತಿ ಕೊಡತಕ್ಕಂತಹ ಎಲ್ಲ ಜ್ಞಾನ ಸಂಪತ್ತನ್ನು ಜನಸಮುದಾಯಕ್ಕೆ ಮುಟ್ಟಿಸಬೇಕು, ಅದರಲ್ಲಿಯೂ ಮಹತ್ವಪೂರ್ಣವಾಗಿ ನಮ್ಮ ನಾಡಿನ ಯುವಕರನ್ನು ಒಗ್ಗೂಡಿಸಿ ಅವರಿಗೆ ಮಾರ್ಗದರ್ಶನ ಮಾಡಬೇಕೆಂಬ ಮಾತನ್ನೇನು ಹೇಳಿದ್ದಾರೆ ಆ ರೀತಿ ಇವತ್ತು ನಾವೆಲ್ಲಾ ಪ್ರತಿಜ್ಞೆ ಮಾಡಿ, ಆ ದಿಕ್ಕಿನಲ್ಲಿ ನಾವು ಕೆಲಸ ಮಾಡಿದರೆ ಬಲಾಢ್ಯಯುತವಾದ, ಸಮಾನತೆಯಿಂದ ಕೂಡಿದ ಶೋಷಣೆರಹಿತವಾದ ಭಾರತವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾವೇನು ಸುವರ್ಣ ಕರ್ನಾಟಕ ಎಂದು ಹೇಳುತ್ತಿದ್ದೇವೆ ಅದನ್ನು ಈಗಿರುವ ವ್ಯವಸ್ಥೆಯಿಂದ ನಿರ್ಮಾಣ ಮಾಡುವುದಕ್ಕೆ ಶಕ್ಯವಿಲ್ಲ. ಅದನ್ನು ನಿರ್ಮಾಣ ಮಾಡಬೇಕಾದರೆ ಸ್ವಾಮಿ ವಿವೇಕಾನಂದರ ಆದರ್ಶಗಳ ನ್ನಿಟ್ಟುಕೊಂಡು ನಾವು ಬದ್ಧತೆಯಿಂದ ಕೆಲಸ ಮಾಡೋಣ ಎಂಬ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ: ಎಸ್.ಆರ್.ಲೀಲಾ ನಾಮನಿರ್ದೇಶಿತರು:** ಮಾನ್ಯ ಸಭಾಪತಿ ಯವರೇ, ಕಳೆದ ಮೂರು ದಿವಸಗಳಿಂದ ಕೋಲಾಹಲದ ನಂತರ ಇವೊತ್ತಿನ ದಿವಸ ನೆಮ್ಮದಿಯಾಗಿ ಎಲ್ಲರೂ ಕಳಿತು ನಮ್ಮ ದೇಶದ ಅಷ್ಟೇ ಅಲ್ಲ, ಇಡೀ ಜಗತ್ತಿನ ಅತ್ಯಂತ ಮೇಧಾವಿ ಎನಿಸಿಕೊಂಡತಹ ಸಂತನಾದ ಒಬ್ಬ ಕರ್ಮಯೋಗಿ, ಭಾರತದ ಹೆಮ್ಮೆಯ ಪುತ್ರನನ್ನು ತುಂಬಾ ಗೌರವ ಮತ್ತು ಶ್ರದ್ಧೆಯಿಂದ ಸ್ಮರಿಸಿಕೊಳ್ಳುತ್ತಿರುವುದು ತುಂಬಾ ಸಂತೋಷದ ವಿಚಾರವಾಗಿದೆ. ಇಂತಹ ಒಂದು ವಾತಾವರಣವನ್ನು ಸೃಜಿಸಿದ್ದಕ್ಕಾಗಿ ತಮಗೆ ಅನಂತ ಧನ್ಯವಾದಗಳನ್ನು ಮೊದಲಿಗೆ ಅರ್ಪಿಸುತ್ತೇನೆ. ಸ್ವಾಮಿ ವಿವೇಕಾನಂದರನ್ನು ಕುರಿತು ಎಲ್ಲಾ ಹಿರಿಯರೂ ಸಹ ಬಹಳ ಆತ್ಮೀಯತೆಯಿಂದ, ಗೌರವಪೂರ್ಣವಾಗಿ ಮಾತನಾಡುತ್ತಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ನಾಲ್ಕು

ಜನರನ್ನು ಆದರ್ಶ ವ್ಯಕ್ತಿಗಳನ್ನಾಗಿ ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಇವೊತ್ತಿಗೂ ಕೂಡ ನನಗೇನಾದರೂ ಮಾನಸಿಕವಾಗಿ ತೊಂದರೆಗಳಾದರೆ ಮತ್ತೆ ಮತ್ತೆ ಅವರ ಗ್ರಂಥಗಳನ್ನು, ಅವರ ಬಗ್ಗೆ ಬರೆದಿರುವ ಪುಸ್ತಕಗಳನ್ನು ಓದಿ ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುತ್ತೇನೆ. ಆ ನಾಲ್ಕು ಜನರಲ್ಲಿ ಆದ್ಯರು ಎಂದರೆ ಸ್ವಾಮಿ ವಿವೇಕಾನಂದರು, ಎರಡನೆಯವರಾಗಿ ನಮ್ಮ ಸ್ವಾತಂತ್ರ್ಯ ಸೇನಾನಿಯಾಗಿದ್ದಂತಹ ಧೀಮಂತ ವ್ಯಕ್ತಿ ಸುಭಾಷ್‌ಚಂದ್ರ ಬೋಸ್ ಅವರು, ಮೂರನೆಯವರು ಜಾನ್ಸಿ ರಾಣಿ ಲಕ್ಷ್ಮೀಬಾಯಿ ಅವರು. ಸ್ತ್ರೀ ಶಕ್ತಿ ಅಷ್ಟೇ ಅಲ್ಲ, ಪರಮ ಭಕ್ತಿ ಎಂದರೇನು, ಸ್ವಾತಂತ್ರ್ಯದ ಮಹೋನ್ನತವಾದಂತಹ ಒಂದು ಆತ್ಮಶಕ್ತಿ ಎಂದರೇನು ಎಂಬುದನ್ನು ತೋರಿಸಿಕೊಟ್ಟಂಥಹ ಆ 20 ವರ್ಷದ ತರುಣಿ ಯುದ್ಧದಲ್ಲಿ ಒಂದು ಕಣ್ಣು ಕತ್ತರಿಸಲ್ಪಟ್ಟರು ಕೂಡ ಇನ್ನೊಂದು ಕಣ್ಣನ್ನಿಟ್ಟುಕೊಂಡು ಅಷ್ಟು ಮಾತ್ರದಿಂದಲೇ ಕೊನೆಗೆ ನಾನು ಪರಕೀಯರ ಕೈಗೆ ಸಿಗಬಾರದು, ನನ್ನ ತಾಯ್ನಾಡಿನಲ್ಲಿಯೇ ಸಾಯಬೇಕು ಎಂದು ಅಲ್ಲಿಗೆ ಬಂದು ಪ್ರಾಣಬಿಟ್ಟಂತಹ ವೀರ ಮಹಿಳೆ ಲಕ್ಷ್ಮೀಬಾಯಿ. ಮತ್ತೊಬ್ಬರು ನಮ್ಮ ಕರ್ನಾಟಕದ ಮಹಾ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಈ ನಾಲ್ಕು ಜನರನ್ನು ನಾವು ಸ್ಮರಿಸುತ್ತಿದ್ದರೆ, ಅವರ ತ್ಯಾಗಮಯ ಜೀವನ, ಅವರು ಬದುಕಿದ ರೀತಿ, ಮಾಡಿದ ಸಾಧನೆಗಳೆಲ್ಲವೂ ನಾವು ಎಂದಿಗೂ ಅಡ್ಡದಾರಿ ಹಿಡಿಯುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅತ್ಯಂತ ಆದರ್ಶ ವ್ಯಕ್ತಿಗಳಾಗಿ ನಮ್ಮೆದುರು ನಿಲ್ಲುತ್ತಾರೆ. ಸ್ವಾಮಿ ವಿವೇಕಾನಂದ ಎಂಬುದು ಅವರ ಸನ್ಯಾಸ ನಾಮ ಎಂಬುದು ಎರಡನೆಯ ಜನ್ಮ, ಸನ್ಯಾಸ ಎಂದರೆ ಎಲ್ಲವನ್ನೂ ಬಿಟ್ಟು ಬಿಡುವುದಲ್ಲ, ಸಂಗವನ್ನು ತ್ಯಜಿಸುವುದಷ್ಟೇ. ಅವರು ಮಹಾ ಕರ್ಮ ಯೋಗಿಗಳಾಗಿದ್ದರು. ನಿತ್ಯವು ಕೆಲಸದಲ್ಲಿ ಪ್ರವೃತ್ತರಾಗಿರಬೇಕು, ಭಾರತ ದೇಶ ನಿದ್ದೆ ಮಾಡುತ್ತಿದೆ, ಎಚ್ಚೆತ್ತು ಕೆಲಸದಲ್ಲಿ ತೊಡಗಬೇಕು. ಅವರು ಗೀತೆಯ ಉಪದೇಶವನ್ನು ಮತ್ತೆ ಮತ್ತೆ ಹೇಳುತ್ತಿದ್ದರು. ಕ್ಷುದ್ರಂ ಹೃದಯದೌರ್ಬಲ್ಯಂ ತ್ವಕ್ತ್ವೋತ್ತಿಷ್ಠ ಪರಂತಪ ಎಂದು ಶ್ರೀ ಕೃಷ್ಣ ಅರ್ಜುನನಿಗೆ ಹೇಳಿದ. ಅಂದರೆ ನಿನ್ನ ದೌರ್ಬಲ್ಯವನ್ನು ತ್ಯಜಿಸಿ ಕೆಲಸಕ್ಕೆ ತೊಡಗು ಎಂದು ಅರ್ಥ. ಈ ಉಪದೇಶವನ್ನು ಪುನಃ ಪುನಃ ಹೇಳುತ್ತಿದ್ದರು. ಇಂತಹ ಉಪದೇಶ ಭಾರತಕ್ಕೆ

ಇವತ್ತು ಬೇಕಾಗಿರುವಂತದ್ದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಅವರ ಜನ್ಮ ನಾಮ ನರೇಂದ್ರ ಎಂದು. ಅವರ ತಾಯಿ ಭುವನೇಶ್ವರಿದೇವಿ, ಪರಮೇಶ್ವರರಲ್ಲಿ ಪ್ರಾರ್ಥಿಸಿ ನನಗೆ ಒಂದು ಮಗನನ್ನು ಕೊಡು ಎಂದು ಬಹಳ ಹರಕೆ ಹೊತ್ತಿಕೊಂಡ ನಂತರ ಪರಮೇಶ್ವರನ ದಯೆಯಿಂದ ಹುಟ್ಟಿದಂತಹ ಮಗುವೆ ನರೇಂದ್ರ. ನರೇಂದ್ರ ಎಂದರೆ ನರರಲ್ಲಿ ಇಂದ್ರ. ಶ್ರೇಷ್ಠನಾದಂತಹ ವ್ಯಕ್ತಿ ಎಂಬ ಹೆಸರನ್ನಿಟ್ಟರು. ಆದರೆ ಈ ನರೇಂದ್ರ ಎಷ್ಟು ತುಂಟನಾಗಿರುತ್ತಿದ್ದ ಎಂದರೆ ಅವರ ತಾಯಿಗೆ ಅವರನ್ನು ನೋಡಿಕೊಳ್ಳುವುದಕ್ಕೆ ಸಾಕಾಗಿ ಹೋಗುತ್ತಿತ್ತು. ಆಗ ಅವರ ತಾಯಿ ಪರಮೇಶ್ವರನಲ್ಲಿ ಅಪ್ಪ ಪರಮೇಶ್ವರ ನನಗೆ ಒಂದು ಸಾಧು, ಸಂತನಾದಂತಹ ಒಂದು ಮಗುವನ್ನು ಕೊಡು ಎಂದು ಕೇಳಿಕೊಂಡರೆ ನಿನ್ನ ಗಣಗಳಲ್ಲಿರುವಂತಹ ಒಂದು ಭೂತವನ್ನೇ ಕಳುಹಿಸಿಕೊಟ್ಟಿದ್ದೀಯಲ್ಲ ಎಂದು ತುಂಬಾ ಬೇಸರ ಮಾಡಿಕೊಳ್ಳುತ್ತಿದ್ದರಂತೆ. ಅಂದರೆ ನರೇಂದ್ರರವರು ಭೂತಚೇಷ್ಟೆ ಮಾಡುತ್ತಿದ್ದರಂತೆ. ಅಷ್ಟೊಂದು ತುಂಟನಾಗಿದ್ದರಂತೆ. ಇಂತಹ ಒಬ್ಬ ವ್ಯಕ್ತಿ ಶ್ರೀ ರಾಮಕೃಷ್ಣ ಪರಮಹಂಸರ ಪದತಲಕ್ಕೆ ಬಂದ ನಂತರ ಅವರ ಪ್ರಭೆಯಿಂದ ಯಾವ ರೀತಿ ವ್ಯತ್ಯಾಸವಾಯಿತು ಎಂಬುದು ನಮಗೆಲ್ಲರಿಗೂ ತಿಳಿದಿದೆ. ಸ್ವಾಮಿ ವಿವೇಕಾನಂದರ ಹೆಸರು ಸಹ ತುಂಬಾ ಶ್ರೇಷ್ಠವಾಗಿದೆ, ಅರ್ಥಪೂರ್ಣವಾಗಿದೆ. ಸಂಸ್ಕೃತದಲ್ಲಿ ವಿವೇಕ ಎಂದರೆ discrimination, ವಿವೇಚನೆ ಎಂದರ್ಥ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ವಿವೇಚನೆ ಮಾಡುವುದು ಇದೆಯೆಲ್ಲಾ ಅದಕ್ಕೆ ವಿವೇಕ ಎಂಬ ಪದ ಇದೆ. ಸ್ವಾಮಿ ವಿವೇಕಾನಂದರ ಬಗ್ಗೆ ಮಾನ್ಯ ಮಧುಸೂದನ್‌ರವರು ಒಂದು ಮಾತು ಹೇಳಿದರು: He was the bitter critic of Hinduism. At the same time, he is the oneWhopropound to the world that this is the greatest religion, mother of religions ಹಾಗಾಗಿ critic ಆಗಿದ್ದರು. at the same time, he was a great promoter and a devote of it (Hinduism). ಈ ಸಂದರ್ಭದಲ್ಲಿ ತಮ್ಮ ಮಧ್ಯ ಒಂದು ವಿಷಯವನ್ನು ನಿರೂಪಿಸಿಕೊಳ್ಳುವುದಕ್ಕೆ, ಜ್ಞಾಪಿಸಿಕೊಳ್ಳುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಸ್ವಾಮಿ ವಿವೇಕಾನಂದರು Columbus hall ನಲ್ಲಿ ನಡೆದ

**'parliament of the world's religion'** ನಲ್ಲಿ ಸುಮಾರು ಏಳೆಂಟು ಸಾವಿರ ಜನರು ಕುಳಿತುಕೊಂಡು ಎಲ್ಲವನ್ನೂ ನೋಡುತ್ತಿದ್ದಾರೆ. ಎಲ್ಲರಲ್ಲಿಯೂ ಏನೋ ಒಂದು ರೀತಿಯ ಉತ್ಸಾಹ. ಏಕೆಂದರೆ ಜಗತ್ತಿನಲ್ಲಿ ಮೊದಲ ಸಲ ಈ ರೀತಿ ನಡೆಯುತ್ತಿದೆ ಎಂದು. ಆದರೆ ಉಪನಿಷತ್ತಿನಲ್ಲಿ ಜನಕಮಹಾರಾಜರ ಆಸ್ಥಾನ ದಲ್ಲಿ **parliament of the world's religion** ಆಗಿರುವಂತಹದ್ದರ ಬಗ್ಗೆ ಒಂದು ಉಲ್ಲೇಖವಿದೆ. ಆದರೆ ಆಧುನಿಕ ಕಾಲದಲ್ಲಿ ಆಗಿದ್ದು ಮೊದಲನೆ ಸಲ. ಮಾನ್ಯ ಮಧುಸೂದನ್‌ರವರು ಹೇಳಿದಂತೆ ಆ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಮೊದಲನೆ ದಿವಸ ಮಾತನಾಡುವುದಕ್ಕೆ ನರ್ವಸ್ ಆಗಿದ್ದರು he was very nervous. ಏಕೆಂದರೆ ಮೊದಲಬಾರಿಗೆ ಅಂತಹ ಒಂದು ಅದ್ಭುತವಾದ ಸಭೆಯನ್ನು ನೋಡಿದ್ದಾರೆ. ದೇಶ ವಿದೇಶಗಳ ಎಲ್ಲಾ ಧರ್ಮೀಯರು ಹಾಗೂ ಅದರ ಮುಖಂಡರುಗಳು ಬಂದಿದ್ದಾರೆ. ಒಬ್ಬರಿಗಿಂತ ಒಬ್ಬರು ವಾಚಾಳಿಯನ್ನು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅವರವರ ಧರ್ಮವನ್ನು ಅವರುಗಳು ನಮ್ಮ ಧರ್ಮವೇ ಶ್ರೇಷ್ಠ, ನಮ್ಮ ಧರ್ಮವೇ ಶ್ರೇಷ್ಠವೆಂದು propound ಮಾಡುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಕೊನೆಯ ದಿವಸ ನಾನು ಮಾತನಾಡುತ್ತೇನೆಂದು ಅವಕಾಶ ತೆಗೆದುಕೊಂಡರಂತೆ. ಆಗ ಅವರು ಎದ್ದುನಿಂತು "Mysisters and brothrs of America". . . ಎಂಬ ಒಂದು ಮಾತ ಹೇಳುತ್ತಿದ್ದಂತೆ columbus hall ನಲ್ಲಿದ್ದಂತಹ ಆರೇಳು ಸಾವಿರ ಜನ ಒಟ್ಟಿಗೆ ಎದ್ದುನಿಂತು ಭೂಮಂಡಲವೇ ಭೋರ್ಗರೆವಂತೆ ಕರತಾಂಡವನ್ನು ಮಾಡಿದರಂತೆ. ಅದು ಸುಮಾರು ಮೂರರಿಂದ ನಾಲ್ಕು ನಿಮಿಷ ನಿರಂತರವಾಗಿ ನಡೆಯಿತಂತೆ ಇದನ್ನು ನಮಗೆ ಹೇಳುತಿದ್ದವರು ಯಾರು ಎಂದರೆ Marie louise burke ಎಂಬ ದೊಡ್ಡ scholors and devote of sri Ramkrishna ಅವರು ಬೇಲೂರು ಮಠದಲ್ಲಿದ್ದರು ಅವರು swami Vivekananda in America : new discoveriese ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ ಅವರು ಈ ಮಾತನ್ನು ಸೇರಿಸುತ್ತಾರೆ. ಏನೆಂದರೆ, ಇಂಡಿಯಾದಲ್ಲೆಲ್ಲಾ ಪ್ರಚಾರವಾಗಿರುವುದೇನೆಂದರೆ,ಅವರು "my sisters and brothers…" ಎಂದು ಕರೆದಿದ್ದಕ್ಕೆ ಎಲ್ಲಾ ಚಪ್ಪಾಳೆ ಹೊಡೆದು

ಅವರನ್ನು ಮೆಚ್ಚಿಕೊಂಡರು ಎಂದು ಆದರೆ ಅದು ಹಾಗಲ್ಲ, ಅದಕ್ಕೂ ಮೊದಲು ಸುಮಾರು ಜನರು "my sisterand brothers…."ಎಂದು ಎಲ್ಲರೂ ಕರೆದಿದ್ದರು.ನನಗನಿಸುತ್ತದೆ."it is the spontaneous attrction of the human soul to the spiritually graced.there lies the greatnessand uniqueness of swami Vivekananda" ಬೇರೆಯವರೆಲ್ಲರೂ ಮಾತನಾಡಿದ್ದರು, ಎಲ್ಲಾ ಆಗಿದ್ದರು, ವಾಗ್ಮಿಗಳಾಗಿದ್ದರು. ಆದರೆ ಅವರಲ್ಲಿ ಆಧ್ಯಾತ್ಮ ಸಿದ್ಧಿ ಇರಲಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರ ಒಂದು ಪ್ರಭೆಯಿಂದ ಅವರಿಗೆ ಆಧ್ಯಾತ್ಮದ ಸಿದ್ಧಿ ದೊರೆತಿತ್ತು, ಅವರು ಬಾಯಿ ಬಿಟ್ಟ ಕೂಡಲೇ ಅವರ ಚೈತನ್ಯದ ಒಂದು ಪ್ರವಾಹ ಎಲ್ಲಾ ಕಡೆ ಹರಡಿ, ಎಲ್ಲರಿಗೂ ಕೂಡ ಅಯತ್ನಿತವಾಗಿ, effortlessly and spontaneously, ತಮಗೆ ಅರಿವೇ ಇಲ್ಲದೆಯೇ ಎಲ್ಲರೂ ಕೂಡ ಎದ್ದು ನಿಂತು ತಮ್ಮಲ್ಲಿಯೂ ಕೂಡ ಚೈತನ್ಯ ಸಂಚಾರವಾಯಿತು, ಮಿಂಚಿನ ಸಂಚಾರವೇ ಇಡೀ Columbus hall ನಲ್ಲಿ ನಡೆಯುತ್ತಿದೆಯೋ ಎನ್ನುವ ರೀತಿಯಲ್ಲಿ ಎಲ್ಲರೂ ಎದ್ದು ನಿಂತು ಸ್ವಾಮಿ ವಿವೇಕಾನಂದರರಿಗೆ ತಮ್ಮ ಗೌರವವನ್ನು ತೋರಿಸಿದರಂತೆ. ಈ ರೀತಿ marie louise burke ಹೇಳಿದ್ದಾರೆ.ಆಗ ಸ್ವಾಮಿ ವಿವೇಕಾನಂದರು instant success ಆದರು ಏಕೆಂದರೆ ಅವರು ಕೇವಲ ಮಾತನಾಡಿದ್ದಕ್ಕಲ್ಲ, ಅವರ ಹೃದಯದಲ್ಲಿ ಇದ್ದಂತಹ ಅಪಾರವಾದ ಆಧ್ಯಾತ್ಮ ಸಿದ್ಧಿ ಭಾರತದ ಈ ಆಸ್ತಿಯನ್ನು ಅವರು ಅಲ್ಲಿಗೆ ಕೊಂಡ್ಯೊಯ್ದಿದ್ದರು, ಅದರಲ್ಲಿ ಸ್ವಲ್ಪ ಎಲ್ಲರಿಗೂ ಹಂಚಿದರು. ಅದಾದ ಮೇಲೆ ಅವರನ್ನು ನೋಡುವುದಕ್ಕೆ, ಅವರ ಬಟ್ಟೆಯ ಹಂಚನ್ನು ಮುಟ್ಟುವುದಕ್ಕೆ queue ನಿಲ್ಲುತ್ತಿದ್ದರಂತೆ. ಇಂಥದ್ದರಲ್ಲಿ ಒಬ್ಬಕೆಯಂತೂ she was so much impressed by the swamiji swamiji, I want to marry you ಎಂದು ಹೇಳುತ್ತಾಳೆ. ಅದಕ್ಕೆ ಸ್ವಾಮಿ ವಿವೇಕಾನಂದರೆ "oh my mother why? ಎಂದು ಕೇಳುತ್ತಾರೆ. ಏಕೆಂದರೆ ಅವರು why ಎಲ್ಲಾ ಸ್ತ್ರೀಯರನ್ನು ಅದೇ ರೀತಿ ಕರೆಯುತ್ತಿದ್ದರು. ಅವರು ಎಂದು ಕೇಳುತ್ತಾರೆ. ಅದಕ್ಕೆ ಆಕೆ ಹೇಳಿದಳು. "I want to have a son like you". ಅದಕ್ಕೆ ಅವರು "mother, I am your son" ಹೇಳಿದರಂತೆ ಅದಕ್ಕೆ ಇದು ಭಾರತದ ಆಧ್ಯಾತ್ಮಸಿದ್ಧಿ bernad shaw ಒಂದು ಕಡೆ ಹೇಳಿದ್ದರು,

ಅವರನ್ನು ಯಾರೋ ಒಬ್ಬ ಸುಂದರಿಯಾದಂತಹ model ಕೇಳಿದಂತೆ ನಾನು ನಿಮ್ಮನ್ನು ಮದುವೆ ಮಾಡಿಕೋಳ್ಳಬೇಕು ನಮಗೆ ಮಕ್ಕಳಾಗಬೇಕು ಎಂದು. ಏಕೆಂದರೆ, ಅವಳು ಹೇಳಿದಂತೆ "your brain and my beauty" ಎಂದು "ಇವೆರಡೂ combine ಆದರೆ there will be a beautiful creation" ಎಂದು ಆಕೆ ಹೇಳಿದಳಂತೆ. ಅದಕ್ಕೆ ಅವನು ಹೇಳಿದಳಂತೆ. "what if it gets reversed with your brain and my beauty?" ಎಂದು ಹೇಳಿದನಂತೆ. he was a great humowairt ಇದನ್ನು compare ಮಾಡಿ ಸ್ವಾಮಿ ವಿವೇಕಾನಂದರು ಈ ರೀತಿ ಹೇಳಿದರು. ಅದಾದ ಮೇಲೆ ಎಲ್ಲಾ ಕಡೆಗಳಲ್ಲಿಯೂ ಅವರ ಬಗ್ಗೆ ಎಷ್ಟು ಮೆಚ್ಚುಗೆ ಬಂತೋ ಅಷ್ಟೇ ಒಂದು hidden ದ್ವೇಷ ಕೂಡ ಶುರುವಾಯಿತು. ಏಕೆಂದರೆ, ಇವರು ಇದ್ದಕ್ಕಿದ್ದಂತೆ ದೊಡ್ಡವರಾಗಿ ಬಿಟ್ಟರಲ್ಲ ಎಂದು. ಸ್ವಾಮಿ ವಿವೇಕಾನಂದರವರನ್ನು ಭಾಷಣ ಮಾಡುವುದಕ್ಕೆ 'Hindiusm' ಬಗ್ಗೆ ಹೇಳುವುದಕ್ಕೆ ತುಂಬಾ ಕಡೆ ಕರೆಯುತ್ತಿದ್ದರು, ಆಗ ಒಂದು church school ನಲ್ಲಿ ಇವರನ್ನು ಭಾಷಣ ಮಾಡುವುದಕ್ಕೆ ಕರೆದರಂತೆ. ಈಗಾಗಲೇ ಅವರ ಮೇಲೆ ಸ್ವಲ್ಪ ದ್ವೇಷ ಬಂದಿತ್ತು. ಏಕೆಂದರೆ ಅವರ ಉದ್ದೇಶ ಇದ್ದಿದ್ದೆ ಬೇರೆ. ಇಲ್ಲಿ ನೆಡೆದಿದಿದ್ದೇ ಬೇರೆ ಅದಾದ ನಂತರ ಆವೋತ್ತಿನ ದಿವಸ ಅವರನ್ನು ಕರೆದುಕೊಂಡು ಹೋದಾಗ ಒಂದು ಕಡೆ ಹೋಗಿ "See where is your Bhagavat Geetha" ಎಂದು ಕೇಳಿದರಂತೆ. ಅವರು ನೋಡಿದಾಗ ಎಲ್ಲಾ ಗ್ರಂಥಗಳನ್ನು Quoran, Bible, Shintosm, Taoism, Buddhism, Jainism ಇನ್ನೂ ಪ್ರಪಂಚದಲ್ಲಿ ಯಾವ ಯಾವ ಧರ್ಮಗಳು ಇವೆಯೋ ಎಲ್ಲಾ ಧರ್ಮಗಳು ಗ್ರಂಥಗಳನ್ನು ಮೇಲೆ ಇಟ್ಟು ಕೆಳಗಡೆ ಭಗವದ್ಗೀತೆಯ ಗ್ರಂಥವನ್ನು ಇಟ್ಟಿದ್ದರಂತೆ, "see where is your bhagavad geetha, the foundation of your religion" ಎಂದು ಕೇಳಿದರಂತೆ. ಅದಕ್ಕೆ ಸ್ವಾಮಿ ವಿವೇಕಾನಂದರು ಸ್ವಲ್ಪ ಕೂಡ ಬೇಜಾರು ಮಾಡಿಕೊಳ್ಳದಂತೆ ಹೇಳಿದರಂತೆ "I am so happy that shows the bhagavadgeetha is the foundation of the whole set of religions" ಎಂದು ಹೇಳಿದರಂತೆ ಅಂದರೆ ಭಗವದ್ಗೀತೆಯಲ್ಲಿ ಎಲ್ಲಿಯೂ ಸಹ ದೊಡ್ಡದು, ಚಿಕ್ಕದು ಎಂದು ಹೇಳಿಲ್ಲ. ಕೊನೆಯಲ್ಲಿ ಶ್ರೀ ಕೃಷ್ಣ ಹೇಳುವುದು

ಒಂದೇ ಮಾತು 18 ಅಧ್ಯಾಯದಲ್ಲಿ 736 ಪದ್ಯಗಳಲ್ಲಿ ಎಲ್ಲವನ್ನೂ ಹೇಳಿ. ಕೊನೆಯಲ್ಲಿ **"ಹೇ ಅರ್ಜುನ ನಾನು ಹೇಳಿದೆ ಎಂದು ನೀನು ತಿಳಿದುಕೊಳ್ಳುವುದು ಬೇಡ, ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು"** ಎಂದು ಹೇಳುತ್ತಾನೆ. ಅಂದರೆ, ನಾನು ಹೇಳಿದ್ದೆಲ್ಲವನ್ನೂ ನೀನು ಮತ್ತೆ ವಿಮರ್ಶೆ ಮಾಡಿ. ನಿನಗೆ ಹೇಗೆ ತೋರುತ್ತದೆಯೋ ಹಾಗೆ ಮಾಡು ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಆದುದರಿಂದ ಇದು ಭಗವದ್ಗೀತೆಯ spirit ಯಾವುದನ್ನು ಕೂಡ ಹೀಗೆಯೇ ಆಗಬೇಕು, ನಾನು ಹೇಳಿದ್ದೇ ಕೇಳಬೇಕು ಎಂದು ಆಗ್ರಹ ಮಾಡುವುದಿಲ್ಲ. ಈ ಒಂದು openness ಈ ಒಂದು catholicity-ಮುಗ್ಧತೆ ಎನ್ನುವುದು ಇದರಲ್ಲಿದೆ. ಅದಕ್ಕೋಸ್ಕರವಾಗಿ ಸ್ವಾಮಿ ವಿವೇಕಾನಂದರು ಸಂತೋಷಪಟ್ಟರಂತೆ. ಸ್ವಾಮಿ ವಿವೇಕಾನಂದರ ಕಾಲು ಎಳೆಯುವುದಕ್ಕೆ ಯಾರು ಪ್ರಯತ್ನ ಪಟ್ಟರೋ ಅವರಿಗೆ ಮುಖಭಂಗವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಸ್ವಾಮಿ ವಿವೇಕಾನಂದರವರು ಅದ್ಭುತವಾದ ವೀರ ಚೇತನ. ಅವರನ್ನು ಕುರಿತು ನಾವು ಸ್ಮರಣೆ ಮಾಡಿಕೊಳ್ಳುತ್ತಿರುವುದು ನಿಜಕ್ಕೂ ನಮಗೆ ಶ್ರೇಯಸ್ಕರ. ಸ್ವಾಮಿ ವಿವೇಕಾನಂದರ ಬಗ್ಗೆ ನಾವು ಪ್ರತಿನಿತ್ಯ ಪಠಣ, ಜಪ ಮಾಡಬೇಕು. ಏಕೆಂದರೆ ಭಾರತ ದೇಶ ಅನಾಗರಿಕ, barbarian ಎಂದು ಹೊರದೇಶಗಳು ಯಾವಾಗ ನಮ್ಮನ್ನು ಅಣಕಿಸಿ ಅವಮಾನ ಮಾಡುತ್ತಿದ್ದರೋ ಅಂತಹ ಸಂದರ್ಭದಲ್ಲಿ ಈ ದೇಶ ಅತ್ಯಂತ ಶ್ರೇಷ್ಠವಾದಂತಹದ್ದು, ಮೇಧಾಶಕ್ತಿ ಉಳ್ಳಂಥದ್ದು, ನಾಗರೀಕತೆಯುಳ್ಳಂಥದ್ದು, ಆಧ್ಯಾತ್ಮಕತೆಯ ಸಿದ್ಧಿಯನ್ನು ಪಡೆದಿದ್ದು ಎನ್ನುವಂಥದ್ದನ್ನು ಪ್ರಪಂಚಕ್ಕೆಲ್ಲಾ ಡಂಗೂರ ಹಾಕಿ ಸಾರಿ ಪ್ರಪಂಚದ ಎಲ್ಲಾ ದೇಶಗಳ ಮಧ್ಯ ಭಾರತಕ್ಕೆ ಒಂದು ಗೌರವ ಸ್ಥಾನವನ್ನು ತಂದುಕೊಟ್ಟರು. ನಾವು ಆವತ್ತಿನಿಂದ ಭಾರತ ದೇಶ ಶ್ರೇಷ್ಠವಾದುದು ಹಾಗೂ ಶ್ರೇಷ್ಠತೆಯನ್ನು ಪುನರ್ ಸ್ಥಾಪಿಸಿದಂಥವರು ಸ್ವಾಮಿ ವಿವೇಕಾನಂದರು ಎಂದು ಹೇಳುತ್ತಲೇ ಬಂದಿದ್ದೇವೆ. ಅವರಿಗೆ ಕೃತಕವಾಗಿ ಕೇಂದ್ರ ಸರ್ಕಾರ ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು "ಯುವಕರ ದಿನ" ವನ್ನಾಗಿ ಆಚರಣೆ ಮಾಡುತ್ತಿದೆ. ಅವರು ಮುವತ್ತೊಂಭತ್ತು ಮುಕ್ಕಾಲು ವರ್ಷವಾದಾಗ even before he reached forty years of age, he left his body. ಅವರನ್ನು ಸತ್ತರು

ಎಂದು ಹೇಳುವುದಿಲ್ಲ. Voluntarilly he left his body. ಹಾಗಾಗಿ ಅವರು ಚಿರಯುವಕರು, ಭಾತರ ದೇಶದ ಯುವಶಕ್ತಿಯನ್ನು ಪ್ರತಿಪಾದಿಸುವಂಥವರು. ಅಂಥವರನ್ನು ನಾವು ಇವತ್ತಿನ ದಿವಸಸ್ಮರಣೆ ಮಾಡಿಕೊಳ್ಳುತ್ತಿರುವಂಥದ್ದು ಎಲ್ಲರಿಗೂ ಕೂಡ ತುಂಬಾ ತುಂಬಾ ಶ್ರೇಯಸ್ಕರ. ಇಷ್ಟು ಸಮಯ ನನಗೆ ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿರುವ ತಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಗಳೇ, ಸ್ವಾಮಿ ವಿವೇಕಾನಂದರು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಗೆ ಬಹಳ ದೊಡ್ಡ ಮಹತ್ವವನ್ನು ತಂದುಕೊಟ್ಟಿದ್ದಾರೆ. ಅವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಬುದ್ಧ ಮತ್ತು ಗಾಂಧೀಜಿಯವರನ್ನು ಸಹ ಈ ಸಂದರ್ಭದಲ್ಲಿ ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಭಾರತದ ಪರಂಪರೆ ಮತ್ತು ಅದರ ಮಹತ್ವವನ್ನು ಇಡೀ ವಿಶ್ವದಲ್ಲಿಯೇ ಹೆಚ್ಚು ಮಾಡುವ ಸಲುವಾಗಿ ತಮ್ಮದೇ ಆದ ರೀತಿಯಲ್ಲಿ ಸಾಧನೆಗಳನ್ನು ಮಾಡಿದ್ದಾರೆ. ಅದು ಎಲ್ಲ ಕಾಲಕ್ಕೂ ಪ್ರಸ್ತುತವಾಗಿದೆ. ಈ ಜಗತ್ತು ಇರುವ ತನಕ ಅವರು ಮಾಡಿರತಕ್ಕ ಪ್ರಯತ್ನ, ಸಾಧನೆಗಳು ಪ್ರಸ್ತುತವಾಗಿರುತ್ತವೆ. ಇದು ಎಲ್ಲಾ ಕಾಲದಲ್ಲಿಯೂ ಸಹ ನಮ್ಮ ಸಮಾಜಕ್ಕೆ ಸ್ಫೂರ್ತಿಯಾಗಿರುತ್ತದೆ. ಸ್ವಾಮಿ ವಿವೇಕಾನಂದರು ತಮ್ಮ 39 ನೇ ವಯಸ್ಸಿನಲ್ಲಿಯೇ ತಮ್ಮಲ್ಲಿದ್ದ ಆಗಾಧ ದೂರದೃಷ್ಟಿಯಿಂದ ತಮ್ಮದೇ ಆದಂತಹ ಹೆಜ್ಜೆ ಗುರುತುಗಳನ್ನು ನಮ್ಮ ಇತಿಹಾಸದ ಪುಟಗಳಲ್ಲಿ ಉಳಿಸಿ ಹೋಗಿದ್ದಾರೆ. ಅವರ ವ್ಯಕ್ತಿತ್ವ ಎಂತಹವರಿಗೂ ಸಹ ಆಕರ್ಷಣೀಯವಾಗಿದೆ. ಸ್ವಾಮಿ ವಿವೇಕಾನಂದರು ಬಹಳ ಜಾತ್ಯಾತೀತವಾಗಿ ಆಲೋಚನೆಯನ್ನು ಮಾಡುತ್ತಿದ್ದರು. ಎಲ್ಲ ಧರ್ಮಗಳ ಬಗ್ಗೆ ಹೆಚ್ಚಿನ ಗೌರವವನ್ನು ಇಟ್ಟುಕೊಂಡು ಭಾರತೀಯ ಪರಂಪರೆ ಮತ್ತು ಸಂಸ್ಕೃತಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಅಮೇರಿಕಾ ಪ್ರವಾಸಕ್ಕೆ ಕಳುಹಿಸಲು sponsor ಮಾಡಿದಂತಹ ಮೈಸೂರು ಸಂಸ್ಥಾನದ ಮಹಾರಾಜರನ್ನು ಸಹ ಸ್ಮರಿಸಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯಕ್ಕೂ ಪಶ್ಚಿಮ ಬಂಗಾಳಕ್ಕೂ

ಅನೇಕ ವಿಚಾರಗಳಲ್ಲಿ ಬಹಳಷ್ಟು ಹೋಲಿಕೆಗಳಿವೆ. ನಮ್ಮ ಕನ್ನಡ ಮತ್ತು Bengali literature ವಿಚಾರ, ಇಲ್ಲಿನ ವ್ಯಕ್ತಿಗಳು ಸಮಾಜಕ್ಕೆ ನೀಡಿರತಕ್ಕ ಕೊಡುಗೆಗಳು, ಸುಭಾಷ್‌ಚಂದ್ರಬೋಸ್, ರವೀಂದ್ರನಾಥ ಠಾಗೋರ್‌ರವರು ಈ ದೇಶಕ್ಕಾಗಿ ಮಾಡಿದಂತಹ ಸಾಧನೆಗಳು. ಹಾಗೆಯೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಶ್ರೀಯುತರಾದ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಬಸವಣ್ಣನವರು, ಕುವೆಂಪುರವರು, ಟಿಪ್ಪು ಸುಲ್ತಾನ್‌ರವರು, ಕಿತ್ತೂರು ರಾಣಿ ಚೆನ್ನಮ್ಮನವರು, ಈ ದೇಶಕ್ಕೆ ಒಂದು ಉತ್ತಮ ಕೊಡುಗೆಯನ್ನು ನೀಡಿದ್ದಾರೆ. ಪಶ್ಚಿಮ ಬಂಗಾಳ ಕೂಡ ನಮ್ಮ ರಾಜ್ಯದ ಹಾಗೆ ಅನೇಕ ವಿಚಾರಗಳಲ್ಲಿ progressive approach ಆಗಿದೆ. ಮಾನ್ಯ ನಾಣಯ್ಯನವರು ತಮ್ಮ ಭಾಷಣದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಒಂದು ವಿಚಾರವನ್ನು ಹೇಳುವುದನ್ನು ಮರೆತರು. ಸ್ವಾಮಿ ವಿವೇಕಾನಂದರು ಅಮೇರಿಕಾ ದೇಶಕ್ಕೆ ಹೋಗಿದ್ದ ಸಂದರ್ಭದಲ್ಲಿ ಅವರು ಬಹಳ smart and handsome ಆಗಿದ್ದ ಕಾರಣ ಗಂಡುಮಕ್ಕಳಿಗೆ ಅವರ personality ಇಷ್ಟವಾಗುತ್ತಿರುವಾಗ ಹೆಣ್ಣುಮಕ್ಕಳಿಗೆ ಅವರನ್ನು ನೋಡಿ ಮತ್ತಷ್ಟು ಖುಷಿಯಾಗಿರುತ್ತದೆ. He had a very attractive handsome personality. ಅವರಷ್ಟೇ ಸುಂದರವಾದ ಹೆಣ್ಣೊಬ್ಬಳು ಸ್ವಾಮಿ ವಿವೇಕಾನಂದರನ್ನು ನೋಡಿ "I feel like kissing you" ಎಂದಳಂತೆ, ಅದಕ್ಕೆ ವಿವೇಕಾನಂದರು ವಿಚಲಿತರಾಗುವುದಿಲ್ಲ. ಅವರು ಅವಳ ಮಾತನ್ನು ಒಪ್ಪಿಕೊಳ್ಳುತ್ತಾರೆ. ಆ ಹೆಣ್ಣುಮಗಳು ಅವರಿಗೆ ಬಹಳ ಪ್ರೀತಿ ಮತ್ತು ಅಭಿಮಾನ ದಿಂದ ಮುತ್ತನ್ನು ನೀಡುತ್ತಾಳೆ. ನಂತರ ಆ ಹೆಂಗಸು ಸ್ವಾಮಿ ವಿವೇಕಾನಂದರಿಗೆ "How do you feel?" ಎಂದು ಕೇಳಿದಾಗ "I feel like a sleeping stone" ಎಂದು ಹೇಳುತ್ತಾರೆ. ಅಂದರೆ ಎಂತಹ ಒಂದು ನಿರ್ಲಿಪ್ತತೆ ಸ್ವಾಮಿ ವಿವೇಕಾನಂದರಲ್ಲಿ ಇತ್ತು ಎನ್ನುವುದು ಇದರಿಂದ ತಿಳಿದು ಬರುತ್ತದೆ. ಅಂದರೆ ನಿರ್ಲಿಪ್ತ ಮನೋಭಾವನೆ ಎನ್ನುವುದು ಎಷ್ಟು ಮುಖ್ಯವಾಗುತ್ತದೆ ಎನ್ನುವುದನ್ನು ಇದರಿಂದ ತಿಳಿದುಕೊಳ್ಳಬಹುದು. ಆ ಕಾಲದಲ್ಲಿಯೇ ಅವರು ಕೈಗಾರಿಕೆಗಳ ಬಗ್ಗೆ ಸಾಕಷ್ಟು ಆಸಕ್ತಿಯನ್ನು ಹೊಂದಿದ್ದರು. ಕೈಗಾರಿಕೆಗಳ ಮೂಲಕ ಉದ್ಯೋಗವನ್ನು ಸೃಷ್ಟಿಸಬಹುದು ಎನ್ನುವ ಚಿಂತನೆಯನ್ನು ಹೊಂದಿದ್ದು,

ನವೀನ ಮಾದರಿಯ ಕೈಗಾರಿಕೆಗಳ ಬಗ್ಗೆ ಅಂದೇ ಆಲೋಚನೆಯನ್ನು ಮಾಡಿದ್ದರು ಎನ್ನುವುದರ ಬಗ್ಗೆ ಕೂಡ ನಾವು ಗಮನವನ್ನು ಹರಿಸಬೇಕಾಗುತ್ತದೆ. ಇಂತಹ ಶ್ರೇಷ್ಠ ವ್ಯಕ್ತಿತ್ವದ ವ್ಯಕ್ತಿಯು ನಮ್ಮ ದೇಶಕ್ಕೆ ಒಂದು ಹೆಮ್ಮೆ. ಆದ್ದರಿಂದಲೇ ಅಮೇರಿಕಾದ ಅಧ್ಯಕ್ಷ ಒಬಾಮರವರನ್ನು ನಮ್ಮ ದೇಶಕ್ಕೆ ಬಂದಿದ್ದ ಸಂದರ್ಭದಲ್ಲಿಯೂ ಸಹ ನಾವು ಶ್ರೀಯುತರಾದ ಮಹಾತ್ಮಗಾಂಧಿ, ಭಗವಾನ್ ಬುದ್ಧ ಮತ್ತು ಸ್ವಾಮಿ ವಿವೇಕಾನಂದರವರ ಸ್ಮರಣೆಯನ್ನು ಮಾಡುತ್ತೇವೆ. ಇದರಿಂದ ನಮ್ಮ ಸಮಾಜದ ಗೌರವ ಮತ್ತು ಮಹತ್ವವನ್ನು ಸದಾ ಕಾಲ ಹೆಚ್ಚು ಮಾಡುತ್ತದೆ. ನಾನು ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ನಾವು ಭಾರತೀಯರು ಮಾತ್ರವಲ್ಲದೇ ಪ್ರಪಂಚದಾದ್ಯಂತ ಜನರು ಸ್ವಾಮಿ ವಿವೇಕಾನಂದರವರನ್ನು ಗೌರವಿಸುತ್ತಾರೆ. ಆದರೆ ಅವರ ಹೆಸರಿನಲ್ಲಿ ಏನನ್ನಾದರೂ ಮಾಡುವುದನ್ನು ಮಾತ್ರ ಎಲ್ಲಾ ಸರ್ಕಾರಗಳು ನಿರ್ಲಕ್ಷ್ಯವನ್ನು ಮಾಡಿವೆ. ನಮ್ಮ ದೇಶದಲ್ಲಿ ಯಾವ ಸಂಘಸಂಸ್ಥೆಗಳು ಉತ್ತಮ ಕೆಲಸಕಾರ್ಯಗಳನ್ನು ಮಾಡತ್ತವೆ, ಅವರಿಗೆ ಮಾಹಾತ್ಮಗಾಂಧಿ, ಭಗವಾನ್ ಬುದ್ಧ ಮತ್ತು ಸ್ವಾಮಿ ವಿವೇಕಾನಂದರವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲು ಏನು ತೊಂದರೆ? ಅವರ ಹಂತಕ್ಕೆ ತಲುಪುವುದು ಕಷ್ಟ ಆದರೆ ಸ್ವಲ್ಪ ಮಟ್ಟಿಗಾದರೂ ಯಾವ ಸಂಸ್ಥೆಗಳು ಅವರುಗಳ ವಿಚಾರಧಾರೆಗಳನ್ನು ಇಟ್ಟುಕೊಂಡು ಕೆಲಸಗಳನ್ನು ಮಾಡುತ್ತಿದ್ದಾರೆ ಅವರಿಗೆ ಮಹಾತ್ಮಗಾಂಧಿ, ಭಗವಾನ್ ಬುದ್ಧ ಮತ್ತು ಸ್ವಾಮಿ ವಿವೇಕಾನಂದರವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡತಕ್ಕ ಕೆಲಸವನ್ನು ನಮ್ಮ ಕರ್ನಾಟಕ ಸರ್ಕಾರವಾದರೂ ಸಹ ಮಾಡಬೇಕಾಗುತ್ತದೆ.

**ಶ್ರೀ ಜಿ.ಮಧುಸೂದನ್ ಪದವೀಧರರ ಕ್ಷೇತ್ರ:** ಮಾನ್ಯ ಸಭಾಪತಿಗಳೇ, ಒಮ್ಮೆ ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದು ಒಂದು ತಿಂಗಳುಗಳ ಕಾಲ ನೆಲೆಸಿದ್ದಾಗ ಅವರು ಪ್ರತಿನಿತ್ಯ ಸಂಜೆ ಮೈಸೂರಿನ ಸದ್ವಿದ್ಯ ಶಾಲೆಯ ಒಂದು ಸ್ಥಳದಲ್ಲಿ ಪ್ರವಚನೆಯನ್ನು ನೀಡುತ್ತಿದ್ದರು. ಈಗಲೂ ಸಹ ಆ ಸ್ಥಳವನ್ನು ವಿವೇಕಾನಂದ ಹಾಲ್ ಎಂದು ಕರೆಯುತ್ತಾರೆ. ಅಲ್ಲೆಲ್ಲ ಅವರ ಜೀವನ ಚಿತ್ರಣವನ್ನು ಹೇಳತಕ್ಕ ಚಿತ್ರಗಳನ್ನು ಸಹ ಹಾಕಿದ್ದಾರೆ. ಅವರು ತಮ್ಮ

ಪ್ರವಚನಕ್ಕಾಗಿ ಬಳಸಿಕೊಂಡ ಸ್ಥಳವೂ ವಾಣಿಜ್ಯ ತೆರಿಗೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ.ಅದರ ಪಕ್ಕದಲ್ಲಿಯೇ ಶೌಚಾಲಯವಿದೆ. ಇಲಾಖೆಗಳ ನಡುವಿನ ಜಗಳದಿಂದ ಆ ಸ್ಥಳ ಇನ್ನೂ ಬಿಟ್ಟುಕೊಟ್ಟಿರುವುದಿಲ್ಲ. ನಮ್ಮ ಮೈಸೂರಿನ ಸಚಿವರಾದ ಸಿ .ಹೆಚ್. ವಿಜಯಶಂಕರ್‌ರವರು ಈಗ ಸದನದಲ್ಲಿಯೇ ಇದ್ದಾರೆ. ಅವರು ಇದಕ್ಕೊಂದು ಕಾಯಕಲ್ಪವನ್ನು ಹಾಕಿ, ವಿವೇಕಾನಂದರ ಆ ಸ್ಥಳವನ್ನು ಉಳಿಸಬೇಕು. ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್‌ನಲ್ಲಿ ಅದಕ್ಕಾಗಿ 5 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಅದು ಇಲ್ಲಿಯ ತನಕ ಸದುಪಯೋಗ ಆಗಿಲ್ಲ. ಅದರ ಬಗ್ಗೆ ಸರ್ಕಾರ ಗಮನವನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್**: ಮಾನ್ಯ ಸಭಾಪತಿಗಳೇ, ನನ್ನ ಉದ್ದೇಶವು ಸಹ ಅದೇ ಆಗಿದೆ. ಆ ದಿಕ್ಕಿನಲ್ಲಿ ಸರ್ಕಾರವೂ ಒಂದು ಪ್ರಾಮಾಣಿಕ ಪ್ರಯತ್ನ ವನ್ನು ಮಾಡಬೇಕು. ಇವನ್ನೆಲ್ಲ ಈ ವರ್ಷದಿಂದಲೇ ಜಾರಿಗೆ ತರಬೇಕು. ಇವತ್ತಿನ ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳು ಯಾವ ಸಮುದಾಯ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದೆ, ಆ ಜನಾಂಗದ ಮುಖ್ಯಸ್ಥರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ಮಹನೀಯರೆಲ್ಲರೂ ಸಹ ಯಾವುದೇ ಸಂದರ್ಭದಲ್ಲೂ ಜಾತಿಗೆ, ಯಾವುದೋ ಒಂದು ಸಮುದಾಯಕ್ಕೆ ಬೆಲೆ ನೀಡಿದವರಲ್ಲ. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗೆ ಇತಿಹಾಸದ ಪುಟಗಳಲ್ಲಿಯೇ ಎಲ್ಲ ಕಾಲಕ್ಕೂ ಬಹಳ ಮಹತ್ವವನ್ನು ತಂದು ಕೊಟ್ಟಿದ್ದಾರೆ. ಅವರುಗಳು ಸದಾ ನಮಗೆ ಸ್ಫೂರ್ತಿ ಆಗಬೇಕಾದರೆ, ಸಮಾಜದಲ್ಲಿ ಅಂತಹ ವಿಚಾರಧಾರೆಗಳು ಮುಖ್ಯ ಎಂದು ನಾವು ಭಾವಿಸುವುದಾದರೆ ನಾವು ಅವರಿಗೆ ನೀಡತಕ್ಕ ಕೊಡುಗೆಯಾಗಿ ಅಂತಹವರಿಂದ ಸ್ಫೂರ್ತಿ ಪಡೆಯುವ ಸಲುವಾಗಿ ಉತ್ತಮವಾಗಿ ಸೇವೆ ಸಲ್ಲಿಸತಕ್ಕ ಸಂಸ್ಥೆಗಳಿಗೆ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವ ವಿನಂತಿಯನ್ನು ಮಾಡಿಕೊಂಡು ತಮಗೆ ವಂದಿಸಿ, ನನ್ನ ಮಾತುಗಳನ್ನು ನಾನು ಮುಗಿಸುತ್ತೇನೆ.

**ಶ್ರೀಮತಿ ವಿಮಲಾಗೌಡರ ವಿಧಾನಸಭಾ ಕ್ಷೇತ್ರ**: ಮಾನ್ಯ ಸಭಾಪತಿಗಳೇ, ಈ ಅಧಿವೇಶನ ಆರಂಭವಾದಾಗಿನಿಂದ ಇವತ್ತಿನ ಸದಸನದಲ್ಲಿ ಸಂದರ್ಭವನ್ನು

ನೋಡಿದಾಗ ನನ್ನ ಮನಸ್ಸು ತುಂಬಿ ಬರುತ್ತಿದೆ. ಏಕೆಂದರೆ ಇದು ಮೇಲ್ಮನೆ ಎನ್ನುವ ಹಿರಿಮೆ, ಈ ಮೇಲ್ಮನೆಯ ಗೌರವವನ್ನು, ಈ ಮೇಲ್ಮನೆಯ ಚಿಂತಕರಚಾವಡಿ ಎನ್ನುವ ಮಾತನ್ನು ನಾವೆಲ್ಲರೂ ಸಾಬೀತು ಮಾಡುತ್ತಿದ್ದೇವೆ. ಈ ಒಂದು ಜಗತ್ತಿಗೆ ನಮ್ಮ ಭಾರತೀಯ ಪರಂಪರೆ, ಸಂಸ್ಕೃತಿ ಆಧ್ಯಾತ್ಮಕ ಚಿಂತನೆಯನ್ನು, ಜಗತ್ತಿಗೆ ರಾಷ್ಟ್ರಪ್ರೇಮದ ಚಿಂತನೆಯನ್ನು ಸಾರಿದಂತಹ ಧೀಮಂತ ವ್ಯಕ್ತಿತ್ವದ ವಿವೇಕಾನಂದರ 148ನೇ ಹುಟ್ಟುಹಬ್ಬದ ವಾರ್ಷಿಕೋತ್ಸವದ ಸ್ಮರಣೆಯನ್ನು ಮಾಡುತ್ತಿದ್ದೇವೆ. ನಿನ್ನೆಯವರೆಗೆ ರಾಡಿಯಾಗಿದ್ದ ಈ ಸದನ ಸರಾಗವಾಗಿ ಹರಿಯುವುದಕ್ಕೆ ತಾವು ಅವಕಾಶ ಕಲ್ಪಿಸಿ ಕೊಟ್ಟಿದ್ದೀರಾ. ಅದಕ್ಕೆ ಸ್ವಾಮಿ ವಿವೇಕಾನಂದರವರೆ ಪ್ರೇರಣೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಜಿ. ಮಧುಸೂದನ್**: ಮಾನ್ಯ ಸಭಾಪತಿಗಳೇ, ಇವತ್ತು ಸ್ವಾಮಿ ವಿವೇಕಾನಂದರವರ ಜನ್ಮ ದಿವಸ ಇರುವ ಹಾಗೆಯೇ ನಮ್ಮ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ತಮ್ಮ ಅಂತಿಮ ಶ್ವಾಸವನ್ನು ತೆಗೆದುಕೊಂಡ ದಿವಸ ಕೂಡ ಆಗಿದೆ. ಆದ್ದರಿಂದ ಅವರಿಗೂ ಸಹ ನಾವು ಈ ಸದನದ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗುತ್ತದೆ.

**ಶ್ರೀಮತಿ ವಿಮಲಾಗೌಡ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಗಳೇ, ಇಂತಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ನಮ್ಮ ಮೇಲ್ಮನೆಯ ಹಿರಿಮೆ ಮತ್ತು ಗರಿಮೆಯನ್ನು ಹೆಚ್ಚಿಸಿದ್ದಕ್ಕಾಗಿ ಮೊಟ್ಟಮೊದಲಿಗೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ಎಲ್ಲ ನಾಯಕರೂ ಮಾತನಾಡಿ ವೈಚಾರಿಕತೆಯ ತಳಹದಿಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ವೈಚಾರಿಕತೆಗೆ ನನಗೆ ಸ್ಫೂರ್ತಿಯೇ ಸ್ವಾಮಿ ವಿವೇಕಾನಂದರವರು, ನನ್ನ ವಿದ್ಯಾರ್ಥಿನಿ ಜೀವನದ ಪ್ರಾರಂಭದಿಂದಲೂ ಸಹ ಬುದ್ಧಿ ಬಂದಾಗಿನಿಂದಲೂ ಸಹ ಅವರ ಎಲ್ಲ ಗ್ರಂಥಗಳನ್ನು ನಾನು ಸಂಗ್ರಹ ಮಾಡಿದ್ದೇನೆ. ಶ್ರೀಮತಿ ಲೀಲಾರವರು ಹೇಳಿದ ಹಾಗೆ ನಮ್ಮ ಮಾನಸಿಕ ತುಮುಲಗಳ ನಮ್ಮ ಜೀವನ ಜಂಜಾಟದ ಮಧ್ಯದಲ್ಲಿ ಒಮ್ಮೆ ಆದರೂ ಅವರ ಪುಸ್ತಕಗಳನ್ನು ಓದಿದರೆ ಮನಸ್ಸಿಗೆ ಸಾಕಷ್ಟು ಶಾಂತಿ ದೊರೆಯುತ್ತದೆ. ಅದರಿಂದ 'willpower'

ದೊರೆಯುತ್ತದೆ ಎನ್ನುವ ಅನುಭವ ನನಗೆ ಆಗಿದೆ. ಎಂತಹ ಇಚ್ಛಾಶಕ್ತಿ ದೊರೆಯುತ್ತದೆ ಎನ್ನುವ ಅನುಭವವಾಗಿದೆ. ಎಲ್ಲ ಮಾನ್ಯ ಸದಸ್ಯರು ಮಾತನಾಡುತ್ತಾ, ಸ್ವಾಮಿ ವಿವೇಕಾನಂದರು ತಮ್ಮ ಚಿಂತನೆಯಲ್ಲಿ ಯಾವ ರೀತಿಯ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದರು ಎನ್ನುವುದನ್ನು ಹೇಳಿದ್ದಾರೆ. ನಾನು ಒಂದು ಲೇಖನವನ್ನು ಓದಿದೆ. ಅದರಲ್ಲಿ ಸ್ವಾಮಿ ವಿವೇಕಾನಂದರು ನರೇಂದ್ರರಾಗಿರುವಾಗ ತಮ್ಮ ವಿದ್ಯಾರ್ಥಿ ಜೀವನದ್ದಲ್ಲಿ ಓದುವ ಸಲುವಾಗಿ ಕಲ್ಕತ್ತದಲ್ಲಿ ಒಂದು ಕೊಠಡಿ ಮಾಡಿಕೊಂಡು ಓದುತ್ತಿರುತ್ತಾರೆ. ಆಗ ಅವರ ಕೊಠಡಿಯ ಎದುರಿನಲ್ಲಿ ಬೆಂಗಾಲಿ ಸುಂದರ ಹೆಣ್ಣುಮಗಳು ವಾಸ ಮಾಡುತ್ತಿದ್ದಳು. ಅವಳು ಪ್ರತಿದಿನ ಸ್ವಾಮಿ ವಿವೇಕಾನಂದರ ಚಲನ–ವಲನಗಳನ್ನು ಗಮನಿಸುತ್ತಿದ್ದಳು. ಕಟ್ಟುಮಸ್ತಾದ ದೇಹ, ಸುಂದರವಾದ ಮುಖಾರವಿಂದ, ಅವರ ರೀತಿ–ನೀತಿ, ಅವರ ಪ್ರಜ್ವಲವಾದ ಕಾಂತಿಯನ್ನು ನೋಡಿ ಅವಳು ಮೋಹಿತಳಾಗಿದ್ದಳಂತೆ, ಒಮ್ಮೆ  ಸ್ವಾಮಿ ವಿವೇಕಾನಂದರು ತಮ್ಮ ನಿತ್ಯದ ಬೆಳಗಿನ ಕರ್ಮಗಳನ್ನು ಮುಗಿಸಿ ಕೊಠಡಿಯೊಳಗೆ ಪ್ರವೇಶ ಮಾಡುವಾಗ, ಆ ಹುಡುಗಿ ಅವರ ಕೊಠಡಿಯ ಬಾಗಿಲನ್ನು ಹಿಡಿದುಕೊಂಡು ನಿಂತಿದ್ದಳಂತೆ, ಏನು ವಿಷಯ ಎಂದು ಸ್ವಾಮಿ ವಿವೇಕಾನಂದರು ಕೇಳಿದಾಗ, ನಾನು ನಿಮ್ಮಲ್ಲಿ ಮೋಹಿತಳಾಗಿದ್ದೇನೆ, ನಿಮ್ಮನ್ನು ನಾನು ಪ್ರೀತಿಸುತ್ತಿದ್ದೇನೆ ನೀವು ನನ್ನನ್ನು ಮದುವೆಯಾಗಬೇಕೆಂದು ಹೇಳಿದಾಗ,  ಕೂಡಲೇ ಸ್ವಾಮಿ ವಿವೇಕಾನಂದರು ಆಕೆಯ ಪಾದಕ್ಕೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದರಂತೆ. ಆ ಸಮಯದಲ್ಲಿ ಅವರು ಬಳಸಿದ ಪದ ತಾಯಿ ಎಂದು, ಆ ಸುಂದರವಾದ ಯುವತಿಯನ್ನು ನೋಡಿದರೆ ಎಂತಹ ಯುವಕನಾದರೂ ಮರುಳಾಗಬಹುದು, ಆದರೆ ಸ್ವಾಮಿ ವಿವೇಕಾನಂದರು "ತಾಯಿ ನಾನು ನಿನ್ನಲ್ಲಿ ಮಾತೃ ಸೆಳೆತವನ್ನು ಕಂಡೆ, ನನ್ನ ತಾಯಿಯನ್ನು ಕಂಡೆ" ಎಂದು ಹೇಳುತ್ತಾರೆ. ಇದನ್ನು ನಾನು ವಿದ್ಯಾರ್ಥಿ ದಿಸೆಯಲ್ಲಿ ಓದಿದ್ದೆ. ಆಗ ನನ್ನ ಮೈ ರೋಮಾಂಚನವಾಗಿತ್ತು. ಆದರೆ ಇವತ್ತು ನನಗೆ ವಿಷಾದವಾಗುತ್ತಿದೆ. ನಮ್ಮ ಸಮಾಜದ ಸ್ಥಿತಿ–ಗತಿಗಳನ್ನು ನೋಡಿದಾಗ, ತಾಯಿಯ ಒಡಲಿನಿಂದ ಹುಟ್ಟಿ ಬಂದ ಮಕ್ಕಳು ಇವತ್ತು ಬಂದಿರುವ ಸುದ್ದಿಗಳನ್ನು ಓದಿದಾಗ ನನಗೆ ಬಹಳ ಸಂಕಟವಾಗುತ್ತದೆ, ಬಹಳ

ದುಃಖವಾಗುತ್ತದೆ. ಪ್ರತಿದಿನ ದೃಶ್ಯ ಮಾಧ್ಯಮದಲ್ಲಿ ಸ್ವಾಮಿ ವಿವೇಕಾನಂದರು (ಸ್ವಾಮಿನರೇಂದ್ರ) ಬದುಕಿರುವಂತ ಸಮಾಜದಲ್ಲಿಯೇ ನಾವು ಬದುಕುತ್ತಿದ್ದೇವೆ. ಆದರೆ ಎಂತಹ ಅಂಧಃಪತನಕ್ಕೆ ಹೋಗುತ್ತಿದ್ದೇವೆ ಎಂದರೆ, ಇವತ್ತು ಹೆಣ್ಣನ್ನು ನೋಡುವ ದೃಷ್ಟಿಕೋನದ ಬಗ್ಗೆ ವಿಚಾರ ಮಾಡಿದಾಗ ನನಗೆ ವಿಷಾದ ವಾಗುತ್ತದೆ. ಪ್ರತಿನಿತ್ಯ ಅವಳ ಮೇಲೆ ಅತ್ಯಾಚಾರ ನಡೆಯುತ್ತಿದೆ. ನಿನ್ನೆ ಟಿವಿ ನೋಡುತ್ತಿದಾಗ 62 ವರ್ಷದ ಮುದಕಿಯನ್ನು ಒಬ್ಬ ಯುವಕ ಅತ್ಯಾಚಾರ ಮಾಡಿರುವ ಸುದ್ದಿ ಬಂತು. ಅದನ್ನು ನೋಡಿ ನನ್ನ ಕಣ್ಣಲ್ಲಿ ನೀರು ಬಂತು. ಇದನ್ನು ನೋಡಿದರೆ ನಮ್ಮ ನೈತಿಕ ಮೌಲ್ಯ ಯಾವ ರೀತಿ ಕುಸಿಯುತ್ತಿದೆ ಎನ್ನವುದು ತಿಳಿದು ಬರುತ್ತದೆ. ಮುಂದೆ ಬರುವಂತಹ ಯುವಕರಿಗೆ ನಾವು ಏನನ್ನು ಹೇಳಲು ಹೊರಟ್ಟಿದ್ದೇವೆ. ಒಂದು ರೀತಿಯ ವಿಕೃತ ಮನೋಭಾವನೆ ನಮ್ಮಲ್ಲಿ ಬೆಳೆಯುತ್ತಿದೆ. ಇದನ್ನು ಸರಿಪಡಿಸಿಕೊಂಡು ಸ್ವಾಮಿ ವಿವೇಕಾನಂದರು ನಡೆದು ಬಂದಿರುವ ಹಾದಿಯಲ್ಲಿ ನಾವು ನಡೆಯಬೇಕು. ಅವರ ಆದರ್ಶವನ್ನು, ತತ್ವವನ್ನು, ಸಿದ್ಧಾಂತವನ್ನು, ರಾಷ್ಟ್ರಪ್ರೇಮ, ಆಧ್ಯಾತ್ಮಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಅರಿಷಡ್ವರ್ಗಗಳನ್ನು ಗೆಲ್ಲಲು ಸಾಧ್ಯವಾಗದೆ ಇರಬಹುದು, ಆದರೆ ಅವರು ನಡೆದಂತಹ ದಾರಿಯಲ್ಲಿ ನಾವು ನಡೆದರೆ, ಇವತ್ತು ನಾವು ಸ್ವಾಮಿ ವಿವೇಕಾನಂದರ 148ನೇ ಜನ್ಮದಿನಾಚರಣೆಯಲ್ಲಿ ನಂಬಿಕೆ ಇಟ್ಟು ಸ್ಮರಿಸುತ್ತಿದ್ದೇವೆ ಇದಕ್ಕೆ ಒಂದು ಅರ್ಥ ಬರುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನೊಬ್ಬರು ಕರ್ನಾಟಕ ರಾಜ್ಯಕ್ಕೆ ಮೌಲ್ಯಾಧಾರಿತ ರಾಜಕಾರಣಿ ಎಂದರೆ ಏನು ಎನ್ನುವುದನ್ನು ತಿಳಿಸಿಕೊಟ್ಟ ಧೀಮಂತ ನಾಯಕರಾಗಿದ್ದಂತಹ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ದೇಹ ತ್ಯಾಗ ಮಾಡಿದಂತಹ ದಿನ ಇಂದು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಇವತ್ತು ಈ ಸಭೆಯಲ್ಲಿರುವ ಎಲ್ಲರಿಗೂ ಮತ್ತೊಮ್ಮೆ ಅಭಿನಂದನೆ ಗಳನ್ನು ಸಲ್ಲಿಸುತ್ತೇನೆ, ಏಕೆಂದರೆ ನಾನು ಬೆಳಗ್ಗೆ ಒಳಗಡೆ ಬರುವಾಗಲೇ ಇವತ್ತು ಏನಾಗುತ್ತದೆಯೊ ಎಂದು ಅಂದುಕೊಂಡೆ ಒಳಗೆ ಬಂದೆ, ಈಗ ಸದನ ನೋಡಿ ಬಹಳ ಖುಷಿಯಾಯಿತು. ಇದೇರೀತಿ ನಮ್ಮ ಸದನ ಇರಲಿ. ಮೇಲ್ಮನೆ ಎಂದರೆ ಚಿಂತಕರ ಚಾವಡಿ ಇದು. ಇಲ್ಲಿ ಶ್ರೀಮತಿ ಲೀಲಾರವರು, ಮಾನ್ಯ

ಸುದರ್ಶನ್‌ರವರು, ಮಾನ್ಯ ನಾಣಯ್ಯನವರು, ಶ್ರೀಮತಿ ಮೋಟಮ್ಮನವರು, ಮಾನ್ಯ ಮಸ್ಕಿಯವರು ಮಾತನಾಡುತ್ತಿದ್ದರೆ ಇನ್ನೂ ಅವರಿಂದ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂದು ಅನ್ನಿಸುತ್ತದೆ. ತಿಳಿದುಕೊಳ್ಳಲು ಕೊನೆಯೇ ಇಲ್ಲ ಎಂದು ನನಗೆ ಅನ್ನಿಸುತ್ತದೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ವೈ.ಎಸ್.ವಿ.ದತ್ತ ನಾಮನಿರ್ದೇಶನ ಹೊಂದಿದವರು:** ಮಾನ್ಯ ಸಭಾಪತಿಗಳೆ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಆ ಮಹಾಚೇತನದ ಬಗ್ಗೆ ಭಕ್ತಿಪೂರ್ವಕವಾದ ನುಡಿನಮನಗಳನ್ನು ಸಲ್ಲಿಸಿದ್ದಾರೆ. ನನಗೆ ಬಹಳ ಇಷ್ಟವಾಗುವತಂಹದ್ದು, ನಾವೆಲ್ಲರೂ ಬದುಕುವ ದಾರಿಯಲ್ಲಿ ಎಲ್ಲೋ ಒಂದು ಕಡೆ ಸಾಮಾಜಿಕ ವ್ಯವಸ್ಥೆ ಬಗ್ಗೆ ನಿರಾಶಾಭಾವನೆ ಬರುವ ಸಂದರ್ಭದಲ್ಲಿ, ಸಿನಿಕತನ ಬರುತ್ತಿರುವ ಬಗ್ಗೆ, ಈ ಬದುಕಿನ ಬಗ್ಗೆ ಒಂದು ರೀತಿಯ ತಾತ್ಸಾರ ಮತ್ತು ಜಿಗುಪ್ಸೆ ಬರುವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳಿದಂತಹ ಒಂದು ವಾಣಿ ನನಗೆ ಬಹಳ ಸ್ಫೂರ್ತಿದಾಯಕವಾಗಿದೆ. ಅದು ಅವತ್ತು ಇತ್ತು, ನಾಳೆಯು ಇರುತ್ತದೆ. ಅವರು ನಾಸ್ತಿಕ ಎನ್ನವುದಕ್ಕೆ ಕೊಟ್ಟಂತಹ ವ್ಯಾಖ್ಯಾನ ನನಗೆ ಹೆಚ್ಚು ಪ್ರಿಯವಾಗಿರುವುದು ಮತ್ತು ಪ್ರಸ್ತುತವಾಗಿರುವುದು. ಸಾಮಾನ್ಯವಾಗಿ ಪಾರಮಾರ್ಥಿಕವಾದ ಭಾಷೆಯಲ್ಲಿ ಮಾತನಾಡುವಂತಹ ಜನ ನಾಸ್ತಿಕ ಮತ್ತು ಆಸ್ತಿಕರ ಬಗ್ಗೆ ಹೇಳುವುದು, ನಾಸ್ತಿಕ ಎಂದರೆ "ಯಾರು ದೇವರನ್ನು ನಂಬುವುದಿಲ್ಲ ಅವರು ನಾಸ್ತಿಕರು". ಆದರೆ ಸ್ವಾಮಿ ವಿವೇಕಾನಂದರು ನಾಸ್ತಿಕ ಎನ್ನುವುದಕ್ಕೆ ವ್ಯಾಖ್ಯಾನ ಕೊಟ್ಟಿರುವುದು "ಯಾರಿಗೆ ತನ್ನಲ್ಲಿಯೇ ತನಗೆ ನಂಬಿಕೆ ಇಲ್ಲವೊ ಅವನು ನಾಸ್ತಿಕ" ಎಂದು ಹೇಳಿದರು. ನನಗೆ ಹೆಚ್ಚು ಪ್ರಿಯವಾಗಿರುವುದು ಮತ್ತು ನಮ್ಮಲ್ಲಿ ಜೀವನೋತ್ಸಾಹ ಬೆಳೆಸು ವಂತಹ, ಹತಾಶೆಯಿಂದ ಆತ್ಮಹತ್ಯೆಗೆ ಮುಂದಾಗುವಂತಹ ಸಮುದಾಯ ವನ್ನು ನಾವು ಏನು ಕಾಣುತ್ತಿದ್ದೇವೆ ಇಂತಹ ಸಂದರ್ಭದಲ್ಲಿ ಆ ಚೈತನ್ಯವನ್ನು ನೀಡಿ, ಚಾಟಿ ತರಹ ನಮ್ಮನ್ನು ಮುನ್ನುಗಿಸುವಂತಹ ಶಕ್ತಿ ಆ ವಾಕ್ಯಕ್ಕೆ ಇದೆ. ಆ ಅರ್ಥದಲ್ಲಿ ದೇವರನ್ನು ನಂಬುವುದರ ಮೂಲಕ ಆಸ್ತಿಕರಾಗಬೇಕು ಎಂದು ಅರ್ಥವಲ್ಲ, ನಮ್ಮನ್ನು ನಾವು ನಂಬಬೇಕು ಅದರ ಮೂಲಕ ನಾವು

ಆಸ್ತಿಕರಾಗಬೇಕು ಎಂದು ಅರ್ಥ. ಅವರು ಕೊಟ್ಟಂತಹ ಈ ವ್ಯಾಖ್ಯಾನ ನನಗೆ ಮಾರ್ಗದರ್ಶನ ಎಂದು ನಾನು ಭಾವಿಸುತ್ತೇನೆ. ಆ ಮಾರ್ಗದರ್ಶನದ ವಾಣಿಯ ಜೊತೆಗೆ ಒಂದು ವಿಷಾದದ ಛಾಯೆ ಇದೆ. ಏನು ಎಂದರೆ, ಇವತ್ತು ಸ್ವಾಮಿ ವಿವೇಕಾನಂದರ ಜಯಂತಿ, ಔಪಚಾರಿಕವಾಗಿ ನಾವು ಮಾತನಾಡಬೇಕು ಮಾತನಾಡುತ್ತೇವೆ ಅಲ್ಲಿಗೆ ಮುಗಿಯಿತು.

**ಪ್ರೊ: ಎಸ್.ಆರ್.ಲೀಲಾ:** ಮನಃಪೂರ್ವಕವಾಗಿ ಮಾತನಾಡುವುದು.

**ಶ್ರೀ ವೈ.ಎಸ್.ವಿ.ದತ್ತ:** ಔಪಚಾರಿಕ ಎಂದರೆ ಅರ್ಥ, ಇವತ್ತು ಜಯಂತಿ ಮಾತನಾಡಬೇಕು ಮಾತನಾಡುತ್ತೇವೆ. ಆ ಮಾತುಗಳನ್ನು ಮನಃಪೂರ್ವಕ ವಾಗಿಯೇ ಮಾತನಾಡುತ್ತೇವೆ. ಆದರೆ ಅದನ್ನು ಬಹಳ ಸಾಂದರ್ಭಿಕವಾಗಿ ಮಾತನಾಡುತ್ತೇವೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ದ.ರಾ.ಬೇಂದ್ರೆಯವರು ಬುದ್ದನ ಬಗ್ಗೆ ಹೇಳಿರುವುದು ಎಲ್ಲ ಮಹಾನ್ ಚೇತನಗಳಿಗೆ ಅನ್ವಯವಾಗಿರುತ್ತದೆ. ಬೇಂದ್ರೆಯವರು ಬುದ್ದನ ಬಗ್ಗೆ ಒಂದು ಕವನ ಬರೆದಿದ್ದಾರೆ. ಅದರಲ್ಲಿ "ಬುದ್ಧ ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ" ಎಂದು ಪ್ರಾರಂಭ ಮಾಡಿ ಬುದ್ಧನ ಹೋರಾಟದ ಬದುಕೆಲ್ಲವನ್ನು ಚಿತ್ರಿಸುತ್ತಾ ಕೊನೆಗೆ ಒಂದು ವಿಷಾದದ ವಾಕ್ಯದ ಮೂಲಕ ಚೇತನಗಳನ್ನು ಸ್ಮರಿಸಿಕೊಳ್ಳುವಂತಹ ನಮ್ಮಂತಹವರಿಗೆ ಈ ರೀತಿ ಮಾಡುವುದು ತಪ್ಪಲ್ಲವೆ ಎನ್ನುವಂತಹ ಒಂದು ಮಾತು ಅದರಲ್ಲಿದೆ. ಅವರು ಕೊನೆಯಲ್ಲಿ ಹೇಳುತ್ತಾರೆ, "ಬುದ್ದ ಇಲ್ಲ ಎಂದು ಯಾರೆಂದರೂ ಬುದ್ಧನ ಜಯಂತಿಗೆನೇ ಜಯ ಎಂದಿಗೂ" ಇಷ್ಟೊಂದು ವಿಷಾದವಾದ ಧ್ವನಿ ದ.ರಾ.ಬೇಂದ್ರೆಯವರ ಮಾತಿನಲ್ಲಿದೆ. ಮಹಾತ್ಮಾ ಗಾಂಧಿ ಜಯಂತಿಗೂ ಜಯ ಇದೆ, ಹಾಗೆ ಎಲ್ಲರ ಜಯಂತಿಗೂ ಜಯ ಇದೆ. ಆದರೆ ಅವು ಇಲ್ಲ ಎಂದು ಅಂದುಕೊಂಡೆ ನಾವು ನಡೆದುಕೊಂಡು ಬರುತ್ತಿದ್ದೇವೆ. ಆ ವಿಷಾದದ ಛಾಯೆ ಹಿನ್ನೆಲೆಯಲ್ಲಿ ನಾನು ಹೇಳುವುದು ಇಷ್ಟೆ. ನಾವು ಇವೆಲ್ಲವುಗಳನ್ನು ಹೇಗೆ ಮಾಡುತ್ತೇವೆ ಎಂದರೆ, ಅನುಷ್ಠಾನ ಕಡಿಮೆ ಇರುತ್ತದೆ.ಆದರೆ ಅವತ್ತು ಒಂದು ದಿನದ ಮಟ್ಟಿಗೆ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿ ಕೈತೊಳೆದುಕೊಳ್ಳುತ್ತೇವೆ. ಒಬ್ಬ ಕವಿ ಹೀಗೆ ಹೇಳುತ್ತಾರೆ, "ಗಾಂಧಿ ಛಾಪಿನ ಸೇಂದಿಯ ಮಾರಿ ಯಾರೊ ಒಬ್ಬ

ಮಹಾತ್ಮ ಗಾಂಧಿಗೆ ಒಂದು ಪ್ರತಿಮೆಯನ್ನು ಮಾಡಿಸಿದ" ಗಾಂಧಿ ಛಾಪಿನ ಸೇಂದಿಯ ಮಾರಿ ಎಂದರೆ ಎಲ್ಲರಿಗೂ ಅರ್ಥವಾಗುತ್ತದೆ ಎಂತಹ ವಿರೋದಾಭ್ಯಾಸ, ವಿಪರ್ಯಾಸಗಳು ಇರುತ್ತವೆ ಎಂದು. ಇವತ್ತು ಇಂತಹ ಅವಕಾಶದ ಸಂದರ್ಭದಲ್ಲಿ ಆ ಮಹಾನ್ ಚೇತನಗಳ ಆದರ್ಶಗಳನ್ನು ಸ್ವಲ್ಪ ಮಟ್ಟಿಗಾದರು ನಮ್ಮ ಬದುಕಿನಲ್ಲಿ ಅನುಷ್ಠಾನ ಮಾಡಿಕೊಳ್ಳಲು ನನಗೆ ಪಾಠ ಹೇಳಿಕೊಂಡರೆ, ಆತ್ಮಾವಲೋಕನ ಮಾಡಿಕೊಂಡರೆ ಆಗ ನಿಜವಾಗಿಯೂ ನಮ್ಮ ನಮನಗಳು ಕೂಡ ಸ್ವಲ್ಪಮಟ್ಟಿಗೆ ಬದ್ಧತೆಯನ್ನು ಪಡೆದುಕೊಳ್ಳುತ್ತದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ತೋಂಟದಾರ್ಯ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಗಳೇ, "ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ" ಎಂದೆಲ್ಲಾ ನಾವು ಹೇಳುತ್ತೇವೆ. ಅದಕ್ಕೆ ಸ್ವಾಮಿ ವಿವೇಕಾನಂದರ "ದರಿದ್ರ ನಾರಾಯಣ ದೇವೋಭವ" ಎಂಬ ಕೊಡುಗೆ ಇದೆ. ಇವುಗಳೆಲ್ಲದ್ದರ ಬಗ್ಗೆ ಒಂದು ಸಮಗ್ರ ಚಿಂತನೆ ಎಂದರೆ "ಸಮಾಜ ದೇವೋಭವ" ಎಂದಾಗುತ್ತದೆ. ಈ ದೃಷ್ಟಿಯಿಂದ ಸ್ವಾಮಿ ವಿವೇಕಾನಂದರು ಎಲ್ಲರಿಗೂ, ಎಲ್ಲಾ ಕಾಲಕ್ಕೂ ಮತ್ತು ಇಲ್ಲಾ ದೇಶಗಳಿಗೂ ನಮಗೆ ಸ್ಪೂರ್ತಿ ಮತ್ತು ಆದರ್ಶವನ್ನು ನೀಡುವ ಒಂದು ದಿವ್ಯ ಚೇತನವಾಗಿದ್ದಾರೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಒಂದು ಭಾವನೆಯನ್ನು ಸದನದಲ್ಲಿ ತೋಡಿಕೊಂಡರು. ಅವರು ಜೀವಮಾನ ದಲ್ಲಿ ಒಂದುಬಾರಿ ಚಿಕಾಗೋಗೆ ಹೋಗಬೇಕು ಎಂದುಕೊಂಡಿದ್ದರು. ಸೆಪ್ಟಂಬರ್ 11, 1893ನೇ ಇಸವಿಯಲ್ಲಿ ಸ್ವಾಮಿ ವಿವೇಕಾನಂದರು ಕೆಲವೇ ನಿಮಿಷಗಳ ಕಾಲ ಮಾತನಾಡಿದ ಸ್ಥಳವನ್ನು ಸ್ಪರ್ಶಿಸಬೇಕು, ಆ ಸ್ಥಳವನ್ನು ಸ್ಪರ್ಶಿಸಿ ಬಂದರೆ ಧನ್ಯ ಎಂಬ ಮನಸ್ಥಿತಿ ಇದ್ದು, ಎಲ್ಲರ ಆಶೀರ್ವಾದದಿಂದ ಅದನ್ನು ಪಡೆದುಕೊಂಡೆ, ಅದು ಸಿಕ್ಕಿತು ಎಂಬ ಮಾತುಗಳನ್ನು ಹೇಳಿದರು. ಅಂತಹ ಒಂದು ಭಾವನೆಯನ್ನು ಈ ಸಭೆಯಲ್ಲಿ ನಾನೂ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಈಗ್ಗೆ 14 ತಿಂಗಳುಗಳ ಹಿಂದೆ ನಾನು ಚಿಕಾಗೋ ನಗರಕ್ಕೆ ಹೋಗಿದ್ದು, ಅಲ್ಲಿ ನನ್ನ ಬಂಧುಗಳ ಮನೆಯಲ್ಲಿ ನಾಲ್ಕಾರು ದಿನಗಳ ವಾಸ್ತವ್ಯ

ಹೂಡಿದ್ದೇನು. ಹಿಂದೆ ಅಮೇರಿಕಾಕ್ಕೆ ಹೋಗಿ ಎರಡು ತಿಂಗಳು ಅಲ್ಲಿದ್ದರೂ ಆ ಸ್ಥಳಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. ಈಗ ಚಿಕಾಗೋ ನಗರಕ್ಕೆ ಬಂದಿದ್ದು, ನನ್ನ ಮೊದಲನೆಯ ಕೆಲಸ ಎಂದರೆ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಸ್ಥಳವನ್ನು ಸ್ಪರ್ಶಿಸಬೇಕು ಎಂದು ಬಂಧುಗಳ ಬಳಿ ತೋಡಿಕೊಂಡೆನು. ನನ್ನ ಬಂಧುಗಳು ಭಾರತೀಯರು ಮತ್ತು ಅಲ್ಲಿ ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದು, ಅವರು ಪ್ರತಿಷ್ಠಿತ ವ್ಯಕ್ತಿಗಳು. ಆದರೆ ಈ ಸಂಗತಿಯೇ ಅವರಿಗೆ ಗೊತ್ತಿಲ್ಲದೇ ಇರುವುದು ಬಹಳ ದುರದೃಷ್ಟಕರ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಂತರ ಅವರನ್ನು ಜೊತೆಯಲ್ಲಿಯೇ ಕರೆದುಕೊಂಡು ಸೆಪ್ಟಂಬರ್ 11, 1893ನೇ ಇಸವಿಯಲ್ಲಿ ಭಾಷಣ ಮಾಡಿದ ಸಭಾಂಗಣವನ್ನು ನಾನು ವೀಕ್ಷಿಸಿದ್ದೆನು. ನನ್ನ ಬಂಧುಗಳು ಸಹ ಬಹಳ ಕೃತಾರ್ಥರಾದರು.ಆ ಸ್ಥಳವು ಒಂದು ಮ್ಯೂಸಿಯಂಗೆ ಸೇರಿದಂತೆ ಇದೆ. ಆ ಸ್ಥಳವನ್ನು ದೊಡ್ಡದಾದ ರೀತಿಯಲ್ಲಿ ವೈಭವೀಕರಿಸಿಲ್ಲ. “This is the place where Swami Vivekananda addressed the World Conference of Religions” ಎಂದು ಒಂದು ಫಲಕವನ್ನು ಹಾಕಿದ್ದರು. ಆದರೆ ನಮ್ಮ ಕಲ್ಪನೆಗೆ ತಕ್ಕಂತೆ ಅದನ್ನು ವೈಭವೀಕರಿಸಿಲ್ಲ. ಅದು ಏನಾದರೂ ಇರಲಿ. ಆದರೆ ಆ ಸಂದರ್ಭ ನನ್ನ ಜೀವಮಾನದಲ್ಲಿ ಒದಗಿ ಬಂದಿದ್ದಕ್ಕೆ ನಾನು ಬಹಳ ಆನಂದ ಪಟ್ಟೇನು. ಸ್ವಾಮಿ ವಿವೇಕಾನಂದರು ಅನೇಕ ವ್ಯಕ್ತಿಗಳಿಗೆ ಆದರ್ಶಪ್ರಾಯರಾಗಿ ದ್ದಾರೆ. ಅವರ ಆದರ್ಶವನ್ನು ಸ್ವೀಕಾರ ಮಾಡಿಕೊಂಡು ಜೀವನ ನಡೆಸುತ್ತಿರುವ ಅನೇಕ ಜನರನ್ನು ನಾನು ನೋಡಿದ್ದೇನೆ. ಅಂತಹ ಒಂದು ಸೌಭಾಗ್ಯವು ನನ್ನ ಕುಟುಂಬದಲ್ಲಿಯೇ ಇರುವುದು ನನಗೆ ಹೆಚ್ಚು ಆನಂದವನ್ನು ತಂದಿದೆ.ನನ್ನ ಕುಟುಂಬದ ಇಬ್ಬರು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಸ್ವೀಕಾರ ಮಾಡಿಕೊಂಡು, life’s mission ರೀತಿಯಲ್ಲಿ “Swami Vivekananda Yoyth Movement” ಎನ್ನುವ ಹೆಸರಿನಲ್ಲಿ ದೊಡ್ಡ ಕೆಲಸವನ್ನು ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಈ ಕಾರಣದಿಂದ ಇಂತಹ ಕುಟುಂಬದ ಸದಸ್ಯರನ್ನು ಪಡೆದುಕೊಂಡಿದ್ದೇನೆ ಎಂದು ನನಗೆ ದೈನಂದಿಕವಾಗಿ ಆನಂದ ಆಗುತ್ತಿದೆ. ನನ್ನ ಜೀವನದಲ್ಲಿ ಏನು ಸಾಧನೆ ಮಾಡಿದ್ದೇನೋ ಅಥವಾ ಬಿಟ್ಟಿದ್ದೇನೋ ಗೊತ್ತಿಲ್ಲ.

ಯಾವುದೇ ಒಂದು ಸಂಗತಿ ನನಗೆ ಆನಂದವನ್ನು ತಂದಿರಬಹುದು. ಆದರೆ ಅತ್ಯಂತ ಮಿಗಿಲಾಗಿ ನನ್ನ ಸ್ವಂತ ಮಗಳು ಮತ್ತು ಅಳಿಯ ಸ್ವಾಮಿ ವಿವೇಕಾನಂದರ ಸಂಗತಿಗಳನ್ನು ಸ್ವೀಕಾರ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಅವರು ಗಿರಿಜನರ ಜೊತೆ ಬಾಳ್ವೆ ಮಾಡುತ್ತಾ, ನೂರಾರು ಜನರಿಗೆ ಆದರ್ಶ ಪ್ರಾಯರಾಗಿದ್ದಾರೆ ಎನ್ನುವುದು ನನಗೆ ಅತ್ಯಂತ ಆನಂದವನ್ನು ತಂದಿದೆ. ದಯಮಾಡಿ ನನ್ನ ಕುಟುಂಬದ ಸದಸ್ಯರ ವಿಷಯವನ್ನು ಪ್ರಸ್ತಾಪಿಸಿ, ಹೊಗಳುತ್ತಿದ್ದೇನೆ ಎಂದು ಅನ್ಯಥಾ ಭಾವಿಸಬಾರದು. ಅವರು ನನಗೆ ಆದರ್ಶವಾಗಿದ್ದಾರೆ. ಡಾ: ಬಾಲಸುಬ್ರಮಣ್ಯಂರವರು Swami Vivekananda Yoyth Movement ನ ಸಂಸ್ಥಾಪಕರು ಹಾಗೂ ನನ್ನ ಹಿರಿಯ ಮಗಳು ಡಾ: ಬಿಂದು ಬಾಲಸುಬ್ರಮಣ್ಯಂರವರು Gynecologist ಆಗಿದ್ದಾರೆ. ಸ್ವಾಮಿ ವಿವೇಕಾನಂದ ಸ್ಮಾರಕ ಆಸ್ಪತ್ರೆಯು ಗ್ರಾಮೀಣ ಭಾಗದಲ್ಲಿ 100 ಹಾಸಿಗೆಯುಳ್ಳ ಆಸ್ಪತ್ರೆಯಾಗಿದೆ. ಅಷ್ಟೇ ಅಲ್ಲದೇ ಹೊಸಳ್ಳಿ ಎಂಬ ಬಳಿ ಗಿರಿಜನರಿಗಾಗಿ ಒಂದು ರೆಸಿಡೆನ್ಸಿಯಲ್ ಶಾಲೆಯು ಇದೆ.ಆ ಶಾಲೆಯು ಕಾಡಿನ ಮಧ್ಯದಲ್ಲಿಇದೆ. ಮಾನ್ಯ ಎಸ್. ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಆ ಸ್ಥಳಕ್ಕೆ ಹೋಗಿದ್ದರು ಮತ್ತು ಆ ಸ್ಥಳ ಹಾಗೂ ಪರಿಸರವನ್ನು ನೋಡಿ ಈ ಸ್ಥಳದಲ್ಲಿ ಕ್ಯಾಬಿನೆಟ್ ಸಭೆ ಮಾಡಬೇಕೆಂದು ಅವರಿಗೆ ಅನಿಸಿತ್ತು. ಅದರಂತೆ ಅವರು ಎರಡನೇ ಬಾರಿ ಅಲ್ಲಿಗೆ ಹೋಗಿ ಕ್ಯಾಬಿನೆಟ್ ಸಭೆ ಸಹ ಮಾಡಿದರು. ಹಾಗೆ ಕೆಂಚನಹಳ್ಳಿ ಎಂಬ ಜಾಗದಲ್ಲಿಯೂ ಸಹ ಒಂದು ಆಸ್ಪತ್ರೆ ಇದೆ. ಅವರ ಚಟುವಟಿಕೆಗಳು ಹೆಚ್ಚು ಕಡಿಮೆ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ವಿಸ್ತರಿಸಲ್ಪಟ್ಟಿದೆ. ಅವರಿಗೆ ಸಿಕ್ಕದ ಅನುಭವದ ಆಧಾರದ ಮೇಲೆ "Vivekananda Institute of Leadership Development (V-LEAD)" ಎಂದು ಮೈಸೂರಿನ ಹೆಬ್ಬಾಳದಲ್ಲಿ ಮಾಡಿದ್ದಾರೆ. It is affiliated to Mysore university. ಈ ರೀತಿ ಕೆಲಸ ಮಾಡುವವರು ಬೇಕಾದಷ್ಟು ಜನ ನಮ್ಮ ದೇಶದಲ್ಲಿ ಇದ್ದಾರೆ. ಸೇವೆ ಮಾಡಬೇಕೆನ್ನುವ ಉತ್ಕಟವಾದ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಅಂತಹವರಿಗೆ ಪ್ರೇರಣೆ ಹಾಗೂ ಶಿಕ್ಷಣವನ್ನು ಕೊಡುವ ಸಂಸ್ಥೆ V-LEAD ಆಗಿದೆ. ಅದು ಪಿ.ಜಿ. ಕೋರ್ಸ್‌ಗೆ ಸಮನಾದ ಡಿಗ್ರಿಯನ್ನು ಪಡೆಯುವದಾಗಿದೆ. ಇಂತಹ ಕೆಲಸವನ್ನು

ಮಾಡುತ್ತಿರುವವರು ನನ್ನ ಕುಟುಂಬದ ಸದಸ್ಯರು ಎನ್ನುವುದು ನನಗೆ ಅತೀ ಹೆಚ್ಚಿನ ಆನಂದವನ್ನು ನನಗೆ ಮತ್ತು ಕುಟುಂಬದ ಎಲ್ಲರಿಗೂ ತಂದಿದೆ ಎಂದು ನನ್ನ ಭಾವನೆಗಳನ್ನು ತೋಡಿಕೊಳ್ಳುತ್ತಿದ್ದೇನೆ. ಈ ಸಂಗತಿಯನ್ನು ಕೋಟ್ ಮಾಡುವಾಗ ನನ್ನ ಮಗಳು ಮತ್ತು ಅಳಿಯ ಇವರ ವಿಚಾರವನ್ನು ಹೇಳಿದರು ಎಂದು ಅನ್ಯಥಾ ಭಾವಿಸಬಾರದು. I am really proud of them. We all must be proud of them. ನನ್ನ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ನನಗೆ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಎಂ.ವಿ.ರಾಜಶೇಖರನ್ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಗಳೆ, ಈಗಾಗಲೇ ಸದನದ ಎಲ್ಲಾ ಹಿರಿಯ ಮತ್ತು ಕಿರಿಯ ಸದಸ್ಯರು ಅವರದೇ ಆದ ರೀತಿಯಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ನುಡಿ–ನಮನಗಳನ್ನು ಸಲ್ಲಿಸಿದ್ದಾರೆ. ಸ್ವಾಮಿ ವಿವೇಕಾನಂದರು ಇಡೀ ಭಾರತದ ಮತ್ತು ವಿಶ್ವದ ಅತ್ಯಂತ ವಿಶಿಷ್ಟ ಚೇತನವಾಗಿದ್ದರು ಎಂಬುದು ನಮಗೆಲ್ಲರಿಗೂ ಗೊತ್ತು.ಅತ್ಯಂತ ರಾಷ್ಟ್ರದ ಆಧಾತ್ಮಿಕ ತಳಹದಿಯನ್ನು ವಿಶ್ವಕ್ಕೆ ತಿಳಿಯುವಂತೆ ಮಾಡಿದ ಮಹಾನ್ ಸಂತ.ಇವತ್ತಿನ ನಾವೆಲ್ಲರೂ inclusive society ಯ ಪರಿಕಲ್ಪನೆಯನ್ನು ಏನು ಹೊಂದಿದ್ದೇವೆ, secular character ಪರಿಕಲ್ಪನೆಯನ್ನು ಏನು ಹೊಂದಿದ್ದೇವೆ, ಅದನ್ನು ಮೊಟ್ಟಮೊದಲನೆಯದಾಗಿ ವಿಶ್ವಕ್ಕೆ ತಿಳಿಸಿದ ಮಾಹಾನ್ ಸಂತರೆಂದರೆ ಸ್ವಾಮಿ ವಿವೇಕಾನಂದರು.ಈ ಸಮಯದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. 1968 ರ ದಶಕದಲ್ಲಿ ಬೆಂಗಳೂರಿನಲ್ಲಿ ನಮ್ಮ ಅಶೋಕ್ ಮೆಹ್ತಾರವರು ಕೊನೆಯ ದಿನಗಳಲ್ಲಿ ಆಸ್ತಮಾದಿಂದ ಬಹಳವಾಗಿ ನರಳುತ್ತಿದ್ದರು. ಅವರಿಗೆ ಯಾರೋ ಶ್ರೀ ಸಾಯಿಬಾಬಾರವರ ದರ್ಶನ ಪಡೆದರೆ ಅನುಕೂಲ ಆಗಬಹುದು ಎಂದು ತಿಳಿಸಿದರು.ಆ ಸಮಯದಲ್ಲಿ ಪಾಟಿಯಾಲ ಮಾಹಾರಾಣಿಯವರಾದ ಶ್ರೀಮತಿ ಮಹೇಂದ್ರ ಕೌರ್‌ರವರು ಬೆಂಗಳೂರಿಗೆ ಬಂದರು. ಶ್ರೀ ಸಾಯಿಬಾಬಾರವರನ್ನು ಅವರೂ ನೋಡ ಬೇಕೆಂದು ಇಷ್ಟಪಟ್ಟರು. ಅದಕ್ಕೆ ನಾನು ಶ್ರೀ ಸಾಯಿಬಾಬಾರವರನ್ನು ಕಾಂಟ್ಯಾಕ್ಟ್ ಮಾಡಿ ಭೇಟಿಗಾಗಿ ಒಂದು ಸಭೆಯನ್ನು ಫಿಕ್ಸ್ ಮಾಡಿದೆ.

**ಸನ್ಮಾನ್ಯ ಸಭಾಪತಿಯವರೇ,** ಆ ಸಂದರ್ಭದಲ್ಲಿ ಪೂಜನೀಯ ಸಾಯಿಬಾಬರವರು "Politicians are Platform heroes but Practical Zeros" ಎಂದು ಹೇಳಿದ್ದರು. ಆ ಮಾತುಗಳನ್ನು ಇಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ. ಆದ್ದರಿಂದ ನಾವು Platform heroes ಗಳಾಗುವುದು ಬೇಡ. ಇವತ್ತಿನ ದಿನ ನಾವು ಸ್ವಾಮಿ ವಿವೇಕಾನಂದ ರವರಿಗೆ ಈ ಸದನದಲ್ಲಿ ನುಡಿ ನಮನವನ್ನು ಸಲ್ಲಿಸುವುದರ ಮೂಲಕ ಅಂತಹ ಮಹಾನ್ ಚೈತನ್ಯವನ್ನು ಹೊಗಳಿದ್ದೇವೆ. ಆದರೆ, ನಮ್ಮ ಜೀವನದಲ್ಲಿ ಅವರ ಆದರ್ಶನವನ್ನು ಎಷ್ಟರ ಮಟ್ಟಿಗೆ ಮೈಗೂಡಿಸಿಕೊಂಡು ನಡೆಸುತ್ತೇವೆ ಎನ್ನುವುದು ಮುಖ್ಯವಾಗಿರುವಂತಹ ವಿಚಾರವಾಗಿದೆ. Let us become Practical heroes, not Platforms heroes ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ ವಿಧಾನ ಸಭಾ ಕ್ಷೇತ್ರ:** ಸನ್ಮಾನ್ಯ ಸಭಾಪತಿಗಳೆ, ಇಂದು ಭಾರತೀಯ ಸಮಾಜಕ್ಕೆ ನವ ಚೇತನವನ್ನು ಕೊಟ್ಟಂಥ ಮಹಾ ಪುರುಷನ ಜನನವಾದರೆ, ರಾಜಕೀಯದಲ್ಲಿ ಮುತ್ಸದ್ಧಿತನದಿಂದ ಮೆರೆದಂತಹ ಇನ್ನೊಬ್ಬ ನಾಯಕನ ಮರಣದ ದಿನವಾಗಿದೆ. ಜನನ ಮತ್ತು ಮರಣ ಈ ಎರಡರ ನಡುವೆ ನಾವು ಜೀವನವನ್ನು ಮಾಡುತ್ತಿದ್ದೇವೆ. ಹಿಂದೂಸ್ಥಾನದ ಸಂಸ್ಕೃತಿಯನ್ನು ಮತ್ತು ಧಾರ್ಮಿಕ ಪ್ರಜ್ಞೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಿದಂತಹ ಧೀಮಂತ ನಾಯಕ ಹಾಗೂ ಒಬ್ಬ ಮಹಾಪುರುಷ ಸ್ವಾಮಿ ವಿವೇಕಾನಂದರು. ಅವರು ನನ್ನ ಆದರ್ಶ ವ್ಯಕ್ತಿಯಾಗಿದ್ದಾರೆ. ಏಕೆಂದರೆ, ಬಾಲ್ಯದಿಂದ ನಾನು ಅವರ ಆದರ್ಶಗಳನ್ನು ಪಾಲಿಸುವಂತಹ ಪ್ರಯತ್ನವನ್ನು ಮಾಡಿದ್ದೇನೆ. ಬಾಲ್ಯದ ದಿನಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು ನಮ್ಮ ಶಾಲಾ ದಿನಗಳಲ್ಲಿ ಆಚರಣೆ ಮಾಡಲಾಗುತ್ತಿತ್ತು. ಆದರೆ, ಈಗ ಅವರ ಜನ್ಮ ದಿನಾಚರಣೆಯನ್ನು ಶಾಲೆಗಳಲ್ಲಿ ಆಚರಣೆ ಮಾಡುತ್ತಿಲ್ಲ. ನನ್ನ ಶಾಲಾ ದಿನಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನದಂದು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಆ ಸ್ಪರ್ಧೆಯಲ್ಲಿ ಭಾಗವಹಿಸಿ ನಾನು ಬಹುಮಾನವನ್ನು ಪಡೆದುಕೊಂಡಿದ್ದೆ. ಇದು ನನಗೆ ಬಹಳ ಸಂತೋಷವನ್ನುಂಟು ಮಾಡಿದಂತಹ

ಸಂಗತಿಯಾಗಿದೆ. ಬಣ್ಣದ ಪೆನ್ಸಿಲ್‌ಗಳಿಂದ ನಾನು ಸ್ವಾಮಿ ವಿವೇಕಾನಂದರ ಚಿತ್ರವನ್ನು ಸಹ ಬಿಡಿಸಿದ್ದೇನೆ. 'ಹಿಂದೂ' ಎನ್ನುವ ಪದವನ್ನು ಕೇಳಿ ಯಾರ ಮೈ ರೋಮಾಂಚನಗೊಳ್ಳುತ್ತದೆಯೋ ಅವರು ನಿಜವಾದ ಹಿಂದೂ ಎನ್ನುವಂತಹ ಉಲ್ಲೇಖವನ್ನು ಮಾಡಿದ್ದರು. ಪ್ರಸ್ತುತ ನಮ್ಮ ಸಮಾಜದ ಈಗಿನ ಸ್ಥಿತಿಯಲ್ಲಿ ಅವರ ಒಂದು ವಾಕ್ಯವನ್ನು ನೆನಪು ಮಾಡಿಕೊಂಡರೆ, ತಪ್ಪಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. 'ಯಾವುದೇ ಒಬ್ಬ ವ್ಯಕ್ತಿಯ ವೈಯಕ್ತಿಕ ಜೀವನದ ಮೇಲೆ ನೀನು ಕಣ್ಣು ಹಾಕಬೇಡ, ಅವಳು ಅಥವಾ ಅವನಲ್ಲಿ ಯಾವುದದರು ಒಳ್ಳೆಯ ಗುಣವಿದ್ದರೆ ಅದನ್ನು ಆರಿಸಿಕೋ ಇಲ್ಲದಿದ್ದರೆ ದೂರದಿಂದಲೇ ಕೈ ಮುಗಿ, ಎನ್ನುವಂತಹ ಒಂದು ಮಾತನ್ನು ಹೇಳಿದ್ದರು. ನರೇಂದ್ರನ ತುಂಟತನದಿಂದ ಸ್ವಾಮಿ ವಿವೇಕಾನಂದರಾಗಿ ಬೆಳೆದಂತಹ ಅವರ ಜೀವನದ ಬಗ್ಗೆ ಶ್ರೀಮತಿ ಲೀಲಾರವರು ಸದನದ ಗಮನವನ್ನು ಸೆಳೆದಿದ್ದಾರೆ. ನಾವೆಲ್ಲರೂ ಜೀವಮಾನ ಪೂರ್ತಿ ಮಾತನಾಡಿದರೂ ಸಹ ಅವರ ಬಗೆಗಿನ ಮಾತುಗಳು ಮುಗಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಮನಸ್ಸು ಗೊಂದಲದಲ್ಲಿ ಇದ್ದಾಗ ಶಾಂತತೆಯನ್ನು ಪಡೆದುಕೊಳ್ಳಬೇಕಾದರೆ, ಸ್ವಾಮಿ ವಿವೇಕಾನಂದರ ಪುಸ್ತಕವನ್ನು ಓದುತ್ತೇವೆ. ಮನಸ್ಸಿಗೆ ಶಾಂತಿಯನ್ನು ನೀಡುವಂತಹ ಇಂತಹ ಮಹಾನ್ ಪುರುಷನನ್ನು ನೆನೆಯುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ನನ್ನ ರಾಜಕೀಯ ಜೀವನದ ಮೇಲೆ ಪ್ರಭಾವವನ್ನು ಬೀರಿದಂತಹ ಅನೇಕ ರಾಜಕೀಯ ನಾಯಕರ ಪೈಕಿ ದಿವಂಗತ ರಾಮಕೃಷ್ಣ ಹೆಗಡೆಯವರು ಸಹ ಒಬ್ಬರು. ಅವರೊಬ್ಬರು ಆದರ್ಶ ನಾಯಕರಾಗಿದ್ದರು. ಅವರು ಮರಣ ಹೊಂದಿದ ದಿನ ಇಂದು. ಅವರನ್ನು ಸಹ ಈ ಸದನದ ಮೂಲಕ ನೆನಪು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದಂತಹ ತಮಗೆ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎನ್.ಶಂಕ್ರಪ್ಪ ವಿಧಾನ ಸಭಾ ಕ್ಷೇತ್ರ:–** ಸನ್ಮಾನ್ಯ ಸಭಾಪತಿಯವರೇ, ಮಹಾನ್ ಪುರುಷ ಸಿಂಹ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ

ಸಂಭ್ರಮ ಸದನದಲ್ಲಿ ಸಂತೋಷವನ್ನುಂಟು ಮಾಡಿದೆ. ಇಷ್ಟೊಂದು ಶಾಂತಿಯಿಂದ ಎಲ್ಲರೂ ಪ್ರತಿಯೊಬ್ಬರ ಮಾತುಗಳನ್ನು ಆಲಿಸುವಂತಹ ಸನ್ನಿವೇಶವನ್ನುಂಟು ಮಾಡಿದಂತಹ ತಮಗೂ ಹಾಗೂ ಸ್ವಾಮಿ ವಿವೇಕಾನಂದರಿಗೂ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಶ್ರೀಮತಿ ಲೀಲಾರವರು ಹೇಳಿದಂತೆ ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯ ಬಗ್ಗೆ ಈ ದೇಶದ ಸಭ್ಯತೆಯ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದರು. ಭಾರತೀಯರನ್ನು ಹೀಯಾಳಿಸುವುದಕ್ಕಾಗಿಯೇ ಪರಕೀಯರು ನಮ್ಮ ಧರ್ಮಗ್ರಂಥವನ್ನು ಕೆಳಗೆ ಇಟ್ಟು ಇಡೀ ಜಗತ್ತಿನ ಧರ್ಮ ಗ್ರಂಥವನ್ನು ಮೇಲಿಟ್ಟಿದ್ದರು. ಆಗ ಸ್ವಾಮಿ ವಿವೇಕಾನಂದರು, ಕೆಳಗೆ ಇಟ್ಟಿದ್ದ ಭಗವದ್ಗೀತೆಯನ್ನು ಎಳೆದಾಗ, ಮೇಲೆ ಇದ್ದಂತಹ ಬೇರೆ ಧರ್ಮ ಗ್ರಂಥಗಳು ಕೆಳಗೆ ಉರುಳಿದವಂತೆ, ಆಗ ಸ್ವಾಮಿ ವಿವೇಕಾನಂದರು, 'ಈ ದೇಶದ ಧರ್ಮ ಹಾಳಾದರೆ ಇಡೀ ಜಗತ್ತೇ ಹಾಳಾಗುತ್ತದೆ, ಎನ್ನುವಂತಹ ಮಾತನ್ನು ಹೇಳಿದ್ದರು. Religion is only the life of India: When religion Will die India Will die ಎನ್ನುವಂತಹ ಮಾತನ್ನು ಸ್ವಾಮಿ ವಿವೇಕಾನಂದರ ಹೇಳಿದ್ದಾರೆ. ಮಾನವೀಯ ಮೌಲ್ಯಗಳಿಗೆ ಅತ್ಯಂತ ಕಳಕಳಿಯಿಂದ ಮಾತನಾಡಿದ್ದರು. ದರಿದ್ರ ನಾರಾಯಣೋ ಭವಃ ಎನ್ನುವಂತಹ ಮಾತನ್ನು ನಾವು ಕೇಳಿದ್ದೇವೆ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಒಂದು ಕಡೆ ಹೇಳುತ್ತಾರೆ; "If you Want to Worship

Narayana, you must Worship Daridra Narayana-millions of starving fellowmen of this Country" ಈ ದೇಶದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವಂತಹ ಲಕ್ಷಾಂತರ ಜನರ ಬಗ್ಗೆ ನೀವು ಕಾಳಜಿ ವಹಿಸಿ ಅವರ ಸೇವೆಯನ್ನು ಮಾಡಿ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಸ್ವಾಮಿ ವಿವೇಕಾನಂದರು ಪ್ರೇರಣೆಯನ್ನು ನೀಡಿರಬಹುದು ಎಂದು ನನಗೆ ಅನ್ನಿಸುತ್ತಿದೆ. ಇವತ್ತು ಅವರು ಜಾರಿಗೆ ತಂದಿರುವಂತಹ 'ಭಾಗ್ಯಲಕ್ಷ್ಮಿ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ'ಗಳು ಅತ್ಯಂತ ಬಡವರಿಗೆ ತಲುಪುವಂತಹ ಯೋಜನೆಗಳಾಗಿವೆ. ಆ ದಿನ ಸ್ವಾಮಿ

ವಿವೇಕಾನಂದರು ದರಿದ್ರ ನಾರಾಯಣರ ಬಗ್ಗೆ ಏನು ಮಾತುಗಳನ್ನು ಹೇಳಿದ್ದರು ಅದು ಇವತ್ತಿಗೂ ಪ್ರಸ್ತುತವಾಗಬೇಕಾಗಿದೆ. ಅವರು ಹೇಳಿದಂತಹ ಮಾತುಗಳಲ್ಲಿ ಕೆಲವನ್ನಾದರೂ ಅನುಕರಣೆ ಮಾಡಿದರೆ ನಾವು ದರಿದ್ರ ರೇಖೆಗಿಂತ ಕೆಳಗೆ ಇರುವಂತಹವರ ಸೇವೆಯನ್ನು ಮಾಡಿದಂತೆ ಆಗುತ್ತದೆ. ಇದನ್ನು ಎಲ್ಲರೂ ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ: ದೊಡ್ಡರಂಗೇಗೌಡ ನಾಮನಿರ್ದೇಶಿತರು:** ಸನ್ಮಾನ್ಯ ಸಭಾಪತಿಗಳೆ, ಸ್ವಾಮಿ ವಿವೇಕಾನಂದರಂತಹ ಮಹಾನ್ ಚೇತನದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ನೀಡಿರುವುದಕ್ಕಾಗಿ ಮೊದಲಿಗೆ ನಾನು ತಮಗೆ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ರಾಷ್ಟ್ರಕವಿ ಕುವೆಂಪುರವರ 'ಸ್ವಾಮಿ ವಿವೇಕಾನಂದ' ಶ್ರೇಣಿ ಕೃತಿಗಳನ್ನು ಅಧ್ಯಯನ ಮಾಡಿದ್ದರಿಂದ ನಾನು 60ರ ದಶಕದಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ಗ್ರಹಿಸಿದೆ. ಸ್ವಾಮಿ ವಿವೇಕಾನಂದರ ಭವ್ಯವಾದ ಮತ್ತು ಗಂಭೀರವಾಗಿರುವಂತಹ ಎತ್ತರ ಹಿಮಾಲಯದಷ್ಟು ದೊಡ್ಡದು. ಅವರ ಮನಸ್ಸು ಸಾಗರದಷ್ಟೆ ವಿಶಾಲವಾಗಿದ್ದು, ಅಂಬರದ ಹಾಗೆ ವೈಶಾಲ್ಯತೆಯನ್ನು ಪಡೆದುಕೊಂಡಿರುವಂತಹ ಸ್ವಾಮಿ ವಿವೇಕಾನಂದರು ಇಡೀ ಜಗತ್ತನ್ನು ಉದ್ದೇಶಿಸಿ ಅಮೆರಿಕಾದಲ್ಲಿ ಮಾತನಾಡಿ ದಂತಹ ಸಂದರ್ಭ ನನ್ನಲ್ಲಿ ರೋಮಾಂಚನ ಮತ್ತು ಪುಳಕವನ್ನುಂಟು ಮಾಡಿತ್ತು. ಆ ಪವಿತ್ರವಾಗಿರುವಂತಹ ಜಾಗವನ್ನು ಜೀವನದಲ್ಲಿ ಒಂದು ಬಾರಿಯಾದರೂ ನೋಡಬೇಕು, ಸ್ಪರ್ಶಿಸಬೇಕು ಮತ್ತು ಆ ಸ್ಥಳದಲ್ಲಿ ಒಂದು ನಿಮಿಷವಾದರೂ ನಿಲ್ಲಬೇಕು ಎಂದು ಅನೇಕ ಕಾಲ ಪರಿತಪಿಸಿದುಂಟು. ಯೋಗಾಯೋಗ, 1992ರಲ್ಲಿ ಆರ್ಟ್ ಆಫ್ ಲೀವಿಂಗ್ ಫೌಂಡೇಶನ್ ಮತ್ತು ಆದಿ ಚುಂಚನಗಿರಿ ಟ್ರಸ್ಟ್‌ರವರ ಪ್ರಯೋಜಕತ್ವದಲ್ಲಿ ನಾನು ಮತ್ತು ನನ್ನ ಧರ್ಮಪತ್ನಿ ಅಮೆರಿಕಾಗೆ ಹೋಗುವಂತಹ ಸೌಭಾಗ್ಯ ದೊರೆಯಿತು. ಚಿಕಾಗೋ ನಗರವನ್ನು ಪ್ರವೇಶ ಮಾಡಿದ ಮೊಟ್ಟ ಮೊದಲಿಗೆ, ಸ್ವಾಮಿ ವಿವೇಕಾನಂದರು ಎಲ್ಲಿ ಭಾಷಣವನ್ನು ಮಾಡಿದ್ದರೋ ಆ ಪವಿತ್ರವಾಗಿರುವಂತಹ ಜಾಗವನ್ನು ನೋಡಬೇಕೆಂದು ನಾವು ಅಂದುಕೊಂಡೆವು. ಈ ಹಿನ್ನೆಲೆಯಲ್ಲಿ ನಾವು ಅಲ್ಲಿಗೆ

ಹೋದೆವು. ಅಲ್ಲಿ ತುಂಬಾ ದೊಡ್ಡದಾಗಿರುವಂತಹ ಒಂದು ಆರ್ಟ್ ಗ್ಯಾಲರಿ ಇದೆ. ಅಲ್ಲಿಂದ ಒಂದು ದೊಡ್ಡ ರಸ್ತೆ ಹೋಗುತ್ತದೆ. ಆ ರಸ್ತೆಯಲ್ಲಿ, ಇಡೀ ವಿಶ್ವದ ಜನರನ್ನು ಸೆಳೆಯುವಂತೆ 'His holiness Sri Swami Vivekananda Marg' ಎಂದು ಒಂದು ಫಲಕವಿದೆ. ಅಮೆರಿಕಾ ದೇಶದಲ್ಲಿ ಸ್ವಾಮಿ ವಿವೇಕಾನಂದ ಮಾರ್ಗ ಎನ್ನುವ ಫಲಕವನ್ನು ಕಣ್ಣಾರೇ ನೋಡಿ ತುಂಬಾ ಆನಂದವಾಯಿತು. ಕೊಲಂಬಸ್‌ಹಾಲ್‌ಗೆ ಹೋಗಿ ಸ್ವಾಮಿ ವಿವೇಕಾನಂದರು ನಿಂತು ಮಾತನಾಡಿದಂತಹ ಡಯಾಸ್‌ನ್ನು ಮುಟ್ಟಿ ನೋಡಿ ನಮಗೆ ಬಹಳ ಆನಂದವಾಯಿತು. ಅಂತಹ ಸ್ವಾಮಿ ವಿವೇಕಾನಂದರು ಇಡೀ ಜಗತ್ತಿಗೆ ಮಾರ್ಗದರ್ಶಿ ಎನ್ನುವುದು ನನ್ನ ಭಾವನೆಯಾಗಿದೆ. ಅವರೊಂದು ದಿವ್ಯ ಚೇತನವಾಗಿದ್ದರು. ನಿಜವಾಗಿರುವಂತಹ ಜ್ಞಾನದ ಬೆಳಕಾಗಿದ್ದರು. ಅವರು ಇಡೀ ಭಾರತದ ಪ್ರತಿನಿಧಿ ಎಂದು ಹೇಳಿದರೆ ತಪ್ಪಲ್ಲ. ಇದನ್ನು ಕುರಿತು ನಾನು ಇಲ್ಲೇ ಬರೆದಂತಹ ಒಂದು ಪುಟ್ಟ ಕವಿತೆಯನ್ನು ಸದನದ ಮುಂದೆ ಓದಲು ಬಯಸುತ್ತಿದ್ದೇನೆ.

**ಪರಮ ಪೂಜ್ಯ ಪರಿವ್ರಾಜಕರಿಗೆ**

**ಜಗವ ಸುತ್ತಿದ ಜಾಗೃತಿಯ ಪರಿವ್ರಾಜಕರೇ**

**ದೀನ ದರಿದ್ರರೇ ದೇವರೆಂದ ವಿವೇಕಾನಂದರೇ**

**ಚಿರಂತರ ಚಿಂತನೆಯ ಹಿಮಾಲಯ ನೀವು**

**ವಿಶ್ವ ಮಾನವತೆಯ ಆಧ್ವರ್ಯು ನೀವು**

**ಸಂಸ್ಕೃತಿಯ ರೂವಾರಿಯೇ**

**ಧರ್ಮ ದೀಪಿಕೆಯ ಪೂರ್ವ ಸೂರಿಯೇ**

**ಆದರ್ಶ ನೀವು ನಮಗೆ–**

**ನೀವು ಭಾರತದ ಪರಂಜ್ಯೋತಿ ನಮ್ಮೆಲ್ಲರ ಬಾಳಿಗೆ!**

**ಪ್ರೊ: ಎಂ.ಆರ್.ದೊರೆಸ್ವಾಮಿ ನಾಮ ನಿರ್ದೇಶಿತರು:** ಮಾನ್ಯ ಸಭಾಪತಿಗಳೆ, ಇವತ್ತಿನ ದಿವಸ ಇದೊಂದು ವಿಶೇಷವಾದಂಥ ಸದವಕಾಶವೆಂದು ನಾನು ಭಾವಿಸುತ್ತೇನೆ. ನನಗೊಬ್ಬನಿಗೆ ಅಲ್ಲ ಈ ಸದನದ ಎಲ್ಲಾ ಸದಸ್ಯರಿಗೂ ಸಹ ಇದೊಂದು ವಿಶೇಷವಾದಂಥ ದಿವಸವೆಂದು ನಾನು ಭಾವಿಸಿದ್ದೇನೆ, ಡಾ: ಲೀಲಾರವರು ಹಾಗೂ ಇನ್ನುಳಿದ ಎಲ್ಲಾ ಮಿತ್ರರು ಅನೇಕ ಘಟನೆಗಳನ್ನು, ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ವ್ಯಕ್ತಿಗತವಾಗಿ ಸ್ವಾಮಿ ವಿವೇಕಾನಂದರಿಂದ ಪ್ರೇರಣೆಗೊಂಡವರಲ್ಲಿ ನಾನೂ ಸಹ ಒಬ್ಬ. ನನ್ನ ವಿದ್ಯಾರ್ಥಿ ಜೀವನದಿಂದಲೂ ರಾಮಕೃಷ್ಣ ಆಶ್ರಮಕ್ಕೆ ಹೋಗುವ ಪರಿಪಾಠ ಇದೆ. ಶನಿವಾರ ಹಾಗೂ ಭಾನುವಾರ ನನಗೆ ಬೇರೆ ಹವ್ಯಾಸಗಳೇನೂ ಇರಲಿಲ್ಲ. ಇವೆರಡು ದಿನಗಳಲ್ಲಿ ರಾಮಕೃಷ್ಣ ಆಶ್ರಮಕ್ಕೆ ಹೋಗಿ ಅಲ್ಲಿನ ಪ್ರವಚನಗಳನ್ನು ಕೇಳತಕ್ಕಂಥಾದ್ದು, ಗ್ರಂಥಾಲಯಕ್ಕೆ ಹೋಗಿ ಅವರ ಬಗ್ಗೆ ಓದತಕ್ಕಂಥಾ ಹವ್ಯಾಸವಿದೆ. ನಾನು ಸ್ವಾಮಿ ವಿವೇಕಾನಂದರ ಬಗ್ಗೆ ಎರಡು ಘಟನೆಗಳನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಸ್ವಾಮಿ ವಿವೇಕಾನಂದರನ್ನು ನಮ್ಮ ವಿಶ್ವದಲ್ಲಿಯೇ ಇವತ್ತಿನ ದಿವಸ ನಾವೆಲ್ಲರೂ ತುಂಬು ಪ್ರೀತಿಯಿಂದ, ಗೌರವದಿಂದ ಭಾವಿಸುತ್ತೇನೆ. ಭಾರತೀಯ ವಿಜ್ಞಾನ ಸಂಸ್ಥೆ ನಾವೆಲ್ಲರೂ ಹೆಮ್ಮೆ ದಿವಸ ಹೆಮ್ಮೆಪಡತಕ್ಕಂಥ ಒಂದು ಸಂಸ್ಥೆಯಾಗಿದೆ. ಇಂಥ ಒಂದು ಪ್ರತಿಷ್ಠಿತ ಸಂಸ್ಥೆಯನ್ನು ಹುಟ್ಟು ಹಾಕುವುದಕ್ಕೆ ಕಾರಣ ಸ್ವಾಮಿ ವಿವೇಕಾನಂದರು ಎನ್ನುವುದನ್ನು ನಾನು ಈ ಸದನದ ಹುಟ್ಟು ಹಾಕುವುದಕ್ಕೆ ಕಾರಣ ಸ್ವಾಮಿ ವಿವೇಕಾನಂದರು ಎನ್ನುವುದನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಸಂಸ್ಥೆಯನ್ನು ಹುಟ್ಟು ಹಾಕುವುದಕ್ಕೆ ಹೇಗೆ ಸ್ವಾಮಿ ವಿವೇಕಾನಂದರು ಕಾರಣ ಎಂಬುದನ್ನು ಹೇಳುತ್ತೇನೆ. ಒಂದು ಸಲ ಶ್ರೀ ಟಾಟಾರವರು ಸ್ವಾಮಿ ವಿವೇಕಾನಂದರ ಬಳಿಗೆ ಹೋಗಿ ಅವರನ್ನು ಕೇಳುತ್ತಾರೆ, ಸ್ವಾಮಿಜಿಯವರೆ, ತಾವು ನನಗೆ ಅಪ್ಪಣೆಯನ್ನು ಕೊಡಿ, ತಮ್ಮ ಅಪ್ಪಣೆ ಮೇರೆಗೆ ನಾನು ಯಾವುದಾದರೂ ಒಂದು ಸೇವಾ ಕಾರ್ಯದಲ್ಲಿ ತೊಡಗಬೇಕೆಂದು

ಕೊಂಡಿದ್ದೇನೆ. ಸಮಾಜಕ್ಕೆ ನನ್ನ ಕಾಣಿಕೆಯನ್ನು ಸಲ್ಲಿಸಬೇಕೆಂದುಕೊಂಡಿದ್ದೇನೆ ಎಂದು ಕೇಳುತ್ತಾರೆ. ಅದಕ್ಕೆ ಸ್ವಾಮಿ ವಿವೇಕಾನಂದರು ಟಾಟಾರವರನ್ನು ಕುರಿತು ತಾವು ಒಂದು ಕೆಲಸವನ್ನು ಮಾಡಿ. ವಿಶ್ವದಲ್ಲಿಯೇ ವಿಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ಶ್ರೇಷ್ಠವಾದಂಥ ಸಂಸ್ಥೆಯನ್ನು ಹುಟ್ಟು ಹಾಕಬೇಕೆಂಬ ಅಭಿಪ್ರಾಯ ನನಗಿದೆ, ಅದಕ್ಕೆ ನೀವು ಸಹಕಾರ ಕೊಡಿ, ಆ ನಿಟ್ಟಿನಲ್ಲಿ ನೀವು ಕಾರ್ಯೋನ್ಮುಖರಾಗಿ ಎಂದು ಆದೇಶವನ್ನು ಕೊಡುತ್ತಾರೆ. ಅದಕ್ಕೆ ಅವರು ಏನು ಮಾಡಬೇಕೆಂದು ಕೇಳುತ್ತಾರೆ? ಬೆಂಗಳೂರು ಒಂದು ಸುಂದರವಾದಂಥ ನಗರ. ಈ ನಗರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ಸುಸೂತ್ರವಾದ ಒಂದು ಸ್ಥಳ. ಇಂತಹ ಪಟ್ಟಣದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಸ್ಥಾಪನೆ ಮಾಡಿ ಎಂದು ಟಾಟಾರವರಿಗೆ ತಮ್ಮ ಮನವಿಯನ್ನು ಸಲ್ಲಿಸುತ್ತಾರೆ. ಭಾರತೀಯ ವಿಜ್ಞಾನ ಸಂಸ್ಥೆಯ ಬಗ್ಗೆ ಎಲ್ಲರೂ ಸಹ ತುಂಬಾ ಗರ್ವದಿಂದ ಹೇಳಿಕೊಳ್ಳುತ್ತಿದ್ದೇವೆ. ಬೆಂಗಳೂರು ನಗರದ ಬಗ್ಗೆ ಮಾತನಾಡಬೇಕಾದರೆ ಭಾರತೀಯ ವಿಜ್ಞಾನ ಸಂಸ್ಥೆ, ಭಾರತೀಯ ನಿರ್ವಹಣಾ ಸಂಸ್ಥೆ ಬಗ್ಗೆ ಹೇಳುತ್ತೇವೆ. ವಿಶ್ವದಲ್ಲಿಯೇ ವಿಜ್ಞಾನಕ್ಕೆ ಸಂಬಂಧಿಸಿದಂತೆ ಇಂತಹ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡುವುದಕ್ಕೆ ಸ್ವಾಮಿ ವಿವೇಕಾನಂದದರ ಕೊಡುಗೆ ಬಹಳ ಮಹತ್ತರವಾದುದು ಎಂದು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ ವಿವೇಕಾನಂದರು ತಮ್ಮ 39 ವರ್ಷಗಳಲ್ಲಿ ಮಾಡಿರುವ ಸಾಧನೆ ಏನು ಇದೆ, ಅವೆಲ್ಲವೂ ನಮಗೆಲ್ಲರಿಗೂ ಪರಿಚಯವಿದೆ. ನಿಜವಾಗಿಯೂ ಹೇಳುವುದಾದರೆ, 39 ವರ್ಷಗಳಲ್ಲಿ ಒಬ್ಬ ಮನುಷ್ಯ ಇಷ್ಟು ಪುಸ್ತಕಗಳನ್ನು ಬರೆಯುವುದಕ್ಕೆ ಸಾಧ್ಯವೇ, ಇಷ್ಟು ಪುಸ್ತಕಗಳನ್ನು ಓದುವುದಕ್ಕೆ ಸಾಧ್ಯವೇ, ಇಷ್ಟು ದೇಶಗಳಿಗೆ ಹೋಗಿ ನಮ್ಮ ಭಾರತ ದೇಶದ ಸಂಸ್ಕೃತಿ ಬಗ್ಗೆ ಪ್ರಚಾರ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಿದಾಗ ತುಂಬಾ ಅದ್ಭುತವಾದ, ಮಹತ್ತರವಾದಂಥ ಒಂದು ಶಕ್ತಿ ಅವರಿಗಿದೆ ಎನ್ನುವುದು ತಿಳಿಯುತ್ತದೆ. ಅದಕ್ಕೋಸ್ಕರ ಸಿಂಹಮಾಳಿ, ವೀರ ಸನ್ಯಾಸಿ, ಎಂದು ಅವರನ್ನು ನಾವು ಕರೆಯುತ್ತೇವೆ. ಸ್ವಾಮಿ ವಿವೇಕಾನಂದರನ್ನು ಬಿಟ್ಟು ಬೇರೆ

ಯಾರನ್ನು ನಾವು ಆ ರೀತಿ ಉಚ್ಚಾರಣೆ ಮಾಡುವುದಿಲ್ಲ. ಅಂತಹ ಮಹತ್ತರ ವಾದಂಥ ಒಂದು ಬಿರುದು ಅದು. ಬಡವರ ಬಗ್ಗೆ, ಜನ ಕಷ್ಟದಲ್ಲಿರುವಾಗ ಅವರ ಮನಸ್ಸು ಎಷ್ಟು ಮರುಗುತ್ತಿತ್ತು ಎನ್ನುವುದಕ್ಕೆ ಅವರ ಜೀವನದಲ್ಲಿ ಒಂದು ಶ್ರೇಷ್ಠವಾದಂಥ ಉದಾಹರಣೆ ಇದೆ, ಪಶ್ಚಿಮ ಬಂಗಾಳದಲ್ಲಿ ಅತಿಯಾ ದಂಥ famine ಬಂದಿತ್ತು, ಜನರು ತುಂಬಾ ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದರು. ಆಗ ಜನಗಳ ದಾರಿದ್ರ್ಯವನ್ನು, ಕಷ್ಟಗಳನ್ನು ನೋಡಿ ಸ್ವಾಮಿ ವಿವೇಕಾನಂದರು ಅವರಿಗೆ ಏನಾದರೂ ಮಾಡಬೇಕು. ರಾಮಕೃಷ್ಣ ಆಶ್ರಮದಿಂದ ಏನಾದರೂ ಕಾಣಿಕೆಯನ್ನು ಸಲ್ಲಿಸಬೇಕೆಂದು ಪರಿತಪಿಸಿದರು. ಇದರ ಬಗ್ಗೆ ಅವರ ಮನಸ್ಸಿನಲ್ಲಿ ಎಷ್ಟರಮಟ್ಟಿಗೆ ತಳಮಳವಿತ್ತು ಎಂದರೆ ಆಗ ರಾಮಕೃಷ್ಣ ಆಶ್ರಮದಲ್ಲಿ ಅವರ ಬಳಿ ಹಣ ಇರಲಿಲ್ಲ. ಅವರ ಮನಸ್ಸಿನಲ್ಲಿ ಎಷ್ಟು ತೀವ್ರತೆ ಇತ್ತು ಎಂದರೆ, ರಾಮಕೃಷ್ಣ ಮಠವನ್ನು ಮಾರಿ ಆದರೂ ಸಹ ನೊಂದವರಿಗೆ, ಕಷ್ಟದಲ್ಲಿರುವವರಿಗೆ, ಬಡವರಿಗೆ ಸಹಾಯ ಮಾಡಬೇಕೆಂದು ಸ್ವಾಮಿ ವಿವೇಕಾನಂದರ ಮನಸ್ಸಿನಲ್ಲಿತ್ತು. ನಾನು ಏತಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಬಡತನ ನಿವಾರಣೆಯ ಬಗ್ಗೆ, ಬಡವರ ಬಗ್ಗೆ ಯಾವ ಸ್ವಾಮೀಜಿಗೂ ಇಲ್ಲದೇ ಇರುವ ವಿಶೇಷವಾದಂಥ ಕಾಳಜಿ ಇದ್ದಂಥ ಮಹಾನ್ ಸನ್ಯಾಸಿ ಎಂದರೆ ವಿವೇಕಾನಂದರು. ಅದೇ ರೀತಿ ಸ್ವಾಮಿ ವಿವೇಕಾನಂದರೂ ಚಿಕಾಗೋದ ಸಮ್ಮೇಳನಕ್ಕೆ ಬೇರೆ ಬೇರೆ ಕಾರಣಗಳಿಂದ ಎರಡು ತಿಂಗಳು ಮೊದಲೇ ಹೋಗಿರುತ್ತಾರೆ. ಅಲ್ಲಿ ಅಷ್ಟು ಸಮಯ ಇಳಿದುಕೊಳ್ಳುವುದು ತುಂಬಾ ಕಷ್ಟ ಅಲ್ಲಿ ಭಾರತ ದೇಶದ ತರಹ ಇಲ್ಲ. ಆ ಚಳಿಯಲ್ಲಿ ಒಂದು ದಿವಸ ಕಾಲ ಕಳೆಯುವುದು ಕಷ್ಟವಿದೆ. ಆಗ ಅವರಿಗೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಒಬ್ಬರ ಪರಿಚಯವಾಗುತ್ತದೆ.ಅವರ ಮನೆ ಯಲ್ಲಿ ಸ್ವಾಮಿ ವಿವೇಕಾನಂದರು ಸುಮಾರು ಎರಡು ತಿಂಗಳಕಾಲ ಉಳಿದು ಕೊಂಡಿರುತ್ತಾರೆ. ಯಾರಾದರೂ ಚಿಕಾಗೋ ಸಮ್ಮೇಳನಕ್ಕೆ ಹೋಗ ಬೇಕಾದರೆ credential certificate ಬೇಕಾಗಿರುತ್ತದೆ. ಸ್ವಾಮಿ ವಿವೇಕಾನಂದರಿಗೆ ಭಾರತ ದೇಶದಿಂದ credential certificate ನ್ನು ಕೊಟ್ಟಿರುತ್ತಾರೆ.ಆದರೆ ಹೋಗುವಾಗ ಸ್ವಾಮಿ ವಿವೇಕಾನಂದರು ಮರೆತು ಅಥವಾ ಇನ್ಯಾವುದೋ ಕಾರಣದಿಂದ ಆ

ಸರ್ಟಿಫಿಕೇಟನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಆಗ ಪ್ರೊಫೆಸರ್‌ರವರು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅಧ್ಯಕ್ಷರಿಗೆ ಸ್ವಾಮಿ ವಿವೇಕಾನಂದರನ್ನು ಪರಿಚಯ ಮಾಡಿಕೊಡುತ್ತಾರೆ.ಆಗ ಅಲ್ಲಿ ಒಂದು ಗಂಟೆ ಸಮಯ ಮಾತನಾಡುತ್ತಾರೆ. ನಿಮಗೆ credential certificate ಕೊಡುವುದಕ್ಕಿಂತ ಶ್ರೇಷ್ಠವಾದ ಕಾರ್ಯ ಯಾವುದಿದೆ. I shall be very happy to give you credential certificate ಎಂದು ಹೇಳುತ್ತಾರೆ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅಂತಹ ಒಂದು 'greatest intellectual' ಎಂದು ನಾವು ಏನು ಹೇಳುತ್ತೇವೆ ಆ ಒಂದು ಸರಿಸಮಾನಕ್ಕೆ ಬರತಕ್ಕಂತ ಒಬ್ಬ ದೊಡ್ಡ ಸನ್ಯಾಸಿಯನ್ನು ನಮ್ಮ ಭಾರತ ದೇಶ ತಯಾರು ಮಾಡಿದೆ ಎನ್ನುವುದು ನಮಗೆಲ್ಲರಿಗೂ ಗೌರವ ಸಂದಿದೆ. 39 ವರ್ಷಗಳಲ್ಲಿ ಇಷ್ಟು ಸಾಧನೆಯನ್ನು ಮಾಡಿ, ಬೇರೆ ಎಲ್ಲಾ ವರ್ಗಗಳನ್ನು ಮುಟ್ಟಿಸಿ, ತಮ್ಮ ಸಂದೇಶವನ್ನು ಕೇವಲ ಭಾರತ ದೇಶಕ್ಕೆ ಮಾತ್ರವಲ್ಲ, ಭಾರತದ ಹೊರಗಡೆ ಬೇರೆ ಬೇರೆ ದೇಶಗಳಿಗೆ ಸಂದೇಶವನ್ನು ಮುಟ್ಟಿಸಿ, ನಮ್ಮ ದೇಶದ ಪರಂಪರೆ, ಸಂಸ್ಕೃತಿ ಬಗ್ಗೆ ಒಂದು ಹಿರಿತನವನ್ನು ಇಡೀ ವಿಶ್ವದಲ್ಲಿಯೇ ಏನು ಸಾರಿದ್ದರು ಆ ಮಹಾನುಭಾವನಿಗೆ ಎಲ್ಲರ ಜೊತೆಯಲ್ಲಿ ನಾನು ನನ್ನ ನಮನಗಳನ್ನು ಸಲ್ಲಿಸುತ್ತಿದ್ದೇನೆ. ನಮಸ್ಕಾರ.....

**ಡಾ: ಎ.ಹೆಚ್. ಶಿವಯೋಗಿ ಸ್ವಾಮಿ ಸರ್ಕಾರಿ ಮುಖ್ಯ ಸಚೇತಕರು:-** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಈ ಅಧಿವೇಶನ ಆರಂಭವಾದ ನಂತರ ಇವತ್ತು ಇಷ್ಟೊಂದು ಶಾಂತಿಯಿಂದ ಎಲ್ಲರೂ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ರೀತಿ ಮಾಡುವಂಥ ಪ್ರೇರಣೆಯನ್ನು ಕೊಟ್ಟಿದ್ದು ಬಹುಶಃ ಸ್ವಾಮಿ ವಿವೇಕಾನಂದರ ದಿವ್ಯ ಚೇತನ. ಆ ಹಿರಿಯರು, ಮಹಾತ್ಮರ ಶಕ್ತಿ ಹೇಗಿರುತ್ತದೆ ಎನ್ನುವುದನ್ನು ಇವತ್ತು ನಾವೆಲ್ಲರೂ ಇಲ್ಲಿ ಕಾಣುತ್ತಿದ್ದೇವೆ ಅಂದುಕೊಂಡಿದ್ದೇನೆ. ಯಾರ ಮಾತನ್ನು ಯಾರು ಕೇಳದೇ ಇರುವಂಥ ಒಂದು ವಾತಾವರಣ ಇದ್ದಂಥ ಈ ಅಧಿವೇಶನದಲ್ಲಿ ಸದನದಲ್ಲಿ ಇಷ್ಟೊಂದು ಶಾಂತಿಯುತವಾಗಿ

ಎಲ್ಲರೂ ಪಾಲ್ಗೊಂಡು ಅವರಿಗೆ ಶ್ರದ್ಧಾ ನಮನಗಳನ್ನು ಅರ್ಪಿಸುತ್ತಿದ್ದೇವೆ. ನನ್ನ ಸೌಭಾಗ್ಯವೆಂದರೆ ಪ್ರೌಢ ಶಿಕ್ಷಣವನ್ನು ನಾನು ರಾಮಕೃಷ್ಣ ವಿದ್ಯಾ ಶಾಲೆ, ಮೈಸೂರು ಇಲ್ಲಿ ಪಡೆಯುವುದಕ್ಕೆ ಅವಕಾಶ ಸಿಕ್ಕಿತ್ತು. ಹಾಗಾಗಿ ಸ್ವಾಮಿ ವಿವೇಕಾಂದರ ಬಗ್ಗೆ ಮೊದಲಿನಿಂದಲೂ ತುಂಬಾ ಶ್ರದ್ಧೆ, ಭಕ್ತಿ, ಗೌರವ ನನಗಿದೆ.

ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಒಂದು ಸಂಗತಿಯನ್ನು ಉಲ್ಲೇಖ ಮಾಡಿದರು. ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರನ್ನು ಕಾಳಿ ಮಾತೆಯ ಹತ್ತಿರ ಮೂರು ಬಾರಿ ಕಳುಹಿಸಿದರು.ಅವರಿಗೆ ಕಾಳಿ ಮಾತೆಯ ದರ್ಶನ ಸಿಗದೆ ಮತ್ತೆ ರಾಮಕೃಷ್ಣ ಪರಮಹಂಸರ ಬಳಿಗೆ ಬರುತ್ತಾರೆ. ಸ್ವಾಮಿ ವಿವೇಕಾನಂದರು ಮೂರನೇ ಬಾರಿ ಭೇಟಿ ಮಾಡಿ ಮಾತನಾಡಿದರು. ಇದರಲ್ಲಿ ಒಂದು ಸಣ್ಣ ತಿದ್ದುಪಡಿ ಇದೆ. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಬಳಿಗೆ ಹೋಗಿ ನಾನು ಪೂರ್ಣಾವಧಿ ಕಾರ್ಯಕರ್ತನಾಗಿ ಕೆಲಸ ಮಾಡುವುದಕ್ಕೆ ನಮ್ಮ ಮನೆಯಲ್ಲಿ ಬಹಳಷ್ಟು ಕಷ್ಟವಿದೆ, ಸಮಸ್ಯೆ ಇದೆ, ಆರ್ಥಿಕ ತೊಂದರೆ ಇದೆ. ಅದನ್ನು ನೀವು ಪರಿಹಾರ ಮಾಡಿ. ನಿಮಗೆ ಕಾಳಿ ಮಾತಾ ಒಲಿದಿದ್ದಾಳೆ ಎಂದು ನಾನು ಕೇಳಿದ್ದೇನೆ. ನೀವು ಕಾಳಿ ಮಾತೆಯ ಹತ್ತಿರ ನನ್ನ ಮನೆಯ ಆರ್ಥಿಕ ಸಮಸ್ಯೆ ಸರಿಹೋಗುವ ಹಾಗೆ ಕೇಳಿಕೊಳ್ಳಿ ಎಂದು ಹೇಳಿದಾಗ ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರಿಗೆ ಈ ರೀತಿ ಹೇಳುತ್ತಾರೆ. ಕಾಳಿ ಮಾತೆ ನನಗಷ್ಟೇ ಅಲ್ಲ, ನಿನಗೂ ತಾಯಿ, ನೀನೇ ಹೋಗಿ ಕೇಳು. ನಾನೇ ಏಕೆ ಕೇಳಬೇಕು ಎನ್ನುತ್ತಾರೆ. ಸ್ವಾಮಿ ವಿವೇಕಾನಂದರು ಮೊದಲನೆಯ ಸಾರಿ ಹೋಗಿ ಧ್ಯಾನ ಮಾಡಿದಾಗ ಕಾಳಿ ಮಾತೆ ಪ್ರತ್ಯಕ್ಷಳಾಗಿ ಏನು ವರ ಬೇಕೆಂದು ಕೇಳಿದಾಗ ವಿವೇಕಾನಂದರು ಆ ಒಂದು ವ್ಯಕ್ತಿತ್ವವನ್ನು, ದೇವಿಯನ್ನು ನೋಡಿ 'ತಾಯಿ ನನಗೆ ಭಕ್ತಿಯನ್ನು ಕೊಡು' ಎಂದು ಕೇಳುತ್ತಾರೆ. ಆಗ ಅವರು ವಾಪಸ್ ಬರುತ್ತಾರೆ. ರಾಮಕೃಷ್ಣ ಪರಮಹಂಸರು ಏನಪ್ಪ ಕಾಳಿ ಮಾತೆಯ ಬಳಿ ವರವನ್ನು ಕೇಳಿದೆಯೇ ಎಂದು ಕೇಳುತ್ತಾರೆ. ಆಗ ಸ್ವಾಮಿ ವಿವೇಕಾನಂದರು ನಾನು ಕಾಳಿ ಮಾತೆಯ ಬಳಿ ಭಕ್ತಿಯನ್ನು ಕೇಳಿದೆ ಎಂದು

ಹೇಳುತ್ತಾರೆ. ಆಗ ರಾಮಕೃಷ್ಣ ಪರಮಹಂಸರು 'ಅಯ್ಯೋ ದಡ್ಡ, ನೀನು ಹಣ ಬೇಕೆಂದು ಕೇಳುತ್ತಿದ್ದೆ. ಭಕ್ತಿಯನ್ನು ಕೇಳಿ ಬಂದೆಯಾ, ಇನ್ನೊಂದು ಸಾರಿ ಹೋದಾಗ ವೈರಾಗ್ಯವನ್ನು ಕೇಳುತ್ತಾರೆ. ಹಾಗಾಗಿ ಸ್ವಾಮಿ ವಿವೇಕಾನಂದರು ಭಕ್ತಿ, ಜ್ಞಾನ, ವೈರಾಗ್ಯ ಇದರ ಒಂದು ಪ್ರತಿರೂಪವಾಗಿ ಹೊರಹೊಮ್ಮುತ್ತಾರೆ. ಸ್ವಾಮಿ ವಿವೇಕಾನಂದರ ಬಗ್ಗೆ ಇಷ್ಟೊತ್ತಿನವರೆಗೂ ಎಲ್ಲಾ ಹಿರಿಯರು ಮಾತನಾಡಿದರು. ವಿಶೇಷವಾಗಿ ಚಿಕಾಗೋದಲ್ಲಿರುವಂಥ ಆ ಒಂದು ಸ್ಥಳದ ಬಗ್ಗೆ ಹೇಳುವುದಾದರೆ, ನಮ್ಮ ಹಿಂದಿನ ಸಭಾಪತಿಗಳಾದ ಶೀ ವೀರಣ್ಣ ಮತ್ತಿಕಟ್ಟಿಯವರ ನೇತೃತ್ವದಲ್ಲಿ ನಾವು 'ಅಕ್ಕ' ಸಮ್ಮೇಳನಕ್ಕೆ ಹೋಗುವ ಅವಕಾಶ ಸಿಕ್ಕಾಗ ಅಲ್ಲಿಗೆ ಹೋಗಿ ನೋಡುವ ಭಾಗ್ಯ ನನಗೂ ಕೂಡ ಸಿಕ್ಕಿತ್ತು.

**(1 ಗಂಟೆ)**

ಈಗ ತಾನೇ ಮಾನ್ಯ ದೊಡ್ಡರಂಗೇಗೌಡರು, ನಮ್ಮ ಊರಲ್ಲಿ ಅವರ ಸ್ಮರಣಾರ್ಥದ ಕುರುಹುಗಳನ್ನು ಹಾಕುತ್ತೇವೆಯೋ ಇಲ್ಲವೋ ಗೊತ್ತಿಲ್ಲ ಎಂಬ ಮಾತನ್ನು ಹೇಳಿದರು. ಆದರೆ ಅಮೇರಿಕಾದ ಚಿಕಾಗೋದಲ್ಲಿರುವ Peace Foundation ಕಟ್ಟಡ ಏನಿದೆ, ಆ ಮಾರ್ಗಕ್ಕೆ "ಸ್ವಾಮಿ ವಿವೇಕಾನಂದ ಮಾರ್ಗ" ಎಂದು ಹೆಸರು ಕೊಟ್ಟಿದ್ದಾರೆ. "ರೋಡ್" ಎಂದೂ ಸಹ ಬರೆದಿಲ್ಲ. ಅಲ್ಲಿ ಒಂದು platter ಹಾಕಿದ್ದಾರೆ. ಅಲ್ಲಿ ಹೋಗಿರುವವರು ಬಹುಶಃ ಗಮನಿಸಿರುತ್ತಾರೆ. ಅದರಲ್ಲಿ "Swami Vivekananda the first Hindu monk of India who came to America to teach Vedanta and his unprecedented success opened the gates for discussion between Eastern and Western Philosophies" ಎಂದು ಬರೆದಿದ್ದಾರೆ. ಅಂತಹ ವ್ಯಕ್ತಿತ್ವ ಸ್ವಾಮಿ ವಿವೇಕಾನಂದರದಾಗಿತ್ತು. ಅವರು ಚಿಕಾಗೋಗೆ ಹೋಗಿ ವಿಶೇಷವಾದ ಉಪನ್ಯಾಸದಲ್ಲಿ "Dear Brothers and Sisters" ಎಂದೇನು ಸಂಭೋದನೆ ಮಾಡಿದ್ದರೋ ಅದನ್ನು ನಾವುಗಳೆಲ್ಲ ಹೆಮ್ಮೆಯಿಂದ ಜ್ಞಾಪಕಮಾಡಿಕೊಳ್ಳುತ್ತೇವೆ. ಆ ಉಪನ್ಯಾಸದಲ್ಲಿ ಒಂದು ಅಂಶವನ್ನು ಹೇಳಿದ್ದಾರೆ. ಅದು I take pride to declare that I come from such a holy land where we don't just respect our religions, we treat all are true" ಎಂದು ಹೇಳಿದ್ದಾರೆ. ಎಲ್ಲಾ ಮತ–

ಪಂಥಗಳ ವಿಚಾರಗಳನ್ನು ನಾವು ಕೇವಲ ಗೌರವಿಸುವುದೇ ಅಲ್ಲದೇ ಅವುಗಳನ್ನು ಸತ್ಯವೆಂದು ನಂಬುತ್ತೇವೆ ಎಂದು ಹೇಳಿದರು. ಆಗ ಒಂದು ಶ್ಲೋಕವನ್ನು ಹೇಳಿದ್ದಾರೆ. ನನಗೆ ಶ್ಲೋಕಗಳು ಗೊತ್ತಿಲ್ಲ, ಮಾನ್ಯ ಮಧುಸೂದನ್‌ರವರ ಹತ್ತಿರ ಕೇಳಿ ಬರೆಸಿಕೊಂಡು ಬಂದಿದ್ದೇನೆ. ಆ ಶ್ಲೋಕ ಎಂದರೆ **"ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ, ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ"**. ಮಳೆ ಎಲ್ಲೇ ಬಂದರೂ ಆ ನೀರು ಸಾಗರವನ್ನೇ ಹೇಗೆ ಸೇರುತ್ತದೆಯೋ ಅದೇ ರೀತಿ ದೈವವನ್ನು ಯಾವುದೇ ರೀತಿಯಲ್ಲಿ ಆರಾಧನೆ ಮಾಡಿದರೂ ಅದು ಪರಮಾತ್ಮನಿಗೆ ಸಲ್ಲುತ್ತದೆ ಎನ್ನುವುದು ಭಾವಾರ್ಥ. ಸ್ವಾಮಿ ವಿವೇಕಾನಂದರ ಉಪನ್ಯಾಸವನ್ನು ಕೇಳಿದ ಮೇಲೆ ಒಬ್ಬ ಕ್ರೈಸ್ತ ಪಾದಿ ಮಾನ್ಯ ನಾಣಯ್ಯನವರು, ಚಿಕಾಗೋದಲ್ಲಿ ನಡೆದ ಸಮ್ಮೇಳನ ಧರ್ಮಸಮ್ಮೇಳನ ಆಗಿದ್ದು, ವಿಶ್ವಶಾಂತಿ ಸಮ್ಮೆಳನ ಆಗಿದ್ದು ಕ್ರಿಶ್ಚಿಯನ್ ಮತವನ್ನು ಬಹಳ ಪ್ರಭಾವಿಯಾಗಿ ಪ್ರಕಟಿಸಬೇಕು ಎನ್ನುವ ಕಾರಣಕ್ಕೆ ಅದನ್ನು ಏರ್ಪಡಿಸಿದ್ದರು ಎಂಬ ಮಾತನ್ನು ಉಲ್ಲೇಖ ಮಾಡಿದರು. ಅಲ್ಲಿದ್ದ ಒಬ್ಬ ಕ್ರೈಸ್ತ ಪಾದ್ರಿ, ಇಂತಹ ತತ್ವಜ್ಞಾನಿ ಇರತಕ್ಕಂಥ ದೇಶಕ್ಕೆ ನಾವೇನಾದರೂ ಧರ್ಮ ಪ್ರಚಾರವನ್ನು ಕಳಿಸಿದರೆ ನಮ್ಮಂಥ ಮೂರ್ಖರು ಯಾರು ಇರುವುದಿಲ್ಲ ಎಂದು ಹೇಳುತ್ತಾರೆ. ದೇಶದ ವಿಚಾರವನ್ನು ಪ್ರಪಂಚಕ್ಕೆ ತೋರಿಸಿಕೊಟ್ಟವರು ಸ್ವಾಮಿ ವಿವೇಕಾನಂದರು. ಇವರ ಬಗ್ಗೆ ರವೀಂದ್ರನಾಥ ಟ್ಯಾಗೋರ್‌ರವರ ಹತ್ತಿರ ಒಬ್ಬ ಪಾಶ್ಚಾತ್ಯ ವಿದ್ವಾಂಸ ಬಂದು, ನಾನು ಭಾರತದ ಬಗ್ಗೆ ಅಧ್ಯಯನ ಮಾಡಬೇಕು ಎಂದು ಕೇಳುತ್ತಾನೆ. ಆಗ ಟ್ಯಾಗೋರ್‌ರವರು "If you want to study India, study Swami Vivekananda as everything is positive in him nothing is negative. He is the cultural ambassador of India" ಎಂಬ ಮಾತನ್ನು ಹೇಳುತ್ತಾರೆ. ಆದರೆ ಇವತ್ತು ದೌರ್ಭಾಗ್ಯದಿಂದ ಒಂದು ಘಟನೆಯನ್ನು ಉಲ್ಲೇಖ ಮಾಡಬೇಕಾಗುತ್ತದೆ. So called secularism ಎನ್ನುವ ಭಾವನೆಗೆ ಹೋಗಿ... ಮಾನ್ಯ ಸಭಾಪತಿಗಳೆ ತಮಗೆ ಆಶ್ಚರ್ಯವಾಗ ಬಹುದು, 60 ರ ದಶಕದಲ್ಲಿ ಆವತ್ತಿನ ಮದ್ರಾಸ್ ಸೇಟ್‌ನವರು, ಕನ್ಯಾಕುಮಾರಿ ಯಲ್ಲಿರುವ ಸ್ವಾಮಿ ವೀವೇಕಾನಂದರ ವಿಗ್ರಹ ಕಾವಿ ಉಡುಪಿಗೆ ನೀಲಿ ಬಣ್ಣ

ಬಳಿಯಬೇಕು ಎಂದು ಹೊರಟ್ಟಿದ್ದರು. ಇದು ಒಂದು ದೌರ್ಭಾಗ್ಯದ ಸಂಗತಿ. ಉನ್ನತ ವ್ಯಕ್ತಿತ್ವವನ್ನು ಹೊಂದಿದ್ದ ದೇಶವನ್ನು ಒಂದು ಮಾಡಬೇಕು, ಎಲ್ಲಾ ಸಮಾಜವನ್ನು ಒಂದು ಮಾಡಬೇಕು ಎಂದು ಹೊರಟ್ಟಿದ್ದ ವ್ಯಕ್ತಿಯ ಬಗ್ಗೆ ಆದ ಚಿಂತನೆ ಏನಿತ್ತು ಅದು better sense prevailed ಎಂದು ಹೇಳುವ ಹಾಗೆ ಅದರ ಬಗ್ಗೆ ಮುಂದುವರೆಯಲಿಲ್ಲ.

ಮಾನ್ಯ ಸಭಾಪತಿಗಳೆ, ಇವರ ವಿಚಾರಧಾರೆಗಳನ್ನು ಪಠ್ಯಪುಸ್ತಕ ಗಳಲ್ಲಿ ಅಳವಡಿಸುವ ಅವಶ್ಯಕತೆ ತುಂಬಾ ಇದೆ. ಈ ಕುರಿತು ಸರ್ಕಾರ ತಕ್ಕ ಕ್ರಮವನ್ನನುಸರಿಸೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ವಿಶೇಷವಾಗಿ ಅವರು ನಮ್ಮ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಬರೆದ ಪತ್ರದಲ್ಲಿ "Those only live, who live for others, the rest are better dead than alive" ಎಂದು ಬರೆದು ತಿಳಿಸಿದ್ದರು. ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ನಾವು ಆತ್ಮಾವಲೋಕನ ಮಾಡಿಕೊಳ್ಳುವಂತಹ ಸಂಗತಿಗಳನ್ನು ಹೇಳಿದ್ದಾರೆ. ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ ಧರ್ಮದ ಬಗ್ಗೆ ಹೇಳಿದ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಚೆನ್ನೈನ Marine Lineನಲ್ಲಿ ಉಪನ್ಯಾಸ ಮಾಡು ಸಂದರ್ಭದಲ್ಲಿ ದೊಡ್ಡ ಜನಸಾಗರವೇ ಸೇರಿತ್ತು. ಅಲ್ಲಿ ಮಾತನಾಡಿದ ನಂತರ ಹೋರಗೆ ಬರಬೇಕಾದರೆ, ಅಲ್ಲೇ ಆಟವಾಡುತ್ತಿದ್ದ ಮಕ್ಕಳು ಸ್ವಾಮಿ ವಿವೇಕಾನಂದರನ್ನು ಮುತ್ತಿಕೋಳ್ಳುತ್ತಾರೆ. ಆ ಮಕ್ಕಳಲ್ಲಿ ಒಬ್ಬ, ಧರ್ಮ ಎಂದರೇನು ಎಂದು ಕೇಳುತ್ತಾನೆ. ಆಗ ಸ್ವಾಮಿ ವಿವೇಕಾನಂದರು 'be good and do good' ಎಂದಷ್ಟೇ ಹೇಳುತ್ತಾರೆ. ಅಂದರೆ ಮಗುವಿನಿಂದ ಹಿಡಿದು ಪಾಂಡಿತ್ಯ ಹೊಂದಿದಂತಹ ಎಲ್ಲರಿಗೂ ಅರ್ಥವಾಗುವ ಹಾಗೆ ಅವರು ಧರ್ಮದ ಬಗ್ಗೆ ಬೋಧನೆ ಮಾಡಿದರು. ಮಾನ್ಯ ಮಧುಸೂದನ್‌ರವರು ಹೇಳಿದ ಹಾಗೆ, ಸ್ವಾಮಿ ವಿವೇಕಾನಂದರು ಮೈಸೂರಿನಲ್ಲಿ ವಸತಿ ಮಾಡಿದಂಥ ಸ್ಥಳವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ₹ 5 ಕೋಟಿಗಳನ್ನು ಕಳೆದ ವರ್ಷದ ಬಜೆಟ್‌ನಲ್ಲಿ ನಿಗದಿಗೊಳಿಸಲಾಗಿತ್ತು. ಆದರೆ ಅದು ಲ್ಯಾಪ್ಸ್ ಆಗಿದೆ. ಸದನದಲ್ಲಿರುವ ಮಾನ್ಯ ಸಚಿವರಾದ ವಿಜಯಶಂಕರ್‌ರವರಿಗೆ ನಾನು ವಿನಂತಿ

ಮಾಡಿಕೊಳ್ಳುತ್ತೇನೆ. ಮೊನ್ನೆ ನಾನು ಮೈಸೂರಿನ ವಿದ್ಯಾಶಾಲೆಗೆ ಭೇಟಿ ಕೊಟ್ಟಾಗ ಸ್ವಾಮೀಜಿ ಕೂಡ ಅದರ ಬಗ್ಗೆ ಹೇಳುತ್ತಿದ್ದರು. ಆ ಜಾಗ ಏನಿದೆ ಅದರ ಸ್ವಾಧೀನಕ್ಕೆ ಸಂಬಂಧಿಸಿದಂತೆ ಸ್ವಲ್ಪ ಸಮಸ್ಯೆ ಇದೆ. ಈ ಸಮಸ್ಯೆಯನ್ನು ಬಗೆಹರಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಮಾನ್ಯ ಸಭಾಪತಿಗಳೆ, ಇವತ್ತೇನು ತಾವು ಸ್ವಾಮಿ ವಿವೇಕಾನಂದರನ್ನು ನೆನಪು ಮಾಡಿಕೊಳ್ಳುವ ಅವಕಾಶ ಕೊಟ್ಟು ಎಲ್ಲರೂ ಹೀಗೆ ಶಾಂತಿಯಿಂದ ಕುಳಿತುಕೊಳ್ಳುವ ಹಾಗೆ ಮಾಡಿದ್ದೀರಿ. 2011ನೇ ಇಸವಿ, ಸ್ವಾಮಿ ವಿವೇಕಾನಂದರ ಗುರುಗಳಾದಂಥ ರಾಮಕೃಷ್ಣ ಪರಮಹಂಸರ 175ನೇ ವರ್ಷವಾಗಿದೆ. ಎಂದು ಕರೆಯುತ್ತಾರೆ. ಹಾಗಾಗಿ ನಾಳೆ ರಾಮಕೃಷ್ಣ ಪರಮಹಂಸರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರ** : ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಿಸಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಹಿರಿಯ ಸದಸ್ಯರುಗಳು ಪೂಜ್ಯ ವಿವೇಕಾನಂದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. 148 ವರ್ಷಗಳ ಹಿಂದೆ, ಈ ದೇಶದಲ್ಲಿದ್ದಂಥ ಬಡತನ, ಮೂಢನಂಬಿಕೆ, ದಾರಿದ್ರ್ಯಗಳ ಬಗ್ಗೆ ಮತ್ತು ಸಮಾಜದಲ್ಲಿದ್ದಂಥ ಅಂಕುಡೊಂಕುಗಳನ್ನು ತಿದ್ದಲು "ಯುವಕರೇ ಏಳಿ, ಎದ್ದೇಳಿ" ಎಂದು ಸ್ವಾಮಿ ವಿವೇಕಾನಂದರು ಕರೆಕೊಟ್ಟಿದ್ದರು.ಸಮಾಜವನ್ನು ಸುಧಾರಿಸುವ ನಿಟ್ಟಿನಲ್ಲಿ ಶ್ರಮಿಸೋಣ. ನಿಮ್ಮಲ್ಲಿರುವ ಬಿಸಿರಕ್ತ ಆರುವುದರೊಳಗೆ ಒಳ್ಳೆಯ ಸಮಾಜನ್ನು ಕಟ್ಟೋಣ ಎಂದು ಕರೆಕೊಟ್ಟ ಹಿನ್ನಲೆಯಲ್ಲಿ ಇವತ್ತು ನಾವು ಒಂದು ಸದೃಢ ಭಾರತವನ್ನು ನೋಡುತ್ತಿದ್ದೇವೆ. ಆದರೆ ಇವತ್ತು ಪರಿಸ್ಥಿತಿ ಬೇರೆ ಇದೆ. ಮಾನ್ಯ ಶಂಕರಪ್ಪನವರು ಮಾತನಾಡುತ್ತಾ, ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾದಂಥ ನಮ್ಮ ಮುಖ್ಯಮಂತ್ರಿಗಳು ಭಾಗ್ಯಲಕ್ಷ್ಮೀ ಯೋಜನೆ ಅಡಿ ಸೀರೆ ಹಂಚುವಂಥ ಕಾರ್ಯವನ್ನು ಮಾಡಿತ್ತಿದ್ದಾರೆ ಎಂಬ ಒಂದು ಮಾತನ್ನು ಹೇಳಿದರು. ಹಿಂದೆ ದೇವರಾಜಅರಸುರವರೂ ಕೂಡ, ಸಮಾಜದ ದಾರಿದ್ರ್ಯವನ್ನು ಹೋಗಲಾಡಿಸುವ ಸಲುವಾಗಿ, ಒಂದೇ

ರಾತ್ರಿಯಲ್ಲಿ, ಒಂದೇ ಕಡೆ ಕೇಂದ್ರೀಕೃತವಾಗಿದ್ದಂಥ ಭೂಮಾಲೀಕರಿಂದ ಭೂಮಿಯನ್ನು ತೆಗೆದುಕೂಂಡು ಬಡವರಿಗೆ ಹಂಚಿದ್ದಾರೆ. ಇದಕ್ಕೆ ಸ್ವಾಮಿ ವಿವೇಕಾನಂದರೇ ಪ್ರೇರಿತರಾಗಿದ್ದರು. ಮಾನ್ಯ ಸಭಾಪತಿಗಳೆ, ತಾವು ಇವತ್ತು ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಸದನದಲ್ಲಿ ತಿಳಿಯಾದ ವಾತಾವರಣ ಉಂಟಾಗಿದೆ. ದೇಶವನ್ನು ಸದೃಢವಾಗಿ ಕಟ್ಟುವ ಪ್ರೇರಣೆ 148 ವರ್ಷಗಳ ಹಿಂದೆ ಆಗಿತ್ತು ಎನ್ನುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಕರ್ನಾಟಕದಂಥ ರಾಜ್ಯದಲ್ಲಿ, ಎಲ್ಲಾ ರಾಜಕೀಯ ಪಕ್ಷಗಳಗೊಂಡಂತೆ ಭ್ರಷ್ಟಾಚಾರದ ಮಾತುಗಳು ತಾಂಡವವಾಡುತ್ತಿದೆ ಎನ್ನುವ ಒಂದು ಅಂಶ ಚರ್ಚೆಗೆ ಬರುತ್ತದೆ. ನಿನ್ನೆ ವಿಧಾನಸಭೆಯಲ್ಲಿ ಸನ್ಮಾನ್ಯ ಮುಂಖ್ಯಮಂತ್ರಿಗಳ ಸಮ್ಮುಖದಲ್ಲಿ ಹಗರಣಗಳ ಸೂಟ್‌ಕೇಸ್ ಅನ್ನು ತೋರಿಸಲಾಯಿತು. ಇವತ್ತು, ಮಾನ್ಯ ಸಂದೇಶನಾಗರಾಜ್‌ರವರು ಮತ್ತು ಮಾನ್ಯ ನಾಣಯ್ಯನವರು ಹಗರಣಗಳ ಸೂಟ್‌ಕೇಸ್‌ಗಳನ್ನು ತಂದಿಟ್ಟಿದ್ದಾರೆ. ಮಾನ್ಯ ಮೋಟಮ್ಮನವರ ಹತ್ತಿರ ಕೂಡ ಸರ್ಕಾರದ ಹಗರಣಗಳ ದೂಡ್ಡ ಪಟ್ಟಿ ಇದೆ. ಸ್ವಾಮಿ ವಿವೇಕಾನಂದರ ವಿಷಯ ಮುಗಿದ ನಂತರ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

**ಪ್ರೊ: ಮುಮ್ತಾಜ್ ಅಲಿಖಾನ್ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾಂತರ ಕಲ್ಯಾಣ ಸಚಿವರು**: ಮಾನ್ಯ ಸಭಾಪತಿಗಳೆ, ಬಹಳ ಸೂಕ್ಷ್ಮವಾಗಿ ಸ್ವಾಮಿ ವಿವೇಕಾನಂದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನನ್ನ ಸೌಭಾಗ್ಯವೇನೆಂದರೆ, ಹಲವು ವರ್ಷಗಳ ಹಿಂದೆ "ವಿವೇಕಾನಂದ ಸರ್ವಿಸ್ ಸೊಸೈಟಿ" ಎಂಬ ಸಂಸ್ಥೆಯನ್ನು ನಾನು, ಡಾ: ವಿ.ಕೆ.ಆರ್.ವಿ.ರಾವ್ ಮತ್ತು ಶ್ರೀ ಎಂ. ಘೋರ್ಪಡೆ ಸ್ಥಾಪನೆ ಮಾಡಿದೆವು. ಈ ಸಂಸ್ಥೆಗೆ ಡಾ.ವಿ.ಕೆ.ಆರ್. ವಿ.ರಾವ್‌ರವರು ಅಧ್ಯಕ್ಷರಾಗಿದ್ದರು. ನನ್ನ ಜೊತೆ ಓದಿದಂಥ ಮಾನ್ಯ ಎಂ .ವೈ. ಘೋರ್ಪಡೆಯವರು ಉಪಾಧ್ಯಕ್ಷರಾಗಿದ್ದರು ಮತ್ತು ನಾನು ಕಾರ್ಯದರ್ಶಿ ಯಾಗಿ 3 ವರ್ಷಗಳ ಕಾಲ ಸೇವೆ ಮಾಡಿದ್ದೇನೆ. ನಾವು ಮುಖ್ಯವಾಗಿ ಮಾಡಿದಂತಹ ಸೇವೆ ಎಂದರೆ, ದಲಿತರ ಕಾಲೋನಿಗೆ ಹೋಗಿ ಅವರ ಸೇವೆ

ಮಾಡುವುದು. ಎರಡನೇಯದಾಗಿ, ಮುಸ್ಲಿಮ್ ಸಮಾಜದಲ್ಲಿ ಸ್ವಾಮಿ ವಿವೇಕಾನಂದರವರ ಪರಿಚಯವೇ ಇಲ್ಲ. ಅಕಾಸ್ಮಾತ ಆಗಿ ಏನಾದರೂ ತಿಳಿದುಕೊಂಡಿದ್ದರೆ ಅದು ನಕರಾತ್ಮಕವಾಗಿದೆ. ಅವರು ಇಸ್ಲಾಂ ದ್ರೋಹಿಗಳು, ಮುಸ್ಲಿಮ್ ದ್ರೋಹಿಗಳು ಎನ್ನುವಂತಹ ಮಾತು ಪ್ರಚಾರಕ್ಕೆ ಬಂದಿತ್ತು. ಆದ್ದರಿಂದ ಮುಸ್ಲಿಮ್ ಸಮಾಜದಲ್ಲಿ ಪರಿವರ್ತನೆ ತರುವುದಕ್ಕೆ ನಾವು ಕೆಲಸ ಮಾಡಿದ್ದೇವೆ. ಅವರ ಮಾರ್ಗದರ್ಶನ ಇಂದಿನ ಪರಿಸ್ಥಿತಿಯಲ್ಲಿ ಬೇಕಾಗಿದೆ. ಯಾರು ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ, ಒಂದು ರೀತಿ ನಮ್ಮ ರಾಜಕೀಯ ವಾತಾವರಣವನ್ನು ಬದಲಾಯಿಸಿದೆ. ಮೌಲ್ಯ ರಹಿತ ರಾಜಕೀಯ ವಾತವರಣದಲ್ಲಿ ನಾವು ಬದುಕಬೇಕಾದರೆ, ಸಾಮಾಜಿಕ ಸೇವೆಯನ್ನು ಮಾಡಬೇಕಾದರೆ, ಇವರ ಮಾರ್ಗದರ್ಶನ ನಮಗೆ ಬೇಕಾಗಿದೆ. ಧರ್ಮದ ಹೆಸರಿನಲ್ಲಿ ಅಧರ್ಮಿಯಗಳಾಗಿ ನಾವು ವರ್ತಿಸುತ್ತಿದ್ದೇವೆ. ಧರ್ಮ ಏನೆಂದು ಸರಿಯಾದ ಪರಿಚಯ ಬೇಕಾಗಿದ್ದರೆ, ಹಿಂದು ಎಂಬ ಪದದ ಅರ್ಥ ಬೇಕಾಗಿದ್ದರೆ, ನಾವು ಸಾಮಾಜಿಕ ಸಾಮರಸ್ಯವನ್ನು ಮುಂದುವರೆಸಬೇಕಾದರೆ ಅವರ ಮಾರ್ಗದರ್ಶನ ಬೇಕಾಗಿದೆ. ಬಹುತೇಕವಾಗಿ ಯುವಕರಿಗೆ ದಾರಿ ತಪ್ಪಿಸುವದು ರಾಜಕೀಯ ಧುರೀಣರು. ತಮ್ಮ ಸ್ವಾರ್ಥಕ್ಕೋಸ್ಕರ, ತಮ್ಮ ಪಕ್ಷಕ್ಕೋಸ್ಕರ ಯುವಕರನ್ನು ಬೇರೆ ದಾರಿಗೆ ಎಳೆಯುತ್ತಾರೆ. ಆದ್ದರಿಂದ ಯುವಕರನ್ನು ನಾವು ಸರಿಯಾದ ದಾರಿಯಲ್ಲಿ ತರಬೇಕಾದರೆ ವಿವೇಕಾನಂದವರನ್ನು ನಾವು ಸರಿಯಾಗಿ ಉಪಯೋಗ ಮಾಡಿಕೊಳ್ಳ ಬೇಕಾಗುತ್ತದೆ.

**ಸಭಾಪತಿಯವರು**: ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ತುಂಬಾ ಕಳಕಳಿಯಾದಂತಹ ಧನ್ಯವಾದಗಳನ್ನು ನಾನು ಅರ್ಪಿಸುತ್ತೇನೆ. ನಮಗೆ ಪ್ರೇರಣೆ ಸಿಕ್ಕಂಥ ಸ್ವಾಮಿ ವಿವೇಕಾನಂದವರ ಬಗ್ಗೆ ಅವರ ಜನ್ಮದಿನೋತ್ಸವ ಎಂದು ಪ್ರಸ್ತಾಪ ಮಾಡಿದಾಗ ಈ ತರಹ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ, ಒಳ್ಳೆಯ ಸಂಗತಿಗಳನ್ನು ಹೊರ ತರುವುದಕ್ಕೆ ಸಹಕರಿಸಿದಂತಹ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಧನ್ಯವಾದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನನ್ನ ಕರ್ತವ್ಯ ಒಂದನ್ನು ಮಾತ್ರ ಹೇಳಿಬಿಟ್ಟು ಮುಂದಿನ ಮಾತಿಗೆ ಬರುತ್ತೇನೆ. ಸಭಾಧ್ಯಕ್ಷರಿಂದ ಒಂದು ಸಂದೇಶ ಬಂದಿದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104 ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:12.01.2011 ರಂದು ಕರ್ನಾಟಕ ವಿನಿಯೋಗ ವಿಧೇಯಕ, 2011 ನ್ನು...

(ಗೊಂದಲ)

**ಸಭಾಪತಿಯವರು**: ದಯಮಾಡಿ ಯಾರು ಮಧ್ಯೆ ಮಾತನಾಡಬೇಡಿ. ಯಾರು ಬಾವಿಗೆ ಬರಬೇಡಿ. ನಾನು ಸಭೆಯನ್ನು ನಿಮ್ಮ ಮನಸ್ಸಿಗೆ ಬೇಜಾರಾಗದೆ ಇರುವ ರೀತಿಯಲ್ಲಿ ತಗೆದುಕೊಂಡು ಹೋಗುತ್ತೇನೆ. ದಯ ಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಇವತ್ತಿನ ದಿನ ಸಹಕಾರ ನೀಡಿ. ದಯವಿಟ್ಟು ಎರಡು ನಿಮಿಷ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ದಯವಿಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎಂ.ಸಿ.ನಾಣಯ್ಯ**: ಎರಡು ನಿಮಿಷ ಕಾಯಬೇಕೆಂದು ಮಾನ್ಯ ಸಭಾಪತಿಯವರು ಹೇಳಿದ್ದಾರೆ. ಅವರಿಗೆ ಗೌರವವನ್ನು ಕೊಡಲೇಬೇಕಾಗುತ್ತದೆ, ಆ ಗೌರವದ ಹಿನ್ನೆಲೆಯಲ್ಲಿ ನಾವು ಎರಡು ನಿಮಿಷ ಕಾಯೋಣ. ಅವರ ಸಂದೇಶ ಏನಾದರೂ ಇರಲಿ. ಕಡೆಗೆ ನಮಗೆ ಬೇಕಾಗಿರತಕ್ಕಂಥ ವಿವೇಕಾನಂದರ ಮಾರ್ಗದರ್ಶನ ಇದೆಯಲ್ಲಾ ಆ ಮಾರ್ಗದರ್ಶನ ಆಡಳಿತ ಪಕ್ಷದಲ್ಲಿರತಕ್ಕಂಥ ಮೊದಲನೆಯ ಕುರ್ಚಿಯಿಂದ ಶುರುವಾಗಲಿ.

## 2. **ಪ್ರಕಟಣೆ**

**ಸಭಾಪತಿಯವರು: ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104 ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:12.01.2011 ರಂದು ಕರ್ನಾಟಕ ಧನ ವಿನಿಯೋಗ ವಿಧೇಯಕ, 2011 ನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ. ಇದನ್ನು ತಮ್ಮ ಗಮನಕ್ಕೆ

ತರುತ್ತೇನೆ. ನಾವು ಇಂತಹ ಒಳ್ಳೆಯ ವಾತವರಣದಲ್ಲಿ ಸಭೆಯನ್ನು ನಡೆಸಿದ್ದೇವೆ. ಸಭೆಯನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಿ, ಆಮೇಲೆ ಬಾಕಿ ಚಟುವಟಿಕೆಗಳನ್ನು ಮಾಡೋಣ. ಈಗ ಎರಡೂವರೆ ಗಂಟೆಯವರೆಗೆ ಸದನವನ್ನು ಮುಂದೂಡಲಾಗಿದೆ.

**(1ಗಂಟೆ 13 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ 2 ಗಂಟೆ 45 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

**(ವಿರೋಧ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದರು)**

### 3. ಹಕ್ಕುಚ್ಯುತಿ ಪ್ರಸ್ತಾವದ ಮಂಡಣೆಗೆ ಅನುಮತಿ ಕೋರಿ ಚರ್ಚೆ.

### ಸದನದ ಘನತೆ ಗೌರವಕ್ಕೆ ಚ್ಯುತಿ ಆಗಿರುವ ಕುರಿತು.

**ಶ್ರೀ ಮನೋಹರ ಮಸ್ಕಿ:-** ನಾನು ಒಂದು ಹಕ್ಕುಚ್ಯುತಿ ಪ್ರಸ್ತಾವವನ್ನು ತಮಗೆ ಕಳುಹಿಸಿ ಕೊಟ್ಟಿದೆ.

**ಶ್ರೀಮತಿ ವಿಮಲಾಗೌಡ:-** ರಾತ್ರಿ ಎಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನು ಸಂಬಂಧ ಎಂದು ಕೇಳಿದ ಹಾಗೆ ಇಂದು ನಿಮ್ಮ ಕಥೆ ಆಗಿದೆ.

**ಸಭಾಪತಿಯವರು:** ಬೆಳಿಗ್ಗೆ ಬಹಳ ಒಳ್ಳೆಯ ನಡವಳಿಕೆಯನ್ನು ನಡೆಸಿದ್ದೇವೆ. ಎಲ್ಲರೂ ಬಹಳ ಸಂತೋಷಪಟ್ಟಿದ್ದಾರೆ. ತುಂಬಾ ಜನರು ವಿಧಾನ ಪರಿಷತ್ತಿನ ಘನತೆ ಗೌರವವನ್ನು ಕೊಂಡಾಡಿದ್ದಾರೆ. ಇಂದು ಪ್ರಶ್ನೋತ್ತರ ಒಂದು ನಡೆದರೆ ಮುಂದಿನ ಕಲಾಪವನ್ನು ನಂತರ ತೆಗೆದು ಕೊಳ್ಳಬಹುದು. ಇಂದು ಸ್ವಲ್ಪ ಪ್ರಶ್ನೆಗಳು ಇವೆ. ಜಾಸ್ತಿ ಇಲ್ಲ ಬಹಳ ಜನ ಸದಸ್ಯರು ಪ್ರಶ್ನೆಗಳನ್ನು ಕಳುಹಿಸುವುದರಲ್ಲಿ ಹಿಂದೇಟು ಹಾಕಿದ್ದಾರೆ. ಏಕೆ ಈ ರೀತಿ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ಪ್ರಶ್ನೆಗಳ ಸಂಖ್ಯೆ ಬಹಳ ಕಡಿಮೆ

ಇದೆ. ಈ ಪ್ರಶ್ನೆಗಳನ್ನು ಇಂದು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. ಕೆಳ ಮನೆಯಿಂದ ಕೆಲವು ವಿಷಯಗಳ ಬಗ್ಗೆ ಸಂದೇಶಗಳು ಬಂದಿದೆ. ಅದರ ಬಗ್ಗೆ ಏನು ಮಾಡಬೇಕೋ ನಂತರ ನೋಡೋಣ. ಪ್ರಶ್ನೋತ್ತರಗಳನ್ನು ಮುಗಿಸಿದರೆ ಆಮೇಲೆ ಯಾವ ವಿಚಾರವನ್ನಾದರೂ ತೆಗೆದುಕೊಳ್ಳಬಹುದು. ನಾನು ಈ ವಿಚಾರವನ್ನು ಮೊದಲ ದಿವಸದಿಂದ ಇದನ್ನು ಹೇಳುತ್ತಿದ್ದೇನೆ. ಸದನದಲ್ಲಿ ಬೇರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಿದ್ದರೂ ನಂತರ ಅದರ ಬಗ್ಗೆ ವಿಚಾರ ಮಾಡಬಹುದು. ಇಂದು ಬೆಳಿಗ್ಗೆ ಸ್ವಾಮಿ ವಿವೇಕಾನಂದರ ಬಗ್ಗೆ ಇಲ್ಲಿ ಎಲ್ಲರೂ ಮಾತನಾಡಿದಿರಿ. ಬಹಳ ಚೆನ್ನಾಗಿ ಸದನದಲ್ಲಿ ನಡೆಸಿದ್ದೇವೆ. ಬಾಕಿ ಏನೇ ಇರಲಿ ಮೊದಲು ಪ್ರಶ್ನೋತ್ತರಗಳನ್ನು ಮುಗಿಸೋಣ.

**ಶ್ರೀ ಗೋ.ಮಧುಸೂದನ್ ಪದವೀಧರ ಕ್ಷೇತ್ರ:** ಮಾನ್ಯ ಸಭಾಪತಿಗಳೆ, ನಾನು ಈ ಸದನದ ಘನತೆಗೆ ಗೌರವವನ್ನು ಕಾಪಾಡುವುದಕ್ಕೆ ಬೇಕಾದ ರೀತಿಯಲ್ಲಿ ಸದನದ ಹಕ್ಕುಚ್ಯುತಿ ಆಗಿದೆ ಎಂದು ತಮಗೆ ಹಕ್ಕುಚ್ಯುತಿ ಪ್ರಸ್ತಾಪವನ್ನು ಬಹಳ ಗಂಭೀರವಾದ ಸಂಗತಿಯನ್ನು ತಮಗೆ ಕಳುಹಿಸಿ ಕೊಟ್ಟಿದ್ದೇನೆ. ನಮ್ಮೆಲ್ಲರ ಹಕ್ಕಿನ ಚ್ಯುತಿಯಾಗಿದೆ.

**ಸಭಾಪತಿಯವರು:** ಹೌದು. ಮಾನ್ಯ ಸದಸ್ಯರಾದ ಮಧುಸೂದನ್ ಅವರು ಏನೋ ಕೇಳಿದ್ದಾರೆ. ಅದೆಲ್ಲಾ ಹೌದು. ನಾನು ತಮಗೆ ಮಾತನಾಡುವು ದಕ್ಕೆ ಅವಕಾಶವನ್ನು ಕೊಟ್ಟೇ ಕೊಡುತ್ತೇನೆ. ಹಕ್ಕುಚ್ಯುತಿ ಮಂಡನೆ ಮಾಡುವುದಕ್ಕೂ ಸಹ ಪ್ರಶ್ನೋತ್ತರವಾದ ನಂತರ ಮಾಡೋಣ ಎಂಬ ಪ್ರತೀತಿ ನಮ್ಮಲ್ಲಿ ಇದೆ. ಆದ್ದರಿಂದ ಮೊದಲು ಪ್ರಶ್ನೋತ್ತರಗಳನ್ನು ಮಾಡೋಣ. ಸ್ವಲ್ಪ ಪ್ರಶ್ನೆಗಳು ಇವೆ. ಬೇಗ ಬೇಗನೆ ಮುಗಿಸಿದರೆ ನಂತರ ಬೇರೆ ಕಾರ್ಯ ಕಲಾಪವನ್ನು ತೆಗೆದುಕೊಳ್ಳಬಹುದು. ಪ್ರಶ್ನೆಗಳಿಗೆ ಉತ್ತರವನ್ನು ನೀಡಲು ಮಾನ್ಯ ಸಚಿವರುಗಳು ತಯಾರಾಗಿ ಬಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಬೇಗ ಬೇಗನೆ ಪ್ರಶ್ನೋತ್ತರಗಳನ್ನು ಮುಗಿಸಿದರೆ ಒಳ್ಳೆಯದು. ನಿಮ್ಮ ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ ಅದರಲ್ಲಿ ಏನು ವಿಷಯ ಇದೆ ಎಂದು ನಾನು ನೋಡಿಲ್ಲ

ನೋಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಪ್ರಸ್ತಾಪ ಮಾಡಬೇಕೆಂದು ನಿಂತಿದ್ದಾರೆ.

**ಶ್ರೀ ಗೋ. ಮಧುಸೂದನ್**: ನಾನು ಹಕ್ಕುಚ್ಯುತಿ ಬಗ್ಗೆ ತಮಗೆ ಪ್ರಸ್ತಾವವನ್ನು ಕಳುಹಿಸಿದ್ದೇನೆ. ತಾವು ದಯಮಾಡಿ ಅದರ ಬಗ್ಗೆ ಗಮನವನ್ನು ಕೊಡಬೇಕು.

**ಸಭಾಪತಿಯವರು**:– ಕೊಡುತ್ತೇನೆ.

**4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಮುಂದುವರಿದ ಚರ್ಚೆ.**

**ರಾಜ್ಯದಲ್ಲಿ ನಡೆದಿರಬಹುದಾದ ಭ್ರಷ್ಟಾಚಾರ ಹಾಗೂ ಹಗರಣಗಳ ಕುರಿತು.**

**ಶ್ರೀಮತಿ ಮೋಟಮ್ಮ ವಿರೋಧ ಪಕ್ಷದ ನಾಯಕರು (ತಮ್ಮ ಸ್ಥಳದಲ್ಲಿ ನಿಂತು ಮಾತನಾಡಿದರು)**:– ಮಾನ್ಯ ಸಭಾಪತಿಯವರೇ, ನಮಗೆ ತಮ್ಮ ಬಗ್ಗೆ ಬಹಳ ಗೌರವ ಅಭಿಮಾನ ಇದೆ. ತಾವು ಇದೇ ಸದನದಲ್ಲಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಕುಳಿತುಕೆಲಸ ಮಾಡಿದ್ದಿರಿ. ನಾವು ಇಂದು ಇಲ್ಲಿ ಪ್ರಸ್ತಾಪ ಮಾಡಬೇಕೆಂದಿರುವ ವಿಷಯ ತಮ್ಮ ಅನುಭವಕ್ಕೆ ಗೊತ್ತಿರುವಂತಹ ತಮ್ಮ ಅನುಭವಕ್ಕೆ ಬಂದಿರುವಂತಹ ವಿಚಾರವೇ ಆಗಿದೆ. ನಾವು ತಮಗೆ ಕಳಿಹಿಸಿರುವಂತಹ ನಿಲುವಳಿ ಸೂಚನೆ ಏನು ಇದೆ ಇದು ಬಹಳ ಮಹತ್ತರವಾದಂತಹ ಸೂಚನೆಯಾಗಿದೆ. ಸದನದಲ್ಲಿ ಇನ್ನು ಯಾವುದೇ ಕಾರ್ಯಕಲಾಪ ಇದ್ದರೂ ಅದನ್ನು ಬದಿಗೊತ್ತಿ ಈ ವಿಚಾರವನ್ನು ತೆಗೆದುಕೊಳ್ಳಬೇಕೆಂದು ಸದನದ ನಿಯಮಾವಳಿಯಲ್ಲಿ ಕೂಡ ಹೇಳಿದೆ. ಅದರ ಪ್ರಕಾರ ನಾನು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇವೆ. ಈ ನಿಲುವಳಿ ಸೂಚನೆಯನ್ನು ನಾವು ಏನು ತಂದಿದ್ದೇವೆ ಇದರಲ್ಲಿ ರಾಜ್ಯದಲ್ಲಿ ನಡೆದಿರುವಂತಹ ದೊಡ್ಡ ಘಟನೆ ಒಂದು ಸಮಸ್ಯೆಯಾಗಿದ್ದು ರಾಜ್ಯವ್ಯಾಪಿಯಾಗಿ ಭ್ರಷ್ಟಾಚಾರ ಜನರನ್ನು ಕಾಡುತ್ತಿದೆ. ಈ ಭ್ರಷ್ಟಾಚಾರದಿಂದಾಗಿ ಈ ರಾಜ್ಯ ತತ್ತರಿಸಿ ಹೋಗಿದೆ. ಆದುದರಿಂದ ತಾವು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಸದಸ್ಯರುಗಳಿಗೆ ಆಸಕ್ತಿ ಇದ್ದ ಹಾಗೆ ಇಲ್ಲ. ಆದ್ದರಿಂದ ಕೆಲವೇ

ಕೆಲವು ಪ್ರಶ್ನೆಗಳು ಇವೆ ಎಂದು ತಾವೇ ಹೇಳಿದಿರಿ. ಆ ಪ್ರಶ್ನೆಗಳು ಒಂದು ಜಿಲ್ಲೆಗೆ ಇರಬಹುದು ಇಲ್ಲವೇ ಒಂದು ಕ್ಷೇತ್ರಕ್ಕೆ ಸೀಮಿತವಾದಂತೆ ಇರಬಹುದು ಇಲ್ಲವೇ ಸಣ್ಣ ಸಣ್ಣ ಸಮಸ್ಯಗಳಿಗೆ ಸೇರಿದಂತೆ ಇರಬಹುದು. ಆದರೆ ಈ ವಿಚಾರ ಇಡೀ ರಾಜ್ಯದಲ್ಲಿ ನಡೆದಿರುವ ಭೂ ಹಗರಣ, ಡೀ ನೋಟಿಫಿಕೇಷನ್ ಮತ್ತು ಅದರಲ್ಲಿ ಆಗಿರುವ ಅವ್ಯವಹಾರ ಮತ್ತು ಭ್ರಷ್ಟಾಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತು ತಾವು ಈ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಪರಿಪರಿಯಾಗಿ ಮೊನ್ನೆಯಿಂದ ಕೇಳಿಕ್ಕೊಳ್ಳುತ್ತಿದ್ದೇನೆ. ಇದಕ್ಕಾಗಿಯೇ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಇಲ್ಲಿ ಧರಣಿಯನ್ನು ನಡೆಸುತ್ತಿದ್ದೇವೆ. ತಮ್ಮ ಅನುಭವದ ಹಿನ್ನೆಲೆಯಲ್ಲಿ ನೀವು ಇದಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಾ ಎಂಬ ವಿಶ್ವಾಸ ನಮಗೆ ಇದೆ. ತಾವು ಈ ವಿಚಾರದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಅಂದರೆ ತಾವು ಈ ಹಿಂದೆ ಏನು ರೂಲಿಂಗ ಅನ್ನು ಕೊಟ್ಟಿದ್ದಿರಿ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಿ.ಎನ್.ಬಚ್ಚೇಗೌಡ ಕಾರ್ಮಿಕ ಸಚಿವರು:** ತಾವು ರೂಲಿಂಗ ಅನ್ನು ಕೊಟ್ಟಾಗಿದೆ.

**ಶ್ರೀಮತಿ ಮೋಟಮ್ಮ:** ಮಾನ್ಯ ಸಭಾಪತಿಯವರು ರೂಲಿಂಗ್ ಅನ್ನು ಕೊಡುವುದಕ್ಕೆ ಮೊದಲೇ ನಾವು ಧರಣಿ ನಿರತರಾಗಿದ್ದೆವು.

**ಶ್ರೀ ಬಿ.ಎನ್.ಬಚ್ಚೇಗೌಡ:** ಮರು ಪರಿಶೀಲನೆ ಮಾಡಿ ಎಂದು ಕೇಳಿಕೊಂಡೇ ಬರುತ್ತಿದ್ದಾರೆ. ಈಗಾಗಲೇ ತಾವು ಸದನದಲ್ಲಿ ತೀರ್ಮಾನ ಕೊಟ್ಟಿದ್ದೀರಿ. ಒಂದು ಸಲ ರೂಲಿಂಗ್ ಅನ್ನು ನೀಡಿದ ಮೇಲೆ ಮರು ಪರಿಶೀಲನೆ, ಮತ್ತೆ ಮರು ಪರಿಶೀಲನೆ ಎಂದು ಹೇಳುತ್ತಲೇ ಸಮಯವನ್ನು, ದಿನಗಳನ್ನು ಕಳೆಯುತ್ತಿದ್ದಾರೆ. ಇದರಿಂದಾಗಿ ಬೇರೆ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ.

**ಶ್ರೀಮತಿ ಮೋಟಮ್ಮ:-** ನಾವು ಇಲ್ಲಿ ದಿನಗಳನ್ನು ಕಳೆಯುವುದಕ್ಕೆ ಬಂದಿಲ್ಲ. ವಿಷಯದ ಮಹತ್ವವನ್ನು ನಾವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಈ

ವಿಚಾರದ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ಆ ದೃಷ್ಟಿಯಿಂದ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ಬಿ.ಎನ್.ಬಚ್ಚೇಗೌಡ:–** ಚರ್ಚೆ ಆಗಲಿ. ಪ್ರಶ್ನೋತ್ತರ ಆದ ನಂತರ ಆ ವಿಚಾರದ ಬಗ್ಗೆ ಚರ್ಚೆ ಆಗಲಿ.

**ಶ್ರೀಮತಿ ಭಾರತಿ ಶೆಟ್ಟಿ:–** ಈ ಪ್ರಶ್ನೆಯಲ್ಲಿ ನೇಕಾರರ ಸಮಸ್ಯೆ ಕೂಡ ಅಡಗಿದೆ. ಈ ಪ್ರಶ್ನೋತ್ತರವನ್ನು ತಾವು ಮೊದಲು ತೆಗೆದುಕೊಳ್ಳಬೇಕಾಗಿದೆ. ಇದೂ ರಾಜ್ಯದ ಜನರ ಸಮಸ್ಯೆಯಾಗಿದೆ.

(ಗೊಂದಲ)

ಪ್ರಶ್ನೆಯಲ್ಲಿ ಮಹತ್ವ ಇಲ್ಲ ಎಂದು ಹೇಳಲಿಲ್ಲ.

(ಗೊಂದಲ)

**ಶ್ರೀ ಭಾರತಿ ಶೆಟ್ಟಿ:–** ಹಳೆ ಕಥೆ ಹೊಸ ರಾಗ ಆಗುತ್ತಿದೆ. ಮೂರು ದಿನದಿಂದ ಹಳೆ ಕಥೆ ಹೊಸ ರಾಗ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಹೊಸ ಕಥೆ ಕೂಡ ಇದೆ.

(ಗೊಂದಲ)

**ಶ್ರೀ ಭಾರತಿ ಶೆಟ್ಟಿ:–** ಬರೀ ಹಳೆ ಕಥೆಯಾಗಿ ಹೋಗಿದೆ. ಪ್ರಶ್ನೋತ್ತರ ವೇಳೆ ಅವಕಾಶ ಮಾಡಿಕೊಡುತ್ತಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇದರಲ್ಲಿರುವುದು ಹೊಸ ಕಥೆ ಇದೆ ಎಂದು ತಾವು ಹೇಳಿ. ಇತ್ತೀಚೆಗೆ ನಡೆದಂಥ ಹೊಸ ಕಥೆಗಳೇ ಇದರಲ್ಲಿರುವಂಥದ್ದು. ಇದರಲ್ಲಿ ಹಳೆ ಕಥೆಗಳು ಇಲ್ಲ.

**ಶ್ರೀಮತಿ ಭಾರತಿ ಶೆಟ್ಟಿ :–** ಮೂರು ದಿನದಿಂದ ಏನೂ ನಡೆಯುತ್ತಿಲ್ಲ, ಹಳೆ ಕಥೆ, ದಿನಕ್ಕೊಂದು ಹೊಸ ರಾಗ.

(ಗೊಂದಲ)

**ಶ್ರೀಮತಿ ವಿಮಲಾಗೌಡ:–** ಬಾವಿಯಲ್ಲಿರುವಂಥವರನ್ನು ಗಮನಿಸಿದರೆ ಅವರಲ್ಲಿ ಒಮ್ಮತ ಇಲ್ಲ ಎಂದು ಗೊತ್ತಾಗುತ್ತದೆ. ಅಲ್ಲಿ ಕಾಂಗ್ರೆಸ್ ಪಕ್ಷದಲ್ಲಿ 4–5 ಜನ, ಜೆಡಿ (ಎಸ್) ದಿಂದ 3–4 ಜನ ಇದ್ದಾರೆ. ಅಂದರೆ ಅವರ ಸದಸ್ಯರಲ್ಲಿಯೇ ಈ ರೀತಿ ಸಭೆ ನಡೆಸದೆ ಪ್ರತಿಭಟನೆ ಮಾಡುವಂಥದ್ದು ಅವರ ಸದಸ್ಯರುಗಳಿಗೆ ಇಷ್ಟ ಇಲ್ಲ.

**ಶ್ರೀಮತಿ ಮೋಟಮ್ಮ:–** ಎಲ್ಲರೂ ಊಟಕ್ಕೆ ಹೋಗಿದ್ದಾರಷ್ಟೆ. ನೀವು ಹೇಳುವ ರೀತಿಯಲ್ಲಿ ಏನೂ ಇಲ್ಲ.

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರ ಮಾತುಗಳು ಮುಗಿದಿದ್ದರೆ ತಮ್ಮ ಪಕ್ಷದವರು ಇನ್ನೊಬ್ಬರು ಮಾತನಾಡಬಹುದು.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್** (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಕರ್ನಾಟಕ ಏಕೀಕರಣ ಆಗಿ 54 ವರ್ಷಗಳು ಆಗಿವೆ. ಇವೊತ್ತು 55ನೇ ವರ್ಷದಲ್ಲಿದ್ದೇವೆ. ಎಷ್ಟೋ ಸರ್ಕಾರಗಳು ಕರ್ನಾಟಕದಲ್ಲಿ ಆಡಳಿತವನ್ನು ಮಾಡಿವೆ. ಆದರೆ ನಾವು ಇವೊತ್ತು ಯಾವ ಹಂತದಲ್ಲಿದ್ದೇವೆನ್ನುವಂಥದ್ದು ಕೂಡ ಬಹಳ ಮುಖ್ಯ ಆಗುತ್ತದೆ. ನಿರಂತರವಾಗಿ ಏನು ಭ್ರಷ್ಟಾಚಾರ ನಡೆದುಕೊಂಡು ಬಂದಿದೆ ಅದರ ಅಸಹ್ಯಕರವಾದಂಥ ಕೊನೆಯ ಹಂತಕ್ಕೆ ಇವೊತ್ತು ಮಾನ್ಯ ಯಡಿಯೂರಪ್ಪನವರ ಸರ್ಕಾರ ತಲುಪಿದೆ. ಇದರ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ. ಸರ್ಕಾರದ ಆಡಳಿತದ ಅಭಿವೃದ್ಧಿಯಲ್ಲಿ ಹಗಲು ದರೋಡೆ ಮುಗಿಲು ಮುಟ್ಟಿರುವುದನ್ನು ನಾವು ದಿನನಿತ್ಯ ಕಾಣುತ್ತಿದ್ದೇವೆ. ಅದರ ಪರಿಣಾಮದಿಂದ ಅನೇಕ ಸಚಿವರು

ರಾಜೀನಾಮೆಯನ್ನು ನೀಡುವಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ಹಾಗಿದ್ದರೆ ಇದಕ್ಕೆ ಆದ್ಯತೆ ಕೊಡಬೇಕೇ? ಬೇಡವೇ? ನೇರವಾಗಿ ಆಡಳಿತದ ಮೇಲೆ, ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಆಗುತ್ತಿದೆ..

(ಗೊಂದಲ)

**ಶ್ರೀ ಮನೋಹರ್ ಮಸ್ಕಿ:-** ಮಾನ್ಯ ಸಭಾಪತಿಯವರೆ, ಮೊನ್ನೆಯ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಇವೆಲ್ಲವನ್ನು ಹೇಳಿದ್ದೀರಿ. ಅದಕ್ಕೆ ಜನ ಉತ್ತರವನ್ನು ಕೊಟ್ಟಿದ್ದಾರೆ. ಸಾಮಾನ್ಯ ಜನ ಈ ಪ್ರಜಾಪ್ರಭುತ್ವದ ನಾಯಕರು, ಪ್ರಜಾಪ್ರಭುತ್ವದ ಧಣಿಗಳು, ಪ್ರಜಾಪ್ರಭುತ್ವದ ಅಂತಿಮ ನ್ಯಾಯಾಲಯ ನೇರವಾಗಿ ಉತ್ತರವನ್ನು ಕೊಟ್ಟಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಸುಮ್ಮನೆ ಹೇಳಬೇಡಿ ಕುರುಡು ಕಾಂಚಣ ಎಷ್ಟು ಹಾಕಿದ್ದಿರೆಂದು ಗೊತ್ತು.

(ಗೊಂದಲ)

**ಶ್ರೀ ಮನೋಹರ ಮಸ್ಕಿ:-** ಹಗಲು ದರೋಡೆ, ರಾತ್ರಿ ದರೋಡೆಗೆಲ್ಲಾ ಉತ್ತರವನ್ನು ಜನರು ನೀಡಿದ್ದಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ನಿಮ್ಮ ಕುರುಡು ಕಾಂಚಣಾ ಈ ಚುನಾವಣೆಯಲ್ಲಿ ಕಾಲಿಗೆ ಬಿದ್ದು ಅವರನ್ನೆಲ್ಲಾ ತುಳಿದಿದೆ.

(ಗೊಂದಲ)

**ಶ್ರೀ ಮನೋಹರ್ ಮಸ್ಕಿ:-** ಮಾನ್ಯ ಸಭಾಪತಿಯವರೆ, ಜನತಾ ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಳ್ಳದಿದ್ದ ಇವರು ಜನತಂತ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಜನತಾ ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಳ್ಳುವಷ್ಟು

ಪರಿಜ್ಞಾನ ಅವರಿಗೆ ಇಲ್ಲ, ಪ್ರಜಾಪ್ರಭುತ್ವದ ಬಗ್ಗೆ ಗೌರವ ತೋರುತ್ತಿಲ್ಲ. ಆದರೆ ಪ್ರಜಾತಂತ್ರದ ಬಗ್ಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಮಸ್ಕಿಯವರೆ, ಜನತಾ ನ್ಯಾಯಾಲಯ, ಮತ್ತೊಂದು ಮಗದೊಂದು ಎಂದು ಏನು ಹೇಳುತ್ತಿದ್ದೀರಿ. ಅದರ ಬಗ್ಗೆ ಮಾತನಾಡಲು ನಿಮಗೂ ಅವಕಾಶ ಸಿಗುತ್ತದೆ. ಆ ಮಾತನಾಡಿ, ನಾನು ನೀಡಿರುವ ತೀರ್ಪಿನ ಬಗ್ಗೆ ಮಾನ್ಯ ಸಚಿವರಾದ ಬಚ್ಚೇಗೌಡರು ಪುನಃ ಪ್ರಸ್ತಾಪ ಮಾಡಿದರು. ಮಾನ್ಯ ಸಚಿವರೆ, ಆ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ ಎಂದು ನಿನ್ನೆಯೇ ಕೇಳಿದ್ದರು. ಅದು ಸಾಧ್ಯವಿಲ್ಲವೆಂದು ನಾನೇ ಹೇಳಿದ್ದೇನೆ. ಆದರೆ ಮಾನ್ಯ ಸುದರ್ಶನರವರು ಪುನಃ ನನ್ನನ್ನು ಒಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಅಂತಿಮ ತೀರ್ಮಾನ ಅನ್ನತಕ್ಕಂಥದ್ದು ಬಹಳ ಅಪರೂಪ. ನನ್ನ ದೃಷ್ಟಿಯಲ್ಲಿ ಅಂತಿಮ ತೀರ್ಮಾನ ಆಗಿ ಹೋಗಿದೆ. ಅವರು ಅಂತಿಮ ಅಲ್ಲ. ಇನ್ನೊಮ್ಮೆ ಸ್ವಲ್ಪ ನೋಡಿ ಎಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ಅಭಿಪ್ರಾಯವನ್ನು, ನನ್ನ ಮೇಲೆ ಇಂಪ್ರೆಸ್ ಮಾಡತಕ್ಕಂಥ ಪ್ರಯತ್ನವನ್ನು ಮತ್ತೊಮ್ಮೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೆ ಸ್ವಲ್ಪ ಸಮಯ ಕೊಡೋಣ. ಅವರು ನನ್ನನ್ನೇನಾದರು ಇಂಪ್ರೆಸ್ ಮಾಡಿದರೆ, ನನಗೆ ಒಪ್ಪಿಸಿದರೆ ಗೊತ್ತಿಲ್ಲ. ಈಗಿರುವ ಪ್ರಕಾರ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ. ಅದು ಆಗಿಲ್ಲ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ನಂತರದಲ್ಲಿ ನನಗೆ ಸದನದ ಹಕ್ಕುಚ್ಯುತಿಯ ಬಗ್ಗೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಮಧುಸೂದನವರೆ, ಈಗ ಅವರು ಒಪ್ಪಿಕೊಂಡು ಅವರ ಸ್ಥಾನಗಳಿಗೆ ತೆರಳಿ ಪ್ರಶ್ನೋತ್ತರ ಅನ್ನು ನೋಡಿದ್ದೇನೆ. ಅಕಸ್ಮಾತ್ ಅದು ಆಗದೆಹೋದರೆ ಏನು ಮಾಡಬೇಕೆನ್ನುವುದು, ನನಗೆ ಬಿಡಿ ನಾನು ನೋಡುತ್ತೇನೆ. ನೀವು ಕಳುಹಿಸಿರುವುದು ಗೊತ್ತಿರಲಿಲ್ಲ, ಈಗ ಗೊತ್ತಾಗಿದೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ ಸ್ಥಳೀಯ ಸಂಸ್ಥೆಗಳ ಕ್ಷೇತ್ರ:** ಮಾನ್ಯ ಸಭಾಪತಿಯವರೆ, ನಾನು ಆಸಕನಾದ ಮೇಲೆ ಮೂರನೇ ಅಧಿವೇಶನ.

ಮೊದಲನೆ ಅಧಿವೇಶನದಲ್ಲಿ ನಾನು ಭಾಗವಹಿಸಿದಂಥ ಸಂದರ್ಭದಲ್ಲಿ ಇಲ್ಲಿ ನಡೆಯುತ್ತಿರುವಂಥ ನಡವಳಿಕೆಗಳನ್ನು ನೋಡಿದಾಗ ನಾನು ಕಲಿಯಬೇಕಾಗಿ ಇರುವಂಥದ್ದು ಬಹಳ ಇದೆ ಎಂದು ನನಗನಿಸಿತು. ಆದರೆ ಆ ಒಂದು ನಿರೀಕ್ಷೆ ಎರಡನೇ ಅಧಿವೇಶನದಲ್ಲಿ ಹುಸಿಯಾಯಿತು. ಇದು ಮೂರನೇ ಅಧಿವೇಶನ. ಮೂರನೇ ಅಧೀವೇಶನ ಕೂಡ ಎರಡನೇ ಅಧಿವೇಶನದ ರೀತಿಯಲ್ಲಿ ಬಲಿಯಾಗುತ್ತಿರುವುದನ್ನು ನೋಡಿ ಹೊಸದಾಗಿ ಬಂದಿರತಕ್ಕಂಥ ನನ್ನಂಥವನಿಗೆ ಬಹಳ ದುಃಖ ಆಗುತ್ತದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಪ್ರತಿ ಬಾರಿ ನಾನು ಈ ಸದನದೊಳಗಡೆ ಬಂದಾಗ ಈ ರೂಲ್ ಬುಕ್ ಅನ್ನು ಪರಿಶೀಲನೆ ಮಾಡತಕ್ಕಂಥ ಪ್ರಯತ್ನ ನಾನು ಮಾಡುತ್ತೇನೆ. 25–30 ವರ್ಷ ಒಬ್ಬ ವಕೀಲನಾಗಿ ಪ್ರ್ಯಾಕ್ಟೀಸ್ ಮಾಡಿರುವಂಥ ನಾನು ಯಾವುದೇ ವ್ಯವಹಾರ ನಡೆಯತಕ್ಕಂಥದ್ದು ಕೂಡ ಈ ರೀತಿಯಾಗಿ ಇರತಕ್ಕಂಥ ಸಂದರ್ಭದೊಳಗೆ ಇರತಕ್ಕಂಥದ್ದು ಅವು ರೂಲ್‌ಗಳ ಆಧಾರದ ಮೇಲೆ ನಡೆಯುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಎಲ್ಲಿ ರೂಲ್‌ಗಳು ಸೈಲೆಂಟ್ ಆಗಿರುತ್ತವೆ, ಅಲ್ಲಿ ಸಂಪ್ರದಾಯದ ಪ್ರಕಾರ ನಡೆಯುತ್ತವೆ ಎಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ರೂಲ್ ಪ್ರಕಾರ ಕೂಡ ಮನವಿಗಳು ತಮಗೆ ಹೇಳುತ್ತಿಲ್ಲ, ಸಂಪ್ರದಾಯದ ಪ್ರಕಾರ ಕೂಡ ಹೋಗುತ್ತಿಲ್ಲ. ತಾವು ರೂಲಿಂಗ್ ಅನ್ನು ಕೊಟ್ಟಂಥ ಸಂದರ್ಭದೊಳಗೆ ಈ ಸದನದಲ್ಲಿ ಆದಂಥ ಸಂಪ್ರದಾಯದ ಪ್ರಸ್ತಾಪವನ್ನು ತಾವು ಮಾಡಿದ್ದೀರಿ. ಹಾಗಿರುವುದರಿಂದ ರೂಲನಲ್ಲಿ ಇಲ್ಲದೆ ಇರತಕ್ಕಂಥ ಮನವಿ, ಸಂಪ್ರದಾಯದಲ್ಲಿಯೂ ಇಲ್ಲದೆ ಇರತಕ್ಕಂಥ ಮನವಿಯನ್ನು ತಾವು ದಯ ಮಾಡಿ ಅವಕಾಶವನ್ನು ಕೊಡ ಬಾರದೆಂಬ ಮನವಿಯನ್ನು ನಾನು ಮಾಡುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್:** ಮಾನ್ಯ ಸಭಾಪತಿಯವರೆ, ನಮ್ಮ ಸ್ನೇಹಿತರು ಮಾನದಂಡದ ಬಗ್ಗೆ ಮಾತನಾಡಿದ್ದಾರೆ. ನಾವು ಇವೊತ್ತು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಆಡಳಿತ ವಿಕೇಂದ್ರೀಕರಣದ ನೆನಪಾದಾಗ ನಿಜವಾಗಲೂ ಗೌರವ ಸಲ್ಲಿಸಬೇಕಾಗುತ್ತದೆ. ಇವೊತ್ತು ಅವರು ದಿವಂಗತರಾದಂತಹ ದಿನ ಕೂಡ ಇದೆ. ನಿಮಗೆ ನಿಜವಾಗಲೂ ಇಚ್ಛಾಶಕ್ತಿ ಇದ್ದರೆ ನಾನೇನು

ಹೇಳುತ್ತೇನೆಂದರೆ ಹಿಂದಿನ ಸರ್ಕಾರದಲ್ಲಿ ಒಂದು ಸಂದರ್ಭದಲ್ಲಿ ಶ್ರೀ ಅಬ್ದುಲ್ ನಜೀರಸಾಬರ ಹೆಸರಿನಲ್ಲಿ ಮೈಸೂರಿನಲ್ಲಿ ಒಂದು ಸಂಸ್ಥೆ ಪ್ರಾರಂಭವಾಗಿದೆ. ಹಾಗೆಯೇ ಬೆಳಗಾಂ ಹಾಗೂ ಗುಲ್ಬರ್ಗಾದಲ್ಲಿ ಆಡಳಿತ ವಿಕೇಂದ್ರೀಕರಣವನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡುವುದಕ್ಕೆ ನೀವು ದಯಮಾಡಿ ರಾಜೀವ್ ಗಾಂಧಿಯವರು ಮತ್ತು ರಾಮಕೃಷ್ಣ ಹೆಗಡೆಯವರ ಹೆಸರಿನಲ್ಲಿ ಸಂಸ್ಥೆಗಳನ್ನು ಪ್ರಾರಂಭ ಮಾಡಿ, ಅವರು ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ರಾಷ್ಟ್ರದಲ್ಲಿ ಆಡಳಿತ ವಿಕೇಂದ್ರೀಕರಣ ಜಾರಿಯಾಗಲಿಕ್ಕೆ, ಜನರ ಕೈಗೆ ಅಧಿಕಾರ ಹೋಗಲಿಕ್ಕೆ ಬಹಳ ಶ್ರಮವನ್ನು, ಕಾನೂನುಗಳನ್ನು, ಕಾರ್ಯಕ್ರಮಗಳನ್ನು ಅವರು ಕೊಟ್ಟಿದ್ದಾರೆ. ಮಾನದಂಡದ ಬಗ್ಗೆ ಅವರು ಹೇಳಿದ್ದಾರೆ. ಒಟ್ಟು 1005 ಜಿಲ್ಲಾ ಪಂಚಾಯ್ತಿಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಇರತಕ್ಕಂಥ ಸ್ಥಾನಗಳ ವ್ಯತ್ಯಾಸ ಕೇವಲ 78. ಇವೊತ್ತು manipulate ಮಾಡಿಕೊಂಡು ಇನ್ನೊಂದು ನಾಲ್ಕಾರು ಜಿಲ್ಲೆಗಳನ್ನು ತೆಗೆದುಕೊಳ್ಳುವುದು ರಾಜಕಾರಣವಲ್ಲ. ಅದು ನಿಜವಾದಂಥ ಜನಾದೇಶ ಆಗುವುದಿಲ್ಲ. It is a fractured verdict. ಸುಮ್ಮನೆ ಅದನ್ನೆ ಇಟ್ಟುಕೊಂಡು 12 ಜಿಲ್ಲೆಗಳು ಎಂದು ಹೇಳಿ, ಜನರು ದೊಡ್ಡು ಮೆಜಾರಿಟಿ ಕೊಟ್ಟಿದ್ದಾರೆಂದು ಜನರಿಗೆ ಅಪಮಾನ ಮಾಡುವಂಥದ್ದು ಬೇಡ. ಈಗ ನಾನು ವಿಷಯಕ್ಕೆ ಬರುತ್ತೇನೆ.

(ಗೊಂದಲ)

**ಶ್ರೀ ಅಶ್ವತ್ಥ್‌ನಾರಾಯಣ ವಿಧಾನಸಭಾ ಕ್ಷೇತ್ರ:-** ನಾವು ಸಮಾಧಾನವಾಗಿ ಗೆದ್ದಿದ್ದೇವೆ. ರಾಜ್ಯದ ಜನ ನಮ್ಮ ಪರವಾಗಿ ತೀರ್ಪು ಕೊಟ್ಟಿದ್ದಾರೆ. ನಜೀರಸಾಬ್‌ರವರು ಇದ್ದಾಗ, ರಾಮಕೃಷ್ಣ ಹೆಗಡೆಯವರು ಇದ್ದಾಗ ನಿಮ್ಮ ಎಷ್ಟು ಜನ ಶಾಸಕರಿದ್ದರು? ನೀವು ಮೊದಲು ಅದನ್ನು ತಿಳಿದುಕೊಳ್ಳಿ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:** ಮಾನ್ಯ ಸಭಾಪತಿಯವರೆ, ಒಂದು ಸರ್ಕಾರ ಮಾಡಲಿಕ್ಕೆ 113 ಸ್ಥಾನಗಳು ಬೇಕಾಗುತ್ತದೆ. ಅದರ ಅರ್ಥ 113 ಶಾಸಕರು ಸೇರಿ

ಸರ್ಕಾರ ಮಾಡಿದ ಕೂಡಲೇ ಮನಸ್ಸೋ ಇಚ್ಚೆ ಏನು ಬೇಕಾದರು ಮಾಡಬಹುದೆಂದು ಅಲ್ಲ. ದಿನನಿತ್ಯ ಆಡಳಿತದಲ್ಲಿ ಹಗಲು ದರೋಡೆ, ಭ್ರಷ್ಟಾಚಾರ ಮಾಡಬೇಕೆಂದು ವಿಧಿ-ವಿಧಾನಗಳಿವೆ. ನಿಮಗೆ ಬಹುಮತ ಇದೆ ಅಂದ ಮಾತ್ರಕ್ಕೆ ನಿಮಗೆ ಮನಸ್ಸೋ ಇಚ್ಚೆ ಹಗಲು ದರೋಡೆ ಮಾಡಲಿಕ್ಕೆ ಜನಾದೇಶ ಕೊಟ್ಟಿದ್ದಾರೆಯೇ?

(ಗೊಂದಲ)

**ಶ್ರೀ ಅಶ್ವತ್ಥ್ ನಾರಾಯಣ:** ಮಾನ್ಯ ಸಭಾಪತಿಯವರೆ ಮೂರು ದಿನದಿಂದ ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ, ಸದನದ ಸಮಯದ ಮಹತ್ವ ಅವರಿಗೆ ಗೊತ್ತಿಲ್ಲ.

(ಗೊಂದಲ)

**ಶ್ರೀ ಮನೋಹರ ಮಸ್ಕಿ:-** ಮಾನ್ಯ ಸಭಾಪತಿಯವರೆ, ಬಹುಮತದ ಬಗ್ಗೆ ಮಾತನಾಡಲಿಲ್ಲ. ನಾನು ಹೇಳಿದ್ದೇನೆಂದರೆ ಯಾವ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದಾರೋ ಇದೇ ವಿಷಯಗಳನ್ನು ಮೊನ್ನೆ ನಡೆದಂಥ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ರಾಜ್ಯದ ಜನತೆಯ ಮುಂದೆ ಪ್ರಸ್ತಾಪ ಮಾಡಲಾಯಿತು. ಜನ ಅದನ್ನು ತಿರಸ್ಕರಿಸಿ ನಮಗೆ ಬಹುಮತ ಕೊಟ್ಟರು. ಅಂದರೆ ನಿಮ್ಮ ವಿಚಾರಗಳನ್ನು ಜನರ ಮುಂದೆ ಏನು ಇಟ್ಟಿದ್ದೀರಿ ಅದು ಸರಿಯಲ್ಲ ಎಂದು ಜನತಾ ನ್ಯಾಯಾಲಯದಲ್ಲಿ ತೀರ್ಮಾನವಾಗಿದೆ ಎಂದು ಹೇಳಿದ್ದೇನೆ ಹೊರತು ಇಲ್ಲಿ ಎಷ್ಟೋ ಮಂದಿ ಶಾಸಕರು ಬಂದು ಸರ್ಕಾರ ರಚನೆಯಾಯಿತು, ಬಹುಮತ ಇದೆ ಎಂದು ಹೇಳುವ ವಿಚಾರ ಹೇಳುತ್ತಿಲ್ಲ. ವಿಚಾರವನ್ನು ತಾವು ಆ ರೀತಿ ತಿರುಚಲಿಕ್ಕೆ ಹೋಗಬಾರದು.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:** ಮಾನ್ಯ ಸಭಾಪತಿಯವರೆ, ನಾನು ಯೀಲ್ಡ್ ಆಗಲಿಲ್ಲ. ತಮ್ಮ ಅನುಮತಿ ಇಲ್ಲದೆ ನಿಲ್ಲುತ್ತಿದ್ದಾರೆ. ತಾವು ಸದನವನ್ನು ನಿಯಂತ್ರಣ ಮಾಡಬೇಕು, ತಾವು ನಮ್ಮ ವಿರೋಧ ಷ್ಪದ ರಕ್ಷಣೆಗೆ ಬರಬೇಕು.

(ಗೊಂದಲ)

**ಶ್ರೀ ಮನೋಹರ ಮಸ್ಕಿ:** ಮಾನ್ಯ ಸಭಾಪತಿಯವರೆ ಬೀದರ್‌ದಿಂದ ರಾಯಚೂರಿನ ವರೆಗೆ

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೆ, ನಾನು Yield ಆಗಲಿಲ್ಲ. ತಮ್ಮ ಅನುಮತಿ ಇಲ್ಲದೆ ನಿಲ್ಲುತ್ತಿದ್ದಾರೆ. ತಾವು ಸದನವನ್ನು ನಿಯಂತ್ರಣ ಮಾಎಬೇಕು, ತಾವು ನಮ್ಮ ವಿರೋಧ ಪಕ್ಷದ ರಕ್ಷಣೆಗೆ ಬರಬೇಕು.

(ಗೊಂದಲ)

**ಶ್ರೀ ಮನೋಹರ್ ಮಸ್ಕಿ:-** ಕಾಂಗ್ರೆಸ್ ನಾಯಕರು ಇರುವಂಥ ಎಲ್ಲಾ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋತಿದೆ.

(ಗೊಂದಲ)

**(3 ಗಂಟೆ )**

ಬೀದರ ಧರ್ಮಸಿಂಗರವರ ಕ್ಷೇತ್ರ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಅಲ್ಲಿ ಕಾಂಗ್ರೆಸ್ ಪಕ್ಷ ಸೋತಿದೆ. ಗುಲ್ಬರ್ಗಾ ಕೇಂದ್ರ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆರವರ ಕ್ಷೇತ್ರ ಅಲ್ಲಿ ಕಾಂಗ್ರೆಸ್ ಪಕ್ಷ ಸೋತಿದೆ. ಮೈಸೂರಿನಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಇದ್ದಾರೆ ಅಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷ ಸೋತಿದೆ.

(ಗೊಂದಲ)

**ಶ್ರೀ ನಾರಾಯಣಸಾ. ಬಾಂಡಗೆ ವಿಧಾನಸಭಾ ಕ್ಷೇತ್ರ:** ಮಾನ್ಯ ಸಭಾಪತಿಗಳೆ, ಈ ಸದನ ಮಾನ್ಯ ವಿ.ಆರ್. ಸುದರ್ಶನ್ ಮತ್ತು ಮಾನ್ಯ ವೈ. ಎಸ್. ವಿ ದತ್ತರವರಿಗೆ ಮಾತ್ರ ಇರುವುದಲ್ಲ. ನಮಗೂ ಕೂಡ ಇದೆ.

**ಶ್ರೀ ಮನೋಹರ್ ಮಸ್ಕಿ:** ಕಾಂಗ್ರೆಸ್ ಪಕ್ಷದವರಿಗೆ ಮಾತನಾಡುವುದಕ್ಕೆ ನೈತಿಕತೆ ಇಲ್ಲವೆಂದು ಮತ್ತೆ ಜನರು ಚುನಾವಣೆಯಲ್ಲಿ ತಿರಸ್ಕಾರ ಮಾಡಿದ್ದಾರೆ.

(ಗೊಂದಲ)

**ಸಭಾಪತಿಯವರು:** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿ. ಆರ್. ಸುದರ್ಶನ್‌ರವರು ನಾಲ್ಕು ನಿಮಿಷಗಳ ಕಾಲ ಮಾತನಾಡು ತ್ತೇನೆಂದು ಕೇಳಿದ್ದಾರೆ. ಅವರು ಏನು ಮಾತನಾಡುತ್ತಾರೆಂದು ಕೇಳೋಣ. ಆಮೇಲೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಮನೋಹರ್ ಮಸ್ಕಿ:** ಅವರು ನಮ್ಮನ್ನು ಇಂಪ್ರೆಸ್ ಮಾಡುವುದಕ್ಕೆ ಮಾತನಾಡಿದರೆ ನಮ್ಮದು ಅಭ್ಯಂತರವಿಲ್ಲ. ಮಾಡಿ ಮಾತನಾಡುತ್ತಿದ್ದಾರೆ ಅದರ ಬಗ್ಗೆ ನಮ್ಮ ಅಭ್ಯಂತರ ಅಷ್ಟೇ.

**ಶ್ರೀ ನಾರಾಯಣ.ಸಾ.ಬಾಂಡಗೆ:-** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಕೇವಲ ಮೂರುಜನ ಸದಸ್ಯರು ಮಾತ್ರ ಮಾತನಾಡುತ್ತಿದ್ದಾರೆ. ಅವರುಗಳು ಯಾವುದೇ ಹೊಸ ವಿಷಯವನ್ನು ಹೇಳದೇ, ಹೇಳಿದಂತಹ ವಿಷಯಗಳನ್ನೇ ಹೇಳುತ್ತಿದ್ದಾರೆ.

**ಶ್ರೀ ಅಶ್ವಥ್ ನಾರಾಯಣ:** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಆರ್.ಸುದರ್ಶನರವರು ಮಾತನಾಡಿದ ಮೇಲೆ ನನಗೂ ಕೂಡ ಮಾತನಾಡು ವುದಕ್ಕೆ ಒಂದು ಅವಕಾಶವನ್ನು ಕೊಡಿ.

**ಸಭಾಪತಿಯವರು:** ಮಾನ್ಯ ವಿ.ಆರ್.ಸುದರ್ಶನರವರು ಮಾತನಾಡಿ ಮುಗಿಸಿದ ನಂತರ ಅಶ್ವಥ ನಾರಾಯಣರವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಒಂದು ವಿಷಯದ ಕಡೆ ಗಮನ ಹರಿಸೋಣ. ವಿಧಾನ ಪರಿಷತ್ತು ಹಿರಿಯರ ಸದನ. ಬೆಳಿಗ್ಗೆ ಸದನ ನಡೆದಾಗ ಇಡೀ ರಾಜ್ಯಕ್ಕೇ ಮಾರ್ಗದರ್ಶನವಾಗುವಂತೆ ನಾವೆಲ್ಲರೂ ನಡೆದುಕೊಂಡು ಸಭೆಯನ್ನು ಅಷ್ಟು ಚೆನ್ನಾಗಿ ನಡೆಸಿದ್ದೇವೆ. ಸಭೆಯ ಘನತೆ ಗಾಂಭೀರ್ಯಕ್ಕೂ ಒಂದು ಲಕ್ಷಣ ರೇಖೆ ಇರುತ್ತದೆ. ಯಾವುದೇ ಸಂದರ್ಭದಲ್ಲಿ ಯಾರೇ ಅದನ್ನು ಮೀರಿದರೆ ಈ ಛೇರ್ ಅದನ್ನು ಸಹಿಸುವುದಿಲ್ಲ. ಬಹಳ serious action ಅಗಿಬಿಡಬಹುದು. ದಯಮಾಡಿ ಆಡಳಿತ ಪಕ್ಷದವರನ್ನು ಸೇರಿಕೊಂಡು, ಎಲ್ಲರನ್ನು ನಾನು ವಿನಂತಿಸಿ ಕೊಳ್ಳುತ್ತಿದ್ದೇನೆ. ಯಾರು ಕೂಡ ಸಭೆಯ ಘನತೆ ಗಾಂಭೀರ್ಯದ ಎಲ್ಲೆಯನ್ನು ಮೀರಿ ಯಾವುದೇ ರೀತಿಯ ಮಾತು, ಪ್ರದರ್ಶನವನ್ನು ದಯಮಾಡಿ ಮಾಡಬೇಡಿ. ಮಾಡಿದರೆ ಏನುಮಾಡುತ್ತೀರಾ ಎಂದರೆ, ಆ ಕೆಲಸವನ್ನು ನನ್ನ ಕೈಯಲ್ಲಿ ಮಾಡಿಸಬೇಡಿ. ಆ ರೀತಿಯಾಗಿ ಮಾಡುವುದಕ್ಕೆ ನನಗೆ ಮನಸ್ಸು ಇಲ್ಲ. ದಯವಿಟ್ಟು ತಮಗೆ ತಾವೇ ನಿಯಂತ್ರಣವನ್ನು ಹಾಕಿಕೊಂಡು ಸಭೆಯ ಗಾಂಭೀರ್ಯತೆಯನ್ನು ಎತ್ತಿ ಹಿಡಿಯುವ ಹಾಗೆ ನಮ್ಮ ಕೋಪ, ನಮ್ಮ ಅಸಹನೆ, ನಮಗೆ ಆಗಿರತಕ್ಕಂತ ನೋವು ಅಥವಾ ನಮಗೆ ಒಪ್ಪಿಗೆ ಇಲ್ಲದೇ ಇರತಕ್ಕಂಥದ್ದನ್ನು ಸದನದಲ್ಲಿ ಹೇಳುವುದಕ್ಕೆ ಖಂಡಿತ ಅವಕಾಶ ಕೊಡುತ್ತೇನೆ. ತಾವುಗಳು ಯಾವ ರೀತಿಯಾಗಿ ಅವಕಾಶ ಸಿಗುತ್ತದೆಂದು ನೋಡುತ್ತಿದ್ದೀರಾ, ಆದರೆ ಎಲ್ಲೆ ಮೀರಿ ಏನಾದರು ಮಾಡಿದರೆ don't take me as a.. ನಾನು ಅದಕ್ಕೆ ಪಾರ್ಟಿಯಾಗುವುದಿಲ್ಲ. ಅದರ ಬದಲು ನನ್ನಿಂದ ಆಡಬಾರದ ಮಾತುಗಳು ನನ್ನ ಬಾಯಿಂದ ಬರುವ ಹಾಗೆ ಕೆಲಸವನ್ನು ದಯಮಾಡಿ ಯಾರು ಮಾಡಬೇಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ದಯಮಾಡಿ ಮಾನ್ಯ ವಿ.ಆರ್.ಸುದರ್ಶನರವರೆ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ವಿ. ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ಸದನಕ್ಕೆ ಸಕಾಲದಲ್ಲಿ ಮಾರ್ಗದರ್ಶನವನ್ನು ಮಾಡಿದ್ದೀರಿ. ತಮಗೆ ಧನ್ಯವಾದಗಳು. ಸದನದ ಮಹತ್ವದ ಬಗ್ಗೆ ನಮಗೆಲ್ಲಾ ತಿಳುವಳಿಕೆಯನ್ನು ನೀಡಿದ್ದೀರಿ. ಬಹಳ ಮುಖ್ಯವಾದುದೆಂದರೆ, ಸದನದ ಘನತೆ ಮತ್ತು ಅದರ

ಮಹತ್ವವನ್ನು ನಾವೆಲ್ಲರೂ, ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆಡಳಿತ ವಿಕೇಂದ್ರೀಕರಣದ ಬಗ್ಗೆ, ಜಿಲ್ಲಾ ಪಂಚಾಯಿತಿ ಇತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯ ಬಗ್ಗೆ ಕೂಡ ಹೇಳಿದರು. ಆನರು ಏನು ತೀರ್ಪನ್ನು ಕೊಟ್ಟಿದ್ದಾರೆ ಅದನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ನಾವು ಇಲ್ಲವೆಂದು ಹೇಳುತ್ತಿಲ್ಲ. ಅದನ್ನು ಕೂಡ ನಾವು ಕ್ರೀಡಾ ಮನೋಭಾವದಿಂದ ತೆಗೆದುಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ನಮ್ಮ ಲೋಪದೋಷಗಳನ್ನು ಕೂಡ ಸರಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾದುದು ಯಾವುದೇ ಒಂದು ರಾಜಕೀಯ ಪಕ್ಷದ ಕರ್ತವ್ಯ ಮತ್ತು ಜವಾಬ್ದಾರಿಗಳು. ಅದನ್ನೂ ನಾವು ಗಮನ ಹರಿಸಬೇಕಾಗುತ್ತದೆ. ಸಾಮಾನ್ಯವಾಗಿ ಯಾವುದಾದರೂ ಒಂದು ಸ್ಥಳೀಯ ಸಂಸ್ಥೆಯ ಚುನಾವಣೆ ನಡೆದಂತಹ ಸಮಯದಲ್ಲಿ ಎಲ್ಲಾ ಕಾಲದಲ್ಲಿಯೂ ಕೂಡ ನೀವು ನೋಡಿಕೊಂಡು ಬನ್ನಿ. ಶೇಕಡ 50 ರಷ್ಟು ಚುನಾವಣೆಯ ಫಲಿತಾಂಶ ಆಡಳಿತ ಪಕ್ಷದವರ ಪರವಾಗಿ ಇರುತ್ತದೆ. ಆಡಳಿತ ಪಕ್ಷದ ಪರವಾಗಿ ಜನರ ತೀರ್ಮಾನ ಇರುತ್ತದೆ. ಆದರೆ ಮೊನ್ನೆಯ ದಿವಸ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯ ಫಲಿತಾಂಶದಲ್ಲಿ ಶೇಕಡ 50 ರಷ್ಟು ತಲುಪುವುದಕ್ಕೆ ಸಾಧ್ಯವಾಗಲಿಲ್ಲ ಎಂದರೆ, ಇದು Fractured verdict ಅಲ್ಲವೇ? ಅದನ್ನೇ ನೀವು ಹೇಳಿಕೊಂಡು...

(ಗೊಂದಲ)

ನಾನು ಮಧ್ಯದಲ್ಲಿ ಬೇರೆಯವರು ಮಾತನಾವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ...

**ಶ್ರೀ ಬಿ.ಎನ್.ಬಚ್ಚೇಗೌಡ ಕಾರ್ಮಿಕ ಸಚಿವರು:** ಮಾನ್ಯ ಸಭಾಪತಿಗಳೆ, seat sharing ನಲ್ಲಿ ನಮ್ಮ ಪಕ್ಷ 46% ತೆಗೆದುಕೊಡಿದೆ. ಕಾಂಗ್ರೆಸ್ ಪಕ್ಷದವರು 26% ತೆಗೆದುಕೊಂಡಿದ್ದಾರೆ. ಮತ್ತೆ ಜೆ.ಡಿ (ಎಸ್) ನವರು 16% ತೆಗೆದು ಕೊಂಡಿದೆ. ನೀವು ಹಿಂದೆ ಎಲ್ಲಾ ಆಡಳಿತ ಪಕ್ಷದವರು 50% ತೆಗೆದು ಕೊಂಡಿದ್ದರು ಎಂದು ಹೇಳಬೇಡಿ. ಮಾನ್ಯ ವಿ.ಆರ್.ಸುದರ್ಶನ್‌ರವರು

ಮಾತನಾಡುವ ವಿಷಯವನ್ನು ಬಿಟ್ಟು ವಿಷಯಾಂತರ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ.

**ವಿ.ಆರ್.ಸುದರ್ಶನ್**: ಮಾನ್ಯ ಸಭಾಪತಿಯವರೇ, ನಾನಾಗಿ ಮಾತನಾಡಲಿಲ್ಲ. ಆಡಳಿತ ಪಕ್ಷದವರು ಹೇಳಿದ್ದರಿಂದ ಹೇಳಿದ್ದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಚುನಾವಣೆಯ ಬಗ್ಗೆ ಅವರು ಕೋಟ್ ಮಾಡಿದರು.

**ಶ್ರೀ ಬಿ.ಎನ್.ಬಚ್ಚೇಗೌಡ:-** ಹಿಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯೊಂದರಲ್ಲಿಯೇ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿಯು ಪಕ್ಷ ಅಧಿಕಾರವನ್ನು ಹೊಂದಿತ್ತು. ಈಗ 12 ಅಷ್ಟೇ ಅಲ್ಲ 20ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. Don't mislead the House. ದಯಮಾಡಿ ಸದನಕ್ಕೆ ತಪ್ಪು ಮಾಹಿತಿಯನ್ನು ಹೇಳಬೇಡಿ. ಆಡಳಿತ ಪಕ್ಷ 50% ಕ್ಕಿಂತಲೂ ಹೆಚ್ಚು ತೆಗೆದುಕ್ಕೊಳ್ಳುತ್ತೇವೆ. ನಮಗೆ ಶಕ್ತಿ ಇದೆ.

**ಸಭಾಪತಿಯವರು:-** ನಾನು ಏನು ನಿರ್ಣಯವನ್ನು ಮಾಡಿದ್ದೇನೆ, ಆ ನಿರ್ಣಯದಲ್ಲಿ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ತಮ್ಮ ಎದುರಿಗೆ ಹೇಳಿದ್ದೇನೆ. ಇಲ್ಲ ಸಾಧ್ಯವಿದೆ ಎಂದು ತಾವು ಹೇಳಿದ್ದೀರಿ. ಅದು ಹೇಗೆ ಹೇಳುತ್ತೀರಿ ಹೇಳಿ.

**ಶ್ರೀ ವಿ.ಆರ್.ಸುದರ್ಶನ್:-** ತಾವು ಏಕೆ ಪುನರ್ ಪರಿಶೀಲನೆ ಮಾಡಬೇಕೆಂದು ಈ ಮಾತುಗಳನ್ನು ಹೇಳುವುದಕ್ಕೆ ಹೊರಟೆ. ಇವತ್ತು ನಾವು ಯಾವ ಸಂದರ್ಭದಲ್ಲಿದ್ದೇವೆ...

**ಶ್ರೀ ಬಿ.ಎನ್.ಬಚ್ಚೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ನಾನು ಅವರಿಗೆ ಅಂಕಿ-ಅಂಶಗಳನ್ನು ಕೊಡುತ್ತೇನೆ. ತಮಗೆ ಕಳುಹಿಸಿ ಕೊಡುತ್ತೇನೆ.

**ಸಭಾಪತಿಯವರು:** ಮಾನ್ಯ ಬಿ.ಎನ್. ಬಚ್ಚೇಗೌಡರೆ, ನಾನು ನಿಮಗೂ ಅವಕಾಶವನ್ನು ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ಚುನಾವಣೆಯ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದರೋ ಗೊತ್ತಾಗಲಿಲ್ಲ.

**ಶ್ರೀ ವಿ.ಆರ್.ಸುದರ್ಶನ್:** ನಾನು ಮಾಡಿದ್ದು ಅಲ್ಲ. ಆಡಳಿತ ಪಕ್ಷದವರು ಹೇಳಿದ್ದಕ್ಕೆ ನಾನು ಹೇಳಿದೆ.

**ಸಭಾಪತಿಯವರು:–** ನೀವು ಏನು ಹೇಳಬೇಕೋ ಹೇಳಿ. ಅವರ ಚುನಾವಣೆಯ ವಿಷಯವನ್ನು ಹೇಳಿಕೊಳ್ಳಲಿ. ನೀವು ಏನು ಹೇಳಬೇಕೆಂದು ಇದ್ದಿರೋ ಅದನ್ನು ಹೇಳಿ.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಯವರೇ, ನಾವು ಇವತ್ತು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಇತ್ತೀಚೆಗೆ ನಡೆದಂತಹ ಘಟನೆಗಳ ಬಗ್ಗೆಯೇ ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರುವಂಥದ್ದು. ಕಳೆದ ಅಧಿವೇಶನದಿಂದ ಇವತ್ತಿನ ಅಧಿವೇಶನದ ವರೆಗೆ ಈ ಸರ್ಕಾರ ಆಡಳಿತದಲ್ಲಿ ನಡೆದಂತಹ ಲೋಪದೋಷಗಳು, ಆಗಿರತಕ್ಕಂತಹ ಭ್ರಷ್ಟಾಚಾರದ ಪ್ರಕರಣಗಳು, ನಡೆಯುತ್ತಿರುವಂತಹ ಹಗಲು ದರೋಡೆಗಳು ಅದಕ್ಕಾಗಿ ಕೆಲವು ಸಚಿವರು ಕೊಟ್ಟಂತಹ ರಾಜೀನಾಮೆ, ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ Central Empowered Committee (CEC) ನೀಡಿರುವ ವರದಿಗಳು ಇದರ ಹಿನ್ನಲೆಯಲ್ಲಿಯೇ ಚರ್ಚೆ ಮಾಡುವುದಕ್ಕೆ, ಇದು ರಾಜ್ಯದ ಆಡಳಿತಕ್ಕೆ ನೇರವಾಗಿ ಸಂಬಂಧಪಟ್ಟಿರತಕ್ಕಂತಹ ವಿಚಾರಗಳಿವೆ. ಅದಕ್ಕೋಸ್ಕರವಾಗಿ ಈ ನಿಲುವಳಿ ಸೂಚನೆಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆದುದರಿಂದ ಪ್ರಶ್ನೋತ್ತರ ವೇಳೆಯನ್ನು ಮುಖ್ಯವಲ್ಲವೆಂದು ನಾವು ಹೇಳುತ್ತಿಲ್ಲ. ಅದೂ ಕೂಡ ಮುಖ್ಯವಾಗುತ್ತದೆ ಅಥವಾ ಯಾವುದೇ ನಿಯಮಾವಳಿಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದರೂ ಕೂಡ ಅದು ಮುಖ್ಯವಾಗುತ್ತದೆ. ಆದರೆ ನಿಲುವಳಿ ಸೂಚನೆಯನ್ನು ಯಾವ ಸಂದರ್ಭದಲ್ಲಿ ಬಳಕೆ ಮಾಡುತ್ತಿದ್ದೇವೆಂದರೆ, ಇದೊಂದು ವಿಶೇಷವಾದಂತಹ ಸಂದರ್ಭದಲ್ಲಿ ನಾವು ನಿಲುವಳಿ ಸೂಚನೆಯನ್ನು ಬಳಕೆ ಮಾಡುತ್ತಿದ್ದೇವೆಂದರೆ,

ಇದೊಂದು ವಿಶೇಷವಾಂತಹ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ಬಳಕೆ ಮಾಡುತ್ತಿದ್ದೇವೆ. ಈ ನಿಲುವಳಿ ಸೂಚನೆಯ ಮುಖಾಂತರ ಇತ್ತೀಚಿಗೆ ಬೆಳವಣಿಗೆಗಳು ಆಡಳಿತದಲ್ಲಿ ಏನಾಗಿದೆ, ಭ್ರಷ್ಟಾಚಾರಗಳು ಏನಿದೆ, ಮುಖ್ಯಮಂತ್ರಿಗಳು ಮತ್ತು ಕೆಲವು ಸಚಿವರುಗಳ ಬಗ್ಗೆ ಏನು ನೇರವಾದಂತಹ ಜವಾಬ್ದಾರಿಗಳಿವೆ ಮತ್ತು ಹಕ್ಕು ಕೂಡ ಇದೆ. ಈ ರಾಜ್ಯದ ಜನರಿಗೂ ಕೂಡ ತಿಳಿದುಕೊಳ್ಳತಕ್ಕಂತಹ ಜವಾಬ್ಧಾರಿ ಮತ್ತು ಪ್ರಶ್ನೆ ಮಾಡತಕ್ಕಂತಹ ವಿವೇಚನೆ ಪ್ರತಿಯೊಬ್ಬರಿಗೂ ಕೂಡ ಇದೆ. ಆ ಹಿನ್ನಲೆಯಲ್ಲಿ ಸದನವನ್ನು ಕರೆದಿರತಕ್ಕಂಥದ್ದು. ಅದಕ್ಕಾಗಿ ಸದನದಲ್ಲಿ ಇದಕ್ಕೆ ಆದ್ಯತೆಯನ್ನು ಕೊಡಬೇಕು. ಭ್ರಷ್ಟಾಚಾರದ ಪ್ರಕರಣಗಳನ್ನು ನಾವು ಹೇಳುವುದಕ್ಕೆ ತಾವು ಅವಕಾಶ ಕೊಡಬೇಕಾದರೆ ನಿಲುವಳಿ ಸೂಚನೆ ಇದೊಂದು best instrument ಅದಕ್ಕಾಗಿಯೇ ನಾವು ಕೇಳುತ್ತಿರುವುದು.ಇದನ್ನು ದಯಮಾಡಿ ಪುನರ್ ಪರಿಶೀಲನೆ ಮಾಡಿ. ಪ್ರಶ್ನೋತ್ತರ ವೇಳೆಯನ್ನು ಆಮೇಲೆ ಚರ್ಚೆ ಮಾಡುವುದರಿಂದ ಏನು ಆಗುವುದಿಲ್ಲ. ಅದನ್ನೂ ಕೂಡ ಚರ್ಚೆ ಮಾಡೋಣ. ಬೇರೆ ನಿಯಮಾವಳಿಗಳ ಮೇಲೆ ಬಂದಿರತಕ್ಕಂತಹ ವಿಷಯಗಳನ್ನೂ ಕೂಡ ಚರ್ಚೆ ಮಾಡೋಣ.ಇವತ್ತು ಈ ಸರ್ಕಾರಕ್ಕೆ, ಈ ಸರ್ಕಾರವನ್ನು ನಡೆಸತಕ್ಕಂತಹ ನೈತಿಕ ಹಕ್ಕನ್ನು, ಜವಾಬ್ಧಾರಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅವರ ಪಕ್ಷ ಕಳೆದುಕೊಂಡಿದೆ. ಅದಕ್ಕಾಗಿಯೇ ನಾವು ಒತ್ತಾಯ ಮಾಡುತ್ತಿದ್ದೇವೆ, ಅದನ್ನು ಹೇಳುವುದಕ್ಕೆ ನಮಗೆ ಅವಕಾಶಗಳಿರ ಬೇಕಾಗುತ್ತದೆ. ದಯಮಾಡಿ ಈ ನಿಲುವಳಿ ಸೂಚನೆಯನ್ನು ಅಂಗೀಕಾರ ಮಾಡಬೇಕು. ಚರ್ಚೆಗೆ ಅವಕಾಶವನ್ನು ಕೊಡಬೇಕು. ನಾವು ಕೂಡ ದಾಖಲೆಯನ್ನು ಆ ಸಂದರ್ಭದಲ್ಲಿ ತಮಗೆ ಮತ್ತು ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆ. ದಯಮಾಡಿ ಇಂತಹ ವಿಷಯಗಳನ್ನು suppress ಮಾಡ ತಕ್ಕಂಥದ್ದು ಈ ರಾಜ್ಯದ ಆಡಳಿತ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ನಿಜವಾಗಿಯೂ ಒಳ್ಳೆಯ ಬೆಳವಣಿಗೆಯಾಗುವುದಿಲ್ಲ. ಕರ್ನಾಟಕದ ಜನರು ನಾಚಿಕೆಪಟ್ಟುಕೊಳ್ಳತಕ್ಕಂತಹ ರೀತಿಯಲ್ಲಿ, ತಲೆತಗ್ಗಿಸತಕ್ಕಂತಹ ರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಡಳಿತ ನಡೆಯುತ್ತಿದೆ. ಇದರ

ದುಷ್ಪರಿಣಾಮಗಳು ಬರತಕ್ಕಂತಹ ಅನೇಕ ವರ್ಷಗಳು ಕಾಡುತ್ತದೆ ಎನ್ನುವುದನ್ನೂ ಕೂಡ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತುಗಳನ್ನು ಹೇಳಿ, ಮಾನ್ಯ ಸಭಾಪತಿಗಳೇ, ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ಪುನರ್‌ವಿಮರ್ಶೆ ಮಾಡಬೇಕು. ನಿಲುವಳಿ ಸೂಚನೆಯನ್ನು ಅಂಗೀಕಾರ ಮಾಡಿ, ಚರ್ಚೆಗೆ ಅವಕಾಶವನ್ನು ಮಾಡಿಕೊಡ ಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಒತ್ತಾಯವನ್ನು ಮಾಡುತ್ತಿದ್ದೇನೆ.

**ಸಭಾಪತಿಯವರು**: ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡ ಬಯಸುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ**: ಮಾನ್ಯ ಸಭಾಪತಿಗಳೆ, ಬಹಳ ವರ್ಷಗಳಿಂದ ಶಾಸನ ಸಭೆಗಳಾದಂತಹ ಮೇಲ್ಮನೆ ಮತ್ತು ಕೆಳಮನೆ ಗಳಲ್ಲಿ ನಾನು ಕೆಲಸ ಮಾಡಿದ್ದೇನೆ. 224 ಜನ ಶಾಸಕರಲ್ಲಿ ಇಬ್ಬರು ಒಳಗಡೆ ಇದ್ದಾಗ, ಒಬ್ಬನೇ ಇದ್ದಾಗಲೂ ನಾನು ಕೆಲಸ ಮಾಡಿದ್ದೇನೆ. ನನಗೆ ಗೊತ್ತಿಲ್ಲ, ಹೇಳಬೇಕು...

(ಈ ಹಂತದಲ್ಲಿ ಮಾನ್ಯ ಸುದರ್ಶನ್‌ರವರು ತಮ್ಮ ಸ್ಥಾನದಲ್ಲಿಯೇ ನಿಂತುಕೊಂಡಿದ್ದರು)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸುದರ್ಶನ್‌ರವರು ನಾನು ಮಾತನಾಡುವವರೆಗೆ ದಯಮಾಡಿ ಕುಳಿತುಕೊಳ್ಳ ಬೇಕು, ಅವರು ಕೂಡ ಈ ಸದನದ ಸಭಾಪತಿಗಳಾಗಿ ಕೆಲಸ ಮಾಡಿರು ವಂತಹವರು. ಇಲ್ಲ, ನಾನು ನಿಂತುಕೊಳ್ಳುತ್ತೇನೆ ಎನ್ನುವುದಾದರೆ ಬೇರೆ ಸದಸ್ಯರಂತೆ ಅವರು ಸಹ ಬಾವಿಯಲ್ಲಿ ಬಂದು ನಿಂತುಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಸುದರ್ಶನ್‌ರನರೇ, ತಾವು ಕುಳಿತುಕೊಳ್ಳಿ.

(ಮಾನ್ಯ ಸುದರ್ಶನ್‌ರವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

**ಶ್ರೀ ಬಿ.ಎಸ್.ಯಡಿಯೂರಪ್ಪ**: ಮಾನ್ಯ ಸಭಾಪತಿಗಳೆ, ಗೌರವಾನ್ವಿತ ಎಲ್ಲಾ ಹಿರಿಯ ಸದಸ್ಯನೇಕರಿಗೆ ಗೊತ್ತಿರುವಂತೆ ಹಿಂದೆಯೂ ಸಹ ಪ್ರಶ್ನೋತ್ತರ

ವನ್ನು ಮತ್ತು ಬೇರೆ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಆದ್ಯತೆಯ ಮೇಲೆ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎಂದು ಕೇಳಿರುವಂತಹ ಅನೇಕ ಉದಾಹರಣೆಗಳಿವೆ. ನಮ್ಮ ನಿಯಮಗಳ ಪ್ರಕಾರ ಪ್ರಶ್ನೋತ್ತರ ವೇಳೆಯ ನಂತರ ಅದನ್ನು ಪರಿಶೀಲಿಸುತ್ತೇವೆ ಎಂದು ಕೆಳಮನೆಯಲ್ಲಿ ಸಭಾಧ್ಯಕ್ಷರು ಮತ್ತು ಮೇಲ್ಮನೆಯಲ್ಲಿ ಮಾನ್ಯ ಸಭಾಪತಿಯವರು ಪದೇ ಪದೇ ಕೊಟ್ಟಂತಹ ಹತ್ತಾರು ರೂಲಿಂಗ್‌ಗಳು ನಮ್ಮ ಮುಂದಿವೆ. ಆ ರೀತಿ ರೂಲಿಂಗ್ ಕೊಟ್ಟಂತಹ ಹಿರಿಯರು ಸಹ ನಮ್ಮೆದುರಿಗಿದ್ದಾರೆ. ಕಳೆದ ಅಧಿವೇಶನ ಪ್ರಾರಂಭವಾದ ದಿವಸದಿಂದ ಇವೊತ್ತಿನವರೆಗೆ ಈ ನಾಡಿನ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎಂಬ ಕಳಕಳಿಯನ್ನು ಪ್ರತಿಪಕ್ಷದ ನಾಯಕರು ವ್ಯಕ್ತಪಡಿಸಿದರು. 60 ದಿವಸಗಳ ಕಾಲ ಅಧಿವೇಶನ ನಡೆಯಬೇಕು ಎನ್ನುವಂತಹ ಉದ್ದೇಶವಿದ್ದರೂ ಚುನಾವಣೆ ಇಂತಹ ಬೇರೆ ಬೇರೆ ಕಾರಣಗಳಿಂದಾಗಿ ಅಧಿವೇಶನವನ್ನು ನಡೆಸುವುದಕ್ಕಾಗಲಿಲ್ಲ. ಭ್ರಷ್ಟಾಚಾರದ ಆರೋಪಗಳ ಬಗ್ಗೆ ವಿಶೇಷವಾದ ಅಧಿವೇಶನ ಕರೆಯಬೇಕು ಎಂದರು. ಹಣಕಾಸಿನ ನಿರ್ವಹಣೆ ಬಗ್ಗೆ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ವಿರೋಧ ಪಕ್ಷದವರು ಒತ್ತಾಯಪಡಿಸಿದರು. ಚುನಾವಣೆ ಮುಗಿಯುತ್ತಿದ್ದಂತೆ ಫಲಿತಾಂಶಕ್ಕೂ ಕಾಯದೇ ಇದೇ 6 ನೇ ತಾರೀಖಿನಂದು ರಾಜ್ಯಪಾಲರ ಜಂಟಿ ಅಧಿವೇಶನವನ್ನು ಕರೆಯಲಾಯಿತು. ನನಗೆ ಗೊತ್ತಿರುವಂತೆ ಮಾನ್ಯ ಮೋಟಮ್ಮ ನವರು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಾಯಕಿಯಾಗಿದ್ದಾರೆ. ಮಾನ್ಯ ನಾಣಯ್ಯ ನವರು ನುರಿತ ರಾಜಕಾರಣಿಗಳು ನಮ್ಮೆಲ್ಲರಿಗೂ ಕಾನೂನಿನ ಅಡಿಯಲ್ಲಿ ಅನೇಕ ಸಂದರ್ಭಗಳಲ್ಲಿ ಸಲಹೆಗಳನ್ನು ಕೊಡುತ್ತಾರೆ. ಅವರು ಕಾನೂನಿನ ಚೌಕಟ್ಟಿನಲ್ಲಿ ಹೇಳುವಂತಹ ಮಾತುಗಳನ್ನು ಎಲ್ಲರೂ ಸರ್ವಸಮ್ಮತವಾಗಿ ಒಪ್ಪಿಕೊಂಡಂತಹ ಅನೇಕ ಉದಾಹರಣೆಗಳಿವೆ. ಅಂತಹ ಎಲ್ಲ ಹಿರಿಯರು ಈ ಮನೆಯಲ್ಲಿ ನೀವು ನಾಲ್ಕಾರು ಬಾರಿ ನಿಮ್ಮ ರೋಲಿಂಗ್‌ನ್ನು ಎತ್ತಿಹಿಡಿದು 'ಮರುಪರಿಶೀಲನೆ ಪ್ರಶ್ನೆ ಬರುವುದಿಲ್ಲ, ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ' ಎಂದು ತಾವು ಹೇಳಿದ ಮೇಲೂ ಸಹ ಅಧಿವೇಶನ ಪ್ರಾರಂಭವಾದಾಗಿನಿಂದ ಈ ನಿಮಿಷದವರೆಗೆ ಇವರು ಇದೆ ರೀತಿ ನಡೆದು

ಕೊಳ್ಳುತ್ತಿದ್ದರೆ ಅದು ಎಷ್ಟರಮಟ್ಟಿಗೆ ಸರಿಯಾಗುತ್ತದೆ? ಇಲ್ಲಿ ಯಾರು ತಪ್ಪು ತಿಳಿದುಕೊಳ್ಳದಿದ್ದರೆ ದಾಖಲೆಗೆ ಹೋಗಬೇಕೆನ್ನುವಂತಹ ದೃಷ್ಟಿಯಿಂದ ಎರಡು-ಮೂರು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಅಕ್ಟೋಬರ್ 11ನೇ ತಾರೀಖು ವಿಶೇಷವಾದ ಕಾರಣಕ್ಕಾಗಿ ಸನ್ಮಾನ್ಯ ರಾಜ್ಯಪಾಲರು ಬಹುಮತವನ್ನು ಸಾಬೀತುಪಡಿಸಬೇಕೆಂದು ಆದೇಶ ಮಾಡಿದರು. ಬಹುಮತ ಸಾಬೀತುಪಡಿಸುವಂತೆ ಸಂದರ್ಭದಲ್ಲಿ ನಡೆದಂತಹ ಗೊಂದಲಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ತಲೆ ತಗ್ಗಿಸುವಂತಹ ರೀತಿಯಲ್ಲಿ ಯಾರು ಬೇಕೋ ಎಲ್ಲಾ ನುಗ್ಗಿ, ಗಲಾಟೆಗಳಾಗಿ ಸಭಾಧ್ಯಕ್ಷರ ಮೇಲೆ ಹಲ್ಲೆ ನಡೆಸುವ ಮಟ್ಟಕ್ಕೆ ಹೋದಂತಹ ಎಲ್ಲಾ ಸಂದರ್ಭದಲ್ಲಿಯೂ ಸಹ ಅವೊತ್ತು ಬಹುಮತ ಸಾಬೀತಾಯಿತು. ಆದರೆ ಅವೊತ್ತಿನ ನಿಯಾವಳಿಗಳ ಪ್ರಕಾರ ಸಮಾಧಾನವಾಗಿಲಿಲ್ಲ ಎಂದು ಸನ್ಮಾನ್ಯ ರಾಜ್ಯಪಾಲರು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತಹ ಮಟ್ಟಕ್ಕೆ ಹೋದಂಥಹದ್ದು ಈ ನಾಡಿನ ಆರು ಕೋಟಿ ಜನತೆಗೆ ಗೊತ್ತಿದೆ. ಏಕೋ ಏನೋ ಮತ್ತೋಮ್ಮೆ ಅಕ್ಟೋಬರ್ 14 ನೇ ತಾರೀಖು ಬಹುಮತ ಸಾಬೀತುಪಡಿಸುವುದಕ್ಕೆ ನಮಗೆ ಇನ್ನೊಂದು ಅವಕಾಶ ಕೊಟ್ಟರು. ಇದರ ಮಧ್ಯೆ ನಾವು ರಾಷ್ಟ್ರಪತಿಗಳನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೆವು. ಅಷ್ಟರಲ್ಲಿ ನಮಗೆ ಬಹುಮತ ಸಾಬೀತುಪಡಿಸುವುದಕ್ಕೆ ಮತ್ತೊಂದು ಅವಕಾಶ ಸಿಕ್ಕಿದೆ ಎಂಬ ಸುದ್ಧಿ ಬಂತು. ಹೀಗಾಗಿ ನಮ್ಮ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ನಾವು ಅಲ್ಲಿಂದ ಹಿಂತಿರುಗಿ ಬಂದೆವು. ಕಳೆದ ನಾಲ್ಕೈದು ದಿವಸಗಳಿಂದ ಅಂದರೆ ಈ ಅಧಿವೇಶನ ಪ್ರಾರಂಭವಾದಾಗಿನಿಂದ, ನಾವು ವಿನಮ್ರತೆಯಿಂದ ಈ ನಾಡಿನ ಜನತೆಗೆ ತಮ್ಮ ಮೂಲಕ ಹೇಳಬಯಸುವುದೇನೆಂದರೆ, ಮಾಜಿ ಪ್ರಧಾನಿ ಯವರು ರಾಜ್ಯಪಾಲರನ್ನು ಮತ್ತು ಕಾಂಗ್ರೆಸ್‌ನ ಹಿರಿಯ ಮುಖಂಡ ರನ್ನು ನಾಲ್ಕಾರು ಬಾರಿ ಭೇಟಿ ಮಾಡಿದರು. ಮೊನ್ನೆಯ ದಿವಸ ಕೂಡ ಮಾಜಿ ಪ್ರಧಾನಿಯವರು ದೆಹಲಿಯಿಂದ ಬರುತ್ತಿದ್ದಂತೆಯೇ ಸನ್ಮಾನ್ಯ ರಾಜ್ಯಪಾಲರನ್ನು ಭೇಟಿ ಮಾಡಿದ್ದರು. ಇಲ್ಲಿ ನಮ್ಮ ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನಾವು ನಿಲುವಳಿ ಸೂಚನೆಯ ಮೂಲಕವೇ ನಾವು ಆ ವಿಷಯವನ್ನು

ಚರ್ಚೆ ಮಾಡಬೇಕು, ಬೇರೆ ಕಲಾಪಗಳಿಗೆ ನಾವು ಅವಕಾಶವನ್ನು ಕೊಡುವುದಿಲ್ಲ. ನೀವು ಸಭಾಪತಿಗಳಾದರೇನು ಯಾರಾದರೇನು? ನಿಮ್ಮ ಆದೇಶಗಳಿಗೆ ನಾವು ಬಗ್ಗುವುದಿಲ್ಲ, ನಾವು ಹೇಳಿದಂತೆಯೇ ಸದನ ನಡೆಯ ಬೇಕು ಎನ್ನುವ ಮಟ್ಟಕ್ಕೆ ಈ ಕಾರ್ಯಕಲಾಪ ನಡೆಯಿತ್ತಿರುವುದನ್ನು ನೋಡಿದರೆ ಎಲ್ಲಿಯೋ ಒಂದು ಕಡೆ ಸದನದ ಕಾರ್ಯಕಲಾಪಗಳನ್ನು ನೆಪ ಮಾಡಿಕೊಂಡು ಮುಂಖ್ಯಮಂತ್ರಿಗಳನ್ನು ಭ್ರಷ್ಟಾಚಾರ ಮಾಡಿದ್ದಾರೆ ಎನ್ನುವಂತಹ ಆಧಾರರಹಿತವಾದಂತಹ ಆರೋಪದ ಹಿನ್ನಲೆಯಲ್ಲಿ ಗೊಂದಲವನ್ನು ಉಂಟುಮಾಡಿ ಇನ್ನೊಮ್ಮೆ ರಾಷ್ಟ್ರಪತಿ ಆಡಳಿತವನ್ನು ಕರ್ನಾಟಕದಲ್ಲಿ ಹೇರುವಂತಹ ವ್ಯವಸ್ಥಿತವಾದಂತಹ ಷಡ್ಯಂತ್ರ ಅಥವಾ ಪಿತೂರಿ ಇದರ ಹಿಂದೆ ಇದೆ ಎನ್ನುವಂಥದ್ದನ್ನು ಸಾಮಾನ್ಯ ಜನತೆ ಮಾತನಾಡುತ್ತಿದ್ದಾರೆ. ಇದನ್ನು ನಾನು ಹೇಳುತ್ತಿಲ್ಲ. ನಾನು ಈಗಲೂ ಸಹ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಅಧಿವೇಶನವನ್ನು ಇನ್ನೂ ನಾಲ್ಕು ದಿನಗಳ ಕಾಲ ಹೆಚ್ಚಿಗೆ ನಡೆಸೋಣ, ಈ ನಾಡಿನ ಜನತೆಗೆ ಸತ್ಯಾಂಶಗಳು ಗೊತ್ತಾಗಬೇಕು.

ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮುಖ್ಯಮಂತ್ರಿಗಳಾಗಿ ದ್ದಂತಹ ಮಾನ್ಯ ಎಸ್ .ಎಂ. ಕೃಷ್ಣ ಅವರ ಬಗ್ಗೆ ನನಗೆ ಗೌರವವಿದೆ. ಅವರಿಗ ಕೇಂದ್ರ ಸರ್ಕಾರದಲ್ಲಿ ಬಹಳ ಉನ್ನತವಾದ ಸ್ಥಾನದಲ್ಲಿದ್ದಾರೆ. ಅವರ ಕಾಲದಲ್ಲಿಯೂ ಸಹ ಅವರ ಮೇಲೆ ನಮ್ಮ ಜೆ.ಡಿ. (ಎಸ್) ಮುಖಂಡರು Sheet Chargeನ್ನು ಮುದ್ರಿಸಿ ಹಂಚಿದರು. ಇವೊತ್ತು ನಾನು ಏನು ಹೇಳಬೇ ಕೆಂದುಕೊಂಡಿದ್ದೇನೆ ಎಂದರೆ ಈಗಾಗಲೇ ನಾನು ಈ ಬಗ್ಗೆ Judicial Enquiry ಗೆ ಆದೇಶ ಮಾಡಿದ್ದೇನೆ. ಅವೋತ್ತಿನಿಂದ ಇವೊತ್ತಿನವರೆಗೆ ನಡೆದಿರುವಂತಹ ಈ ಎಲ್ಲ ಘಟನಾವಳಿಗಳೂ Judicial Enquiry ಮೂಲಕ ಈ ನಾಡಿನ ಆರು ಕೋಟಿ ಜನತೆಗೂ ಗೊತ್ತಾಗುವಂತೆ ಸತ್ಯ ಹೊರಬರಬೇಕೆಂದು ಹೇಳಿದ್ದೇನೆ. ನನಗೆ ನೆನಪಿರುವಂತೆ ಈ ರಾಜ್ಯದ ಇತಿಹಾಸದಲ್ಲಿ ಈರೀತಿ ನನ್ನ ಅವಧಿ ಯನ್ನು ಸೇರಿಸಿ Judicial Enquiry ಆಗಬೇಕು ಎಂದು ಕೇಳಿದಂತಹ ಯಾರಾದರೂ ಮುಖ್ಯಮಂತ್ರಿಗಳಿದ್ದಾರೆ ಎಂಬುದು ನನಗೆ ನೆನಪಿಲ್ಲ, ಆ

ಕೆಲಸವನ್ನು ನಾನು ಮಾಡಿದ್ದೇನೆ. ಗಣಿಗಾರಿಕೆ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಪ್ರತಿಪಕ್ಷಗಳು ಆರೋಪ ಮಾಡಿದಂತಹ ಸಂದರ್ಭದಲ್ಲಿ ಲೋಕಾಯುಕ್ತರಿಗೆ ನಾನೇ ಸರ್ಕಾರದಿಂದ ಪತ್ರಬರೆದು ನಮ್ಮ ಆಡಳಿತದ ಅವಧಿಯೂ ಸೇರಿದಂತೆ ಈ ಗಣಿಗಾರಿಕೆ ಬಗ್ಗೆ ಎಲ್ಲ ತನಿಖೆಯಾಗಬೇಕು ಎಂದು ಅವರಿಗೆ ವಿನಂತಿ ಮಾಡಿದ್ದೇನೆ. ಇವೊತ್ತು ಸಹ ಗಣಿಗಾರಿಕೆ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಲೋಕಾಯುಕ್ತರಿಗೆ ನೀಡಬೇಕೆಂಬುವುದು ನಮ್ಮ ಅಪೇಕ್ಷೆಯಾಗಿದೆ. ಈ ವಿಷಯದಲ್ಲಿ ವಿವರವಾದ ಚರ್ಚೆಯನ್ನು ಮಾಡೋಣ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ವಿವರವಾದ ಚರ್ಚೆಗೆ ನಾನು ಸಿದ್ಧನಿದ್ದೇನೆ. ಕೆಳಮನೆ ಮತ್ತು ಮೇಲ್ಮನೆಯಲ್ಲಿ ನಾನು ಈ ಅಧಿವೇಶನದ ಪ್ರಾರಂಭದಿಂದಲೂ ಹೇಳುತ್ತಿದ್ದೇನೆ, ನಮ್ಮ ಸಭಾನಾಯಕರು ಹೇಳಿದ್ದಾರೆ, ಎಲ್ಲ ರೀತಿಯ ಚರ್ಚೆಗೆ ನಾವು ಸಿದ್ಧರಿದ್ದೇವೆ. ಆದರೆ ಸಭಾಪತಿಗಳು ರೂಲಿಂಗ್ ಕೊಟ್ಟ ಮೇಲೂ ಅದನ್ನು ಪ್ರಶ್ನೆ ಮಾಡಿಕೊಂಡು ಸುಮಾರು ನಾಲ್ಕೈದು ದಿವಸಗಳವರೆಗೆ ಕಾಲಹರಣ ಮಾಡುವಂಥದ್ದು ಈ ನಾಡಿನ ಆರು ಕೋಟಿ ಜನತೆಗೆ ಮಾಡುತ್ತಿರುವಂತಹ ದ್ರೋಹವಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ನಮಗೆ ವಿಶ್ವಾಸ ಇಲ್ಲ ಎನ್ನುವಂತಹ ಒಂದು ಸಂದೇಶವನ್ನು ರಾಜ್ಯದ ಜನತೆಗೆ ಕೊಟ್ಟಂತಾಗುತ್ತದೆ. ನಾನು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳ ಫಲಿತಾಂಶದ ಬಗ್ಗೆ ಮಾತಾನಾಡುವುದಕ್ಕೆ ಹೋಗುವುದಿಲ್ಲ. ಇರಬಹುದು, ನಾನು ವಿಧಾನಮಂಡಲದಲ್ಲಿ ಒಬ್ಬನೇ ಇದ್ದಾಗಲೂ ಸಹ ಕೆಲಸ ಮಾಡಿದ್ದೇನೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಯಾವುದೇ ಸ್ಥಾನವನ್ನು ಕೂಡ ಪಡೆಯದಿದ್ದಂತಹ ಕಾಲದಲ್ಲಿ ನಾವು ನಮ್ಮ ಸಂಘಟನೆಯನ್ನು ಕಟ್ಟುವುದಕ್ಕೆ ಪ್ರಾರಂಭಿಸಿದಂತಹ ವರು ಇವೊತ್ತು ಈ ನಾಡಿನ ಜನತೆ ನಮಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದಾರೆ. ನಮ್ಮ ಹೋರಾಟದಿಂದ, ನಮ್ಮ ಎರಡೂವರೆ ವರ್ಷಗಳ ಅಭಿವೃದ್ಧಿಕಾರ್ಯಗಳನ್ನು ನೋಡಿ ಜನ ಯಾವುದೇ ವಿಷಯದಲ್ಲಿ ತೀರ್ಮಾನ ಮಾಡುತ್ತಾರೆ. ನಾನು ಈಗಾಗಲೇ ಒಂದು ಮಾತನ್ನು ತಿಳಿಸಿದ್ದೇನೆ. ದೆಹಲಿಯ ಇವೊತ್ತಿನ ರಾಜಕೀಯ ಚಟುವಟಿಕೆಗಳನ್ನು ಗಮನಿಸಿದಾಗ ಲೋಕಸಭಾ ಚುನಾವಣೆಯಲ್ಲಿ

ಕೂಡ ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಏನೂ ಆಶ್ಚರ್ಯ ಪಡಬೇಕಾಗಿಲ್ಲ. ಆ ಸಂದರ್ಭದಲ್ಲಿ ಇನ್ನೂ ಎರಡುಕಾಲು ವರ್ಷಗಳ ಕಾಲ ಗಟ್ಟಿಯಾಗಿ ನಾವಿಲ್ಲಿ ಕುಳಿತಿರುತ್ತೇವೆ. ಲೋಕಸಭಾ ಚುನಾವಣೆಯನ್ನು ಎದುರಿಸೋಣ. ನಿಮ್ಮ ಆರೋಪಗಳನ್ನೆಲ್ಲಾ ತೆಗೆದುಕೊಂಡು ಜನತೆಯ ಮುಂದೆ ಹೋಗೋಣ. ನನ್ನ ಎರಡು ಮುಕ್ಕಾಲು ವರ್ಷಗಳ ಆಡಳಿತದಲ್ಲಿ ಏನೇನಾಗಿದೆ ಎಂಬುದರ ಬಗ್ಗೆ ಜನತೆಯನ್ನು ಕೇಳಿ. ಯಾವ ರೀತಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳ ಸಂದರ್ಭದಲ್ಲಿನ ಪ್ರತಿ ಭಾಷಣದಲ್ಲಿ ತಾವು ಹೇಳಿದ್ದೇನು? ಮಾನ್ಯ 'ಯಡಿಯೂರಪ್ಪನ ಬಿ.ಜೆ.ಪಿ. ಸರ್ಕಾರದ ಆಡಳಿತದಲ್ಲಿ ಆದಂತಹ ಹಗರಣಗಳ ಸರಮಾಲೆಯನ್ನೇ ತೆಗೆದುಕೊಂಡು ನಾವು ಜನತೆಯ ಮುಂದೆ ಹೋಗುತ್ತೇವೆ ಎಂದು ಅದರಂತೆ ತಾವು ಜನತೆಯ ಮುಂದೆ ಹೋದಿರಿ, ಜನತೆ ತಿರ್ಮಾನ ಕೊಟ್ಟರು. ಆದರೆ ಅದನ್ನು ಒಪ್ಪುವುದಕ್ಕೆ ತಾವು ಸಿದ್ಧರಿಲ್ಲ. ಇಲ್ಲಿ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಮಾನ್ಯ ಸಭಾಪತಿಯವರು ಏನು ಆದೇಶ ಕೊಟ್ಟಿದ್ದಾರೆ ಅದರಂತೆ ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳಿ, ಕಾರ್ಯಕಲಾಪವನ್ನು ನಡೆಸಿ. ಬೇರೆ ರೂಪದಲ್ಲಿ ವಿಷಯವನ್ನು ಚರ್ಚೆ ಮಾಡಿ. ಮಾನ್ಯ ನಾಣಯ್ಯನವರಿಗೂ ಗೊತ್ತಿದೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದರೆ ಈ ದೇಶದ, ಈ ರಾಜ್ಯದ ಆಗುಹೋಗುಗಳನ್ನು ಒಳಗೊಂಡಂತೆ ಜಗತ್ತಿನ ಎಲ್ಲ ವಿಷಯಗಳ ಬಗ್ಗೆಯೂ ಮಾತನಾಡುವುದಕ್ಕೆ ಇಲ್ಲಿ ಅವಕಾಶ ಸಿಗುತ್ತದೆ. ಆ ರೀತಿ ಮಾತನಾಡುವಂತಹ ಪ್ರಭಾವಿಗಳು, ಶಕ್ತಿವಂತರು ಈ ಸದನದಲ್ಲಿದ್ದಾರೆ. ಯಾರ ಬಾಯಿಯನ್ನು ನಾವು ಮುಚ್ಚಿಲ್ಲ, ಯಾರ ಕೈಯನ್ನು ಕಟ್ಟಿಲ್ಲ. ಇಷ್ಟಿದ್ದರೂ ಸಹ ಮಾನ್ಯ ಸದಸ್ಯರು ಸುಮಾರು ಕಳೆದ ನಾಲ್ಕೈದು ದಿವಸಗಳಿಂದ ಸದನ ನಡೆಯುವುದಕ್ಕೆ ಅವಕಾಶವನ್ನೇ ಕೊಡದೆ, ನಾವು ಮಾಡುವಂತಹ ಅಭಿವೃದ್ಧಿ ಕಾರ್ಯಗಳ ಬಗ್ಗೆ ಯಾವುದೇ ರೀತಿಯಲ್ಲಿ ಗಮನ ಹರಿಸುವುದಕ್ಕೆ ಇಷ್ಟಪಡದೆ ಹೋದರೆ ನಾವು ಏನು ಮಾಡುವುದಕ್ಕಾಗುತ್ತದೆ? ನಾನು ಮಾನ್ಯ ನಾಣಯ್ಯ ನವರನ್ನು ಅತ್ಯಂತ ಪ್ರಾಮಾಣಿಕವಾಗಿ ಕೇಳುತ್ತೇನೆ, ಆನಂತರ ವೈಯಕ್ತಿಕವಾಗಿ ಬೇಕಾದರೆ ಅವರೊಡನೆ ಮಾತನಾಡುತ್ತೇನೆ. ನನ್ನ ಕಾಲದಲ್ಲಿ ಗಣಿಗಾರಿಕೆ

ಅನ್ಯಾಯ ನಡೆಯಿತು ಎಂದು ಏನು ಹೇಳಲಾಗಿದೆ, ಆ ಪರವಾನಗಿಗಳಿಗೆ ನಾನು ನನ್ನ ಕಾಲದಲ್ಲಿ ಪರ್ಮೀಷನ್ ಕೊಟ್ಟಿದ್ದೇನೆಯೇ? ಈ ದೇಶದಲ್ಲಿ ಮೊದಲ ಬಾರಿಗೆ ಗಣಿಗಾರಿಕೆಯನ್ನು 'value added product' ವ್ಯಾಪ್ತಿಗೆ ತರಬೇಕೆಂದು ಹೇಳಿದವನು ನಾನು, ಕಬ್ಬಿಣದ ಅದಿರಿನ ರಫ್ತನ್ನು ರದ್ದುಪಡಿಸಬೇಕೆಂದು ಹೇಳಿದವನು ನಾನು. ಕೇಂದ್ರ ಸರ್ಕಾರ ಇದನ್ನು ಒಪ್ಪಿಕೊಂಡಿತು, High Court ಇದನ್ನು ಸಮರ್ಥನೆ ಮಾಡಿದೆ. ಇಷ್ಟಾದರೂ ಸಹ ಗಣಿಗಾರಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳುವುದಾದರೆ ಅವ್ಯವಹಾರಕ್ಕೆ ನಾನು ಹೊಣೆ ಅಲ್ಲ, ಇದಕ್ಕೆ ಯಾರು ಪರ್ಮಿಟ್ ಕೊಟ್ಟರು, ಇದು ಯಾರ ಪಾಪದ ಕೂಸು ಇದನ್ನು ನೀವು ಆತ್ಮಾವಲೋಕನ ಮಾಡಿಕೊಳ್ಳಿ. ನನಗೆ ಏತಕ್ಕೆ ಹೇಳುತ್ತಿರಿ. ಇದೆಲ್ಲದರ ಬಗ್ಗೆ ಬಿಚ್ಚುಮನಿಸ್ಸಿನಿಂದ ಅಂಕಿ–ಅಂಶಗಳ ಜೊತೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ಸದನದ ಕಾರ್ಯಕಲಾಪ ನಡೆಯುವುದಕ್ಕೆ ಬಿಡಿ. ನಂತರ ಚರ್ಚೆ ಮಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ಬೇಕಾದರೆ ಇವರ ಬಗ್ಗೆ ಮೂರು ದಿವಸ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಚರ್ಚೆ ಮಾಡಿ, ಮೂರು ದಿವಸ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಚರ್ಚೆ ಮಾಡಿ. ಶ್ರೀ ಎಸ್ .ಎಂ. ಕೃಷ್ಣರವರ ಕಾಲದಿಂದ ಇವರ ಕಾಲದವರೆಗೆ ಏನೇನು ನಡೆದಿದೆ ಎಲ್ಲಾ ದಾಖಲೆಗಳನ್ನು ಸಭೆಯ ಮುಂದೆ ಇಡುತ್ತೇನೆ. ಎರಡೂಮುಕ್ಕಾಲು ವರ್ಷದ ಅವಧಿಯಲ್ಲಿ ನಡೆದಿರುವಂತಹ ದಾಖಲೆಗಳೆಲ್ಲವನ್ನು ನೀಡುತ್ತೇನೆ, ತೀರ್ಮಾನವಾಗಲಿ. ಅದಕ್ಕಾಗಿಯೇ Judicial Enquiry ಗಾಗಿ ಆದೇಶ ಮಾಡಿರುವಂಥದ್ದು. ಲೋಕಾಯುಕ್ತರಿಗೆ ಹೆಚ್ಚು ಅಧಿಕಾರವನ್ನು ಕೊಟ್ಟಿದ್ದು ನಾನು. ಕೊಟ್ಟಂತಹ ಅಧಿಕಾರವನ್ನು ವಾಪಸ್ಸು ತೆಗೆದುಕೊಂಡಿದ್ದು ನೀವು. ಆದರೆ ಇವತ್ತು ಈ ಮನೆಯ ಮೂಲಕ ಆರು ಕೋಟಿ ಜನರ ಪರವಾಗಿ ಲೋಕಾಯುಕ್ತರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರ ಒಂದು ಪ್ರಾಮಾಣಿಕ ಪ್ರಯತ್ನದಿಂದ ಗಣಿಗಾರಿಕೆಯ ವಿಷಯ ಹೊರಗಡೆ ಬಂತು. ಕೆಲವರು ಲಕ್ಷಾಂತರ ಟನ್ ಅದಿರು ರಫ್ತಾಗಿದೆ ಯಡಿಯೂರಪ್ಪನವರೆ ಎಂದು ಹೇಳಿದರು ಹೌದು ಸ್ವಾಮಿ ಅದಕ್ಕೆ ಗಂಡೆದೆ ಬೇಕು. ಕಳೆದ ಆರೆಳು ವರ್ಷದಿಂದ ನಿಮ್ಮ ಕಾಲದಿಂದ ಹಿಡಿದು ಇವತ್ತಿನವರೆಗೆ

ಯಾವ ರೀತಿ ಗಣಿಗಾರಿಕೆ ರಫ್ತಾಯಿತು ಎಂಬುದರ ಬಗ್ಗೆ ದೇಶದ ಜನತೆ ಮುಂದೆ ಇಟ್ಟಿದ್ದು ಯಡಿಯೂರಪ್ಪ. ನೀವು ಮುಚ್ಚಿ ಇಟ್ಟಿದ್ದಿರಿ, ಆದರೆ ನಾನು ಯಾವುದನ್ನೂ ಮುಚ್ಚಿ ಇಡಲಿಲ್ಲಿ. ಬೆಂಗಳೂರಿನಿಂದ ಬಳ್ಳಾರಿಯವರೆಗೆ, ಬೆಂಗಳೂರಿನಿಂದ ಮೈಸೂರಿನವರೆಗೆ ನೀವು ಪಾದಯಾತ್ರೆ ಮಾಡಿದಿರಿ. High Court ಮತ್ತು Supreme Court ಗೆ ಹೋಗಿ ಪುನಃ ಗಣಿಗಾರಿಕೆಗೆ ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್**: ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ Yield ಆಗಲಿ.

**ಶ್ರೀ ಬಿ.ಎಸ್.ಯಡಿಯೂರಪ್ಪ**: ನಾನು Yield ಆಗುವ ಪ್ರಶ್ನೆಯೇ ಇಲ್ಲ. ನಾನು ಮಾತನಾಡುವುದಿಲ್ಲ. ಏಕೆ ಮಾತನಾಡಬೇಕು? ಯಾವ ದುರುದ್ದೇಶದಿಂದ ಈ ಸದನದ ಕಾರ್ಯಕಲಾಪ ನಡೆಯಬಾರದು, ಈ ಸರ್ಕಾರ ಮಾಡಿರುವಂತಹ ಒಳ್ಳೆಯ ಕೆಲಸಗಳು ಏನಿವೆ, ಅವುಗಳಾವವು? ಆರು ಕೋಟಿ ಜನರಿಗೆ ಗೊತ್ತಾಗಬಾರದೆಂದು ಇದೀರಾ? ಜನರಿಗೆ ನಾವು ಮಾಡಿದಂತಹ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ತಿಳಿಸುವುದಕ್ಕೆ ಬೇರೆ ಮಾರ್ಗ ಇಲ್ಲವೆ ಮೋಟಮ್ಮನವರೆ?

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮೋಟಮ್ಮನವರೆ ನಾನು ಹೇಳುತ್ತೇನೆ ಕೇಳಿ, ಯಾರ್ಯಾರು ಅವರನ್ನು ಮುಟ್ಟಿದ್ದರು, ಅವರ ಕೈ ಹಿಡಿದುಕೊಂಡರು ಅವರೆಲ್ಲರನ್ನೂ ಭಸ್ಮವಾಗುವಂತೆ ಮಾಡಿಬಿಟ್ಟರು, ಈ ರೀತಿ ಇರುವಾಗ ನೀವು ಏಕೆ ಅವರ ಮಾತನ್ನು ಕೇಳುತ್ತಿದ್ದಿರಿ?

**ಶ್ರೀ ವಿ.ಆರ್.ಸುದರ್ಶನ್**: ಮಾನ್ಯ ಸಭಾಪತಿಯವರೇ, ಮಾನ್ಯ ಲೋಕಾಯುಕ್ತರು ಕೇಳಿದಂತಹ ಅಧಿಕಾರವನ್ನು ಇವರು ಕೊಟ್ಟಿದ್ದಾರೆಯೇ?

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್**: ಈ ರೀತಿ ಇರುವಾಗ ಲೋಕಾಯುಕ್ತರಿಗೆ ಹೇಳುವಂತಹ ನೈತಿಕ ಹಕ್ಕು ಇವರಿಗಿದೆಯೇ? ಇವರಿಗೆ ಆಡಳಿತ ಮಾಡುವಂತಹ ನೈತಿಕ ಹಕ್ಕಿದೆಯೇ?

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದೇನೆ ವಿನಃ ಬೇರೆ ಏನಾದರು ಕೇಳೀದ್ದೇನೇಯೇ? ಎರಡೂವರೆ ವರ್ಷದಿಂದ ಒಂದು ದಿವಸ ವಾದರೂ ಸಹ ಅಧಿವೇಶನ ಕಾರ್ಯಕಲಾಪ ನಡೆಯುವುದಕ್ಕೆ ಬಿಟ್ಟಿದ್ದಾರೆ ಯೇ? ಒಂದಲ್ಲಾ ಒಂದ ರೀತಿ ಅಡ್ಡಿ-ಆಂತಕಗಳನ್ನು ಮಾಡಿಕೊಂಡು ಸದನದ ಬಾವಿಗೆ ಬಂದು ಧರಣಿ, ಸತ್ಯಾಗ್ರಹ ಮಾಡಿದಂಥವರು ನೀವೂ, ಚರ್ಚೆ ಮಾಡುವುದಕ್ಕೆ ನಿಮಗೆ ಇಷ್ಟವಿಲ್ಲ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆಯ ದಿಕ್ಕನ್ನು ತಪ್ಪಿಸಿ ಬೇರೆ ದಿಕ್ಕಿನಲ್ಲಿ. . . .

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಎರಡೂವರೆ ವರ್ಷದ ನಮ್ಮ ಸಾಧನೆಯನ್ನು ಇಡೀ ಜನತೆ ನೋಡುತ್ತಿದ್ದಾರೆ. ಹಣಕಾಸಿನ ನಿರ್ವಹಣೆಯಲ್ಲಿ ಇಡೀ ದೇಶದಲ್ಲಿಯೇ ನಾವು ಮೊದಲನೆ ಸ್ಥಾನದಲ್ಲಿದ್ದೇನೆ. ಇದೆಲ್ಲವೂ ತಿಳಿದಿದ್ದರೂ ಸಹ "ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿ" ಎನ್ನುವಂತೆ ನೀವು ವರ್ತನೆ ಮಾಡುವುದಾದರೆ...

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

**ಸಭಾಪತಿಯವರು:-** ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆದರೆ ಈಗಲ್ಲ. ದಯಮಾಡಿ ಗಮನಿಸಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶವನ್ನೇ ಮಾಡಿಕೊಡದೆ ಉತ್ತರ ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡುವಂಥದ್ದು ಸರಿಯಲ್ಲವೆಂದು ಹೇಳಬಯಸುತ್ತೇನೆ.

**ಸಭಾಪತಿಯವರು :-** ನಿಮ್ಮ ಮಾತಿನ ಮೇಲೆ ನಿಯಂತ್ರಣವಿರಲಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ನೀವು ವಿರೋಧ ಪಕ್ಷದ ರಕ್ಷಣೆಗೆ ಬರಬೇಕಾಗುತ್ತದೆ.

**ಸಭಾಪತಿಯವರು:-** ಖಂಡಿತ ಅವಕಾಶವನ್ನು ಕೋಡುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್:-** ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

**ಸಭಾಪತಿಯವರು:-** ನೀವು ಕೇಳಿದಂತೆ ಬಿಟ್ಟು ಬಿಡುವುದೆ ನಿಮ್ಮ ರಕ್ಷಣೆಯೇ? ಆಗುವುದಿಲ್ಲ. ಕಾನೂನಿನ ಬದ್ಧವಾಗಿ ನಾನು ಹೇಳಿದ್ದೇನೆ. ನಿಮ್ಮೆಲ್ಲರ ವಾದವನ್ನು ಕೇಳಿ ಪುನಃ ಪುನಃ ಹೇಳುತ್ತಿದ್ದೇನೆ. ನಾನೂ ಕಾನೂನಿನ ಪರವಾಗಿ, ನಾವೇ ಅನುಸರಿಸಿಕೊಂಡು ಬಂದಿರುವಂತಹ ಮಾರ್ಗದ ಪರವಾಗಿ, ನಿಯಮಾವಳಿಯ ಪರವಾಗಿ ಒಂದು ನಿರ್ಣಯವನ್ನು ಕೊಟ್ಟಿದ್ದೇನೆ. ಆ ನಿರ್ಣಯದಲ್ಲಿ ಯಾವುದು ಬದಲಾವಣೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ತಯಾರಿದ್ದೇವೆಂದು ಸರ್ಕಾರದ ಪರವಾಗಿ ಹೇಳೀದ್ದಾರೆ. ಆ ಚರ್ಚೆಗೆ ಅವಕಾಶ ಖಂಡಿತ ಕೊಡುತ್ತೇನೆ. ನಿಯಮಾವಳಿಗಳ ಪ್ರಕಾರ ಮಾಡೋಣ. ನೀವು ಕೇಳಿದಂತೆ ಅಲ್ಲ. ಕಾನೂನುಬದ್ದವಾಗಿ ಚರ್ಚೆ ನಡೆಯಬೇಕು. ಅದು ಬಿಟ್ಟು ನಾನು ಹೇಳಿದಂತೆ ನಡೆಯಬೇಕು ಎಂದು

ಹೇಳುವುದಾದರೆ ಖಂಡಿತ ದಯಮಾಡಿ ಕ್ಷಮಿಸಿ, ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಈಗ ಪ್ರಶೋತ್ತರವನ್ನು ಪ್ರಾರಂಭ ಮಾಡುವುದಕ್ಕೆ ತಾವು ಸಹಕಾರ ಕೊಡಬೇಕು.

**ಶ್ರೀಮತಿ ಮೋಟಮ್ಮ ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಯವರೇ, ಅವರು ನಾಯಕರಾಗಿ ಮಾತನಾಡಿದ ಮೇಲೆ ವಿರೋಧ ಪಕ್ಷದವರು ಅದನ್ನು ಪ್ರಶ್ನೆ ಮಾಡಬಾರದು ಎನ್ನುವುದು ಯಾವ ನ್ಯಾಯ?

**ಸಭಾಪತಿಯವರು:** ಮಾನ್ಯ ಮುಖ್ಯಮಂತ್ರಿಗಳು ಸಭಾಪತಿಯವರ ನಿರ್ಣಯವನ್ನು ಒಪ್ಪಿಕೊಳ್ಳಿ ಎಂದು ಹೇಳಿದರು. ಸ್ವಲ್ಪ ಜೋರಾಗಿ ಮಾತನಾಡಿದರು ಅಷ್ಟೆ.

(ಗೊಂದಲ)

ನೀವು ಅದನ್ನು ಒಪ್ಪುವುದಿಲ್ಲವೆಂದು ಹೇಳುವುದಾದರೆ ನಾವು ನೋಡೋಣ. ಅವರು ಸಭಾಪತಿಯವರ ನಿರ್ಣಯವನ್ನು ಒಪ್ಪಿ ಎಂದು ಹೇಳಿದರು, ಒಪ್ಪುವುದಿಲ್ಲವೆಂದು ಹೇಳುತ್ತೀರಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಎಂದು ಹೇಳಿದ ಮೇಲೆ ನಾವೆಲ್ಲರೂ ಕುಳಿತುಕೊಂಡೆವು. ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಗಂಭೀರವಾಗಿ ಕೇಳಿದೆವು. ಹತ್ತಾರು ವಿಚಾರವನ್ನು ತಂದಿದ್ದಾರೆ. ಬರೀ ನಿಲುವಳಿ ಸೂಚನೆಯನ್ನು ಬಿಟ್ಟು ನೀವು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳುವಂತಹ ಒಂದೇ ಒಂದು ಪದ ಎಲ್ಲಾದರು ಅವರು ಹೇಳಿದರೆ ಖಂಡಿತ ಮಾತನಾಡುವುದಕ್ಕೆ ಬರುತ್ತಿರಲಿಲ್ಲ. ಆದರೆ ಅದು ಬಿಟ್ಟು ನಿಲುವಳಿ ಸೂಚನೆಯನ್ನು ನೀವು ಅಂಗೀಕಾರ ಮಾಡಿ ನಾವು ಇಲ್ಲಿ ಅದಕ್ಕೆ ಮಾತುಕತೆಯಾಗುತ್ತಿರುವಂತಹ ಪರಸ್ಥಿತಿ ನಿರ್ಮಾಣ ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಪರಿಸ್ಥಿತಿಯಲ್ಲಿ ಈ ಸದನಕ್ಕೆ ಉತ್ತರ ಕೊಟ್ಟಾದಮೇಲೆ...

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲ್ಲಿಲ್ಲ. ಯಾವುದೇ ಒಂದು specific issue ಅನ್ನು ನೀವು raise ಮಾಡಿಲ್ಲ. ಅವರು ಉತ್ತರ ಕೊಟ್ಟಿಲ್ಲ.

(ಗೊಂದಲ)

**ಡಾ: ಎ.ಎಸ್.ಶಿವಯೋಗಿಸ್ವಾಮಿ ಸರ್ಕಾರದ ಮುಖ್ಯ ಸಚೇತಕರು:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ಅವರ ಮಾತಿಗೆ ನಾವು ಕ್ಲಾರಿಫಿಕೇಶನ್ ಕೇಳಬೇಕಾಗುತ್ತದೆ. ಈ ರೀತಿ ನೀವು ನಿರ್ಣಯವನ್ನು ತೆಗೆದುಕೊಳ್ಳಬಾರದು.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ರೀತಿ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104 ರ ಮೇರೆಗೆ ದಿನಾಂಕ:12–01–2011 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗಿಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೇಂದು ಕೋರಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಭೆಯ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಬ್ಯಾನರ್ ಪ್ರದರ್ಶನವನ್ನು ಮಾಡುತ್ತಿದ್ದರು)

**ಸಭಾಪತಿಯವರು:-** ಯಾರದು, ಬ್ಯಾನರಗಳನ್ನು ದಯವಿಟ್ಟು ತೆಗೆಯಿರಿ. You are making a serious breach. You ask them to remove that, please. ಇದು ಸರಿಯಲ್ಲ. ನಾನು ಮಾರ್ಷಲ್ ಅವರನ್ನು ಕರೆಯಬೇಕಾಗುತ್ತದೆ,

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಬ್ಯಾನರಗಳನ್ನು ತೆಗೆಸಿ ಎಂದು ಮಾರ್ಷಲ್‌ರವರಿಗೆ ಸೂಚಿಸಿದರು)

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಸಭಾಪತಿಯವರೇ, ಒಂದು ರಾಷ್ಟ್ರೀಯ ಪಕ್ಷದ ನಡವಳಿಕೆಯನ್ನು ರಾಜ್ಯದ ಆರು ಕೋಟಿ ಜನರು ಅವರ ಯೋಗ್ಯತೆ ಏನು ಎಂದು ನೋಡಲಿ. ಅವರು ಹಿಡಿದುಕೊಂಡು ನಿಂತಿರಲಿ ಬಿಡಿ. ಇವರ ಎಷ್ಟು ಕೆಳಮಟ್ಟಕ್ಕೆ ಇಳಿದಿದ್ದಾರೆ ಎಂಬುದನ್ನು ಈ ರಾಜ್ಯದ ಜನತೆ ನೋಡಲಿ. ನಾಚಿಕೆ ಆಗಬೇಕು.

(ಗೊಂದಲ)

**ಸಭಾಪತಿಯವರು**: ಕರ್ನಾಟಕ ರಾಜ್ಯ ದಾಖಲೆಗಳ ವಿಧೇಯಕ 2010.

(ಗೊಂದಲ)

**ಶ್ರೀ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಿಮ್ಮ ತೀರ್ಪನ್ನು ನಾವು ಒಪ್ಪುವುದಿಲ್ಲ, ದಯಮಾಡಿ ನಾವು ಈಗ ಹೊರಗಡೆ ಹೋಗುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರೆಲ್ಲರೂ ಸರ್ಕಾರದ ವಿರುದ್ದ ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)

**ಸಭಾಪತಿಯವರು:–** ಮಾನ್ಯ ಸದಸ್ಯರಲ್ಲಿ ಮನವಿ ಏನೆಂದರೆ, ನಾವು ಶಾಂತತೆಯನ್ನು ಕಾಪಾಡೋಣ. ನಮಗೆ ಸ್ವಲ್ಪ ಕರ್ತವ್ಯವಿದೆ, ಆ ಕತವ್ಯವನ್ನು ನಿರ್ವಹಿಸೋಣ. ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿದೆ.

## 5. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104 ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 12.01.2011 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿ ತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ 2011
2. ಕನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010
3. ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು ) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005
4. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ ) ವಿಧೇಯಕ, 2010
5. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2011
6. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2011
7. ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಿ (ತಿದ್ದುಪಡಿ) ವಿಧೇಯಕ, 2011

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:** ಮಾನ್ಯ ಸಭಾಪತಿಯವರೇ ತಮ್ಮ ಅನುಮತಿ ಯೊಂದಿಗೆ ವಿಧಾನಸಭೆಯಿಂದ ಅಂಗಿಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕವನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ 2011
2. ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010
3. ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005
4. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2010
5. ಕರ್ನಾಟಕ ಸರ್ಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2011
6. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2011
7. ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2011

## 7. ಶಾಸನ ರಚನೆ

## ವಿಧೇಯಕಗಳನ್ನು ಪರ್ಯಾಲೋಚಿಸುವದು ಮತ್ತು ಅಂಗೀಕರಿಸುವುದು

## ಕರ್ನಾಟಕ ಧನವಿನಿಯೋಗ ವಿಧೇಯಕ, 2011

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳು:**ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2011 ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳು:** ಮಾನ್ಯ ಸಭಾಪತಿ ಗಳೆ, ಈ ಅಂದಾಜಿನಲ್ಲಿರುವ ಒಟ್ಟು 5060 ಕೋಟಿ ರೂಪಾಯಿಗಳ ವೆಚ್ಚಕ್ಕೆ ಕೇಂದ್ರ ಸರ್ಕಾರದಿಂದ 326 ಕೋಟಿ ರೂಪಾಯಿಗಳ ಅನುದಾನವನ್ನು ನಿರೀಕ್ಷಿಸಲಾಗುತ್ತಿದೆ. ಹೊಂದಾಣಿಕೆ ಮುಖಾಂತರ ಸುಮಾರು 120 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತದೆ. ಈ ಪೂರಕ ಅಂದಾಜಿನಲ್ಲಿ ಹೊರ ಹೋಗುವಿಕೆ ಮೊತ್ತ 4614 ಕೋಟಿ ರೂಪಾಯಿಗಳು. ಈ ಮೊತ್ತವನ್ನು ಇತರೆ ಯೋಜನೆಗಳಿಂದ ಗುರುತಿಸಲಾಗಿರುವ ಉಳಿತಾಯದಿಂದ ಒದಗಿಸುವುದಕ್ಕೆ ನಾವು ಯೋಜನೆಯನ್ನು ಮಾಡಿದ್ದೇವೆ ಹಾಗೂ ಈ ಸಾಲಿನ ಯೋಜನಾ

ವೆಚ್ಚದ ಗುರಿಯನ್ನು ಮುಟ್ಟುತ್ತೇವೆ ಎನ್ನುವ ವಿಶ್ವಾಸ ನಮಗಿದೆ. ಈ ಸಾಲಿಗೆ ಲೋಕೋಪಯೋಗಿ, ಗ್ರಾಮೀಣ ರಸ್ತೆ ಮತ್ತು ಕಟ್ಟಡಗಳಿಗಾಗಿ 801 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ನೀರಾವರಿ ಪಂಪ್ಸೆಟಗಳಿಗೆ ಉಚಿತ ವಿದ್ಯುತ್ತನ್ನು ನೀಡುವ ಸಲುವಾಗಿ 700 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ವಿದ್ಯುತ್ ವಿತರಣಾ ಸಮಸ್ಯೆಗಳಿಗಾಗಿ ಈಕ್ವಿಟಿ ನೆರವಿಗಾಗಿ 500 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಬೆಂಗಳೂರು ಮೆಟ್ರೋ ಯೋಜನೆಗಳಿಗಾಗಿ 450 ಕೋಟಿ ರೂಪಾಯಿಗಳ ಸಾಲವನ್ನು ಪಡೆಯಲಾಗುವುದು. ಮಾನ್ಯ ಸಭಾಪತಿಗಳೇ, ಬೆಂಗಳೂರು ಮೆಟ್ರೋ ರೈಲಿನ ಬಗ್ಗೆ ಬಹಳ ಸಂತೋಷದಿಂದ ಒಂದು ಮಾತನ್ನು ಹೇಳಬಯಸುತ್ತೇನೆ. ಮೆಟ್ರೋ ಮೊದಲ ಹಂತ ಜನವರಿ ಕೊನೆಯ ಭಾಗದಲ್ಲಿ ಆರಂಭಿಸಲಾಗುವುದು ಎಂದು ಬೆಂಗಳೂರು ಮಹಾನಗರದ ಜನತೆಗೆ ನಮ್ಮ ಸರ್ಕಾರದಿಂದ ಒಂದು ಭರವಸೆಯನ್ನು ನೀಡಲಾಗಿತ್ತು. ಬಹುಶಃ ಈ ತಿಂಗಳ 25 ರ ಒಳಗೆ ಮೆಟ್ರೋ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡು ಅದರ ಉದ್ಘಾಟನೆ ಸಹ ಆಗುತ್ತಿದೆ. ಬೆಂಗಳೂರು ಜನತೆಗೆ ಮತ್ತು ಬೆಂಗಳೂರಿಗೆ ಬಂದು ಹೋಗತಕ್ಕ ಈ ನಾಡಿನ ಜನತೆಗೂ ಇದೊಂದು ಬಹಳ ಸಂತೋಷದ ಸಂಗತಿ. ಈ ಸಿಹಿ ಸುದ್ದಿಯನ್ನು ಇವರೆಲ್ಲರಿಗೂ ಸಹ ತಿಳಿಸಲು ನಾನು ಬಹಳ ಹರ್ಷಿಸುತ್ತೇನೆ. ಮಧ್ಯಾಹ್ನದ ಬಿಸಿಯೂಟಕ್ಕಾಗಿ 300 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಾಗಿ 200 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ನೀಡುವ ಸಲುವಾಗಿ 133 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಬೈಸಿಕಲ್ ವಿತರಣೆಯ ಬಗ್ಗೆ ಬಹಳ ನೋವಿನಿಂದ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಮೊದಲಿಗೆ ಸರಿಯಾದ ಸಮಯಕ್ಕೆ ಮಕ್ಕಳಿಗೆ ಬೈಸಿಕಲ್‌ಗಳ ವಿತರಣೆ ಆಗುತ್ತಿತ್ತು. ಆದರೆ ಈ ಮನೆಯಲ್ಲಿಯೇ ಈ ಬೈಸಿಕಲ್ ವಿತರಣೆಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ವಿಚಾರ ಪ್ರಸ್ತಾಪಗೊಂಡಿತು. ಆಗ ಮಾನ್ಯ ನಾಣಯ್ಯನವರ ಅಧ್ಯಕ್ಷತೆಯಲ್ಲಿಯೇ ಇದರ ಪರಿಶೀಲನೆಗಾಗಿ ಒಂದು ಸಮಿತಿಯನ್ನು ರಚಿಸಲಾಯಿತು.

**ಸಭಾಪತಿಯವರು:–** ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಇತಿಹಾಸ ದಲ್ಲಿಯೇ ಮೊಟ್ಟಮೊದಲ ಬಾರಿಗೆ ಒಂದು ಸದನ ಸಮಿತಿಯನ್ನು ರಚಿಸಿ ಅದಕ್ಕೆ ವಿರೋಧ ಪಕ್ಷದವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದ್ದು ಇದೇ ಮೊದಲು. ತಾವು ಆ ಕೆಲಸವನ್ನು ಮಾಡಿದ್ದೀರಿ, ಆ ಸಮಿತಿ ಈಗ ವರದಿ ಯನ್ನು ಕೂಡ ನೀಡಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:** ನನ್ನ ಅಪೇಕ್ಷೆ ಏನೆಂದರೆ ನನ್ನ ಸರ್ಕಾರದ ಯಾವುದೇ ಯೋಜನೆಗಳು ಮತ್ತು ಕಾರ್ಯಕ್ರಮಗಳು ದೊಡ್ಡ ಪ್ರಮಾಣದಲ್ಲಿ ನಡೆದಾಗ ಪ್ರತಿಪಕ್ಷದ ನಾಯಕರಿಗೆ ಈ ಪಾರದರ್ಶಕ ಬಗ್ಗೆ ತಿಳಿದಿರಬೇಕಾಗಿತ್ತು. ಮೊದಲ ಬಾರಿಗೆ ವಕೀಲರಾದಂತಹ ನಾಣಯ್ಯನವರು ಸೈಕಲ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಏಕೆಂದರೆ ಅಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಅವೆಲ್ಲ ಹೊರಬರಲಿ ಎನ್ನುವ ಉದ್ದೇಶದಿಂದಲೇ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಆದರೆ ಈ ಸಮಿತಿಯ ಒಂದೆರಡು ಸಿಟ್ಟಿಂಗ್ ಆದ ಮೇಲೆ ಇಲ್ಲಿ ಏನೂ ಅವ್ಯವಹಾರ ನಡೆದಿಲ್ಲ ಎನ್ನುವುದನ್ನು ಮನಗಂಡು ಅದನ್ನು ತಮ್ಮ ಬಾಯಿಂದ ಆ ಮಾತನ್ನು ಹೇಳಬೇಕಲ್ಲವೆಂದು ಆ ಸಮಿತಿಗೆ ಬರುವುದನ್ನೇ ಬಿಟ್ಟುಬಿಟ್ಟರು. ಆದರೆ ಆ ಸಮಿತಿ ಮುಂದುವರೆದು ಸರ್ಕಾರಕ್ಕೆ ಒಂದು ವರದಿಯನ್ನು ನೀಡಿದೆ. ಈ ಸೈಕಲ್‌ಗಳ ಬದಲಿಗೆ ಹಣ ನೀಡಿದಲ್ಲಿ ಮಕ್ಕಳಿಗೆ ಅನುಕೂಲ ಆಗುವುದಿಲ್ಲ. ಬದಲಿಗೆ ಸೈಕಲ್ ನೀಡಬೇಕೆನ್ನುವ ಬಗ್ಗೆ ಅನೇಕ ಪತ್ರಗಳು ಬಂದಿವೆ. ನಮ್ಮ ಸಚಿವ ಸಂಪುಟದ ಸಹದ್ಯೋಗಿಗಳು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುದರಿಂದ ಈಗ ಪುನಃ ಹಣದ ಬದಲಿಗೆ ಸೈಕಲ್ ನೀಡಬೇಕೆನ್ನುವ ತೀರ್ಮಾನಕ್ಕೆ ಬರಲಾಗಿದೆ. ಶಾಲಾ ಮಕ್ಕಳಿಗೆ ತುರ್ತಾಗಿ ಹಣವನ್ನು ನೀಡಬೇಕೆನ್ನುವುದು ನನ್ನ ಮನಸ್ಸಿನಲ್ಲಿತ್ತು. ಆದರೆ ಇನ್ನು ತಿಂಗಳ ಅವಧಿ ಯೊಳಗಾಗಿ ಸೈಕಲ್‌ಗಳ ವಿತರಣೆಯನ್ನು ಮಾಡಲಾಗುವುದು. ಆ ಕಾರಣದಿಂದ ಕಳೆದ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿಯಾಗಿದ್ದ 75 ಕೋಟಿ ರೂಪಾಯಿ ಗಳ ಬದಲಿಗೆ ಈ ಸಾಲಿನಲ್ಲಿ 133 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಹಾಗೆಯೇ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಗೆ ಪ್ರತಿ ಸಾಲಿಗೆ ಪ್ರತಿ ಕ್ಷೇತ್ರಕ್ಕೆ

ತಲಾ ಒಂದು ಕೋಟಿ ರೂಪಾಯಿಗಳಂತೆ ಆಯವ್ಯಯದಲ್ಲಿ ನಿಗದಿ ಮಾಡಿದ್ದ 500 ಕೋಟಿ ರೂಪಾಯಿಗಳ ಜೊತೆಗೆ ಮತ್ತೆ 100 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ನಮ್ಮ ದೇಶದ ಇತಿಹಾಸದಲ್ಲಿಯೇ ಪ್ರತಿ ಒಂದು ಲೀಟರ್ ಹಾಲಿಗೆ 2 ರೂಪಾಯಿಗಳನ್ನು ನೀಡುವ ಸಲುವಾಗಿ ಆಯವ್ಯಯದಲ್ಲಿ ನಿಗದಿಯಾಗಿದ್ದ 203 ಕೋಟಿ ರೂಪಾಯಿಗಳ ಜೊತೆಗೆ 100 ರೂಪಾಯಿಗಳನ್ನು ಒದಗಿಸಲಾಗಿದೆ. ಆಹಾರ ಸಹಾಯಧನಕ್ಕಾಗಿ 100 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ಇನ್ನು ನನ್ನ ಜೀವನದಲ್ಲಿಯೇ ನನಗೆ ಸಮಾಧಾನ ತಂದಿರತಕ್ಕ ಒಂದು ಯೋಜನೆ ಎಂದರೆ ಅದು ಭಾಗ್ಯಲಕ್ಷ್ಮಿ ಯೋಜನೆ. ಸುಮಾರು 30–40 ವರ್ಷಗಳ ಹಿಂದೆಯೇ ಈ ಯೋಜನೆ ಜಾರಿಗೆ ಬಂದಿದ್ದರೆ ಕೋಟ್ಯಾಂತರ ಜನ ಹೆಣ್ಣುಮಕ್ಕಳು ಇವತ್ತು ಒಂದು ಹೊತ್ತಿನ ಊಟಕ್ಕಾಗಿ ಕೂಲಿ ಮಾಡುವುದು ತಪ್ಪಿ, ಅವರು ಆರ್ಥಿಕವಾಗಿ ಸಬಲರಾಗುತ್ತಿದ್ದರು. ಸ್ವಾವಲಂಬಿಗಳಾಗಿ ವಿದ್ಯಾವಂತರಾಗಿದ್ದರು. ಅದು ತಪ್ಪಿ ಹೋಗಿದೆ. ಅದಕ್ಕಾಗಿಯೇ ನಾವು ಹೆಣ್ಣುಮಕ್ಕಳನ್ನು ಕರೆದು ಅವರನ್ನು ತವರಿಗೆ ಕಳುಹಿಸುವ ಮನೆಯ ಹಿರಿಯಣ್ಣನಾಗಿ ಉಡುಗೊರೆ ಕೊಡುವ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ನಡೆಸಲಾಯಿತು. ಅದಕ್ಕೆ ನಮ್ಮ ಪ್ರತಿಪಕ್ಷದ ನಾಯಕರುಗಳನ್ನು ಸಹ ಕರೆಯಲಾಗಿತ್ತು. ಆದರೆ ಅವರುಗಳು ಅದಕ್ಕೂ ಸಹ ಬರಲಿಲ್ಲ. ಸೀರೆ ನೀಡುವ ಕಾರ್ಯಕ್ರಮದ ಬಗ್ಗೆ ಮಾತನಾಡಿ ಸೀರೆಯ ವಿಚಾರದಲ್ಲೂ ಸರ್ಕಾರ ಕಮೀಷನ್ ಪಡೆದಿದೆ ಎನ್ನುವ ಆಪಾದನೆಯನ್ನು ಮಾಡಿದರು. ಆದರೆ ಅದಕ್ಕೆ ಒಂದು ಸಮಿತಿ ರಚಿಸಿ ಎಂದು ಕೇಳಿದರೆ ಅದರ ಬಗ್ಗೆ ಕೂಡ ನಾನು ಯೋಚನೆಯನ್ನು ಮಾಡಬೇಕಾಗುತ್ತದೆ. ಜನರಿಗೆ ಕೊಡುವ ಸೀರೆ ಮತ್ತು ಸೈಕಲನಲ್ಲಿ ಸರ್ಕಾರ ಕಮೀಷನ್ ಪಡೆಯುತ್ತಿದೆ ಎನ್ನುವ ಆರೋಪಗಳನ್ನು ನಮ್ಮ ಮೇಲೆ ಮಾಡುತ್ತಿದ್ದಾರೆ. ಒಬ್ಬ ಮಾಜಿ ಮುಖ್ಯಮಂತ್ರಿಗಳು ಈ ರೀತಿಯ ಹೇಳಿಕೆಗಳನ್ನು ಮಾಡಿದ್ದಲ್ಲಿ ನಾವು ಹೊರಗೆ ಹೋದಾಗ ನಮ್ಮ

ಕರ್ನಾಟಕ ಈ ಮಟ್ಟಿಗೆ ಬಂತಲ್ಲ ಎನ್ನುವ ಬಗ್ಗೆಯೇ ನಮಗೆ ದುಃಖ ಆಗುತ್ತದೆ.

ಇವತ್ತು 21ನೇ ಶತಮಾನವನ್ನು ಭಾರತೀಯರ ಶತಮಾನವೆಂದು ಎಲ್ಲರೂ ಹೇಳುತ್ತಿದ್ದಾರೆ. ಅಮೇರಿಕಾ ಅಧ್ಯಕ್ಷ ಒಬಾಮರವರು ನಮ್ಮ ದೇಶಕ್ಕೆ ಬಂದಾಗ ಈಗ ಭಾರತ ಮುಂದುವರೆಯುತ್ತಿರುವ ದೇಶವಲ್ಲ, ಮುಂದುವರೆದಿರುವ ದೇಶ ಎನ್ನವ ಹೇಳಿಕೆಯನ್ನು ನೀಡಿದ್ದಾರೆ. ಹಾಗೆಯೇ ಕರ್ನಾಟಕ ಬಂಡವಾಳ ಹೂಡಿಕೆದಾರರಿಗೆ ಬಹಳ ಉತ್ತಮವಾದ ಸ್ಥಳವೆಂದು ಅಮೇರಿಕಾ ದೇಶದ ಪ್ರತಿನಿಧಿಗಳು ಹೇಳಿದ್ದಾರೆ. ಆದರೆ ನಮ್ಮ ಪ್ರತಿಪಕ್ಷಗಳು ನಮ್ಮದು ಭ್ರಷ್ಟ ಸರ್ಕಾರ ಎಂದು ಹೇಳಿ ನಮಗಿರುವ ಈಮೇಜನ್ನು ಹಾಳು ಮಾಡಲು ಹೊರಟಿದ್ದಾರೆ. ಹಿಂದೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕಾಂಗ್ರೆಸನ್ನು ಕಿತ್ತು ಹಾಕಿದ್ದರೂ ಸಹ ಅವರೇ ಅಧಿಕಾರಕ್ಕೆ ಬಂದರು. ಯಾರು ಎಲ್ಲ ಮುಖ್ಯಮಂತ್ರಿಗಳನ್ನು ಗೋಳು ಹೊಯ್ದುಕೊಂಡು ಅಧಿಕಾರವನ್ನು ಕಿತ್ತುಕೊಂಡರೋ ಆ ಮಾಜಿ ಪ್ರಧಾನಿಗಳ ಹಿಂದೆಯೇ ಇವತ್ತು ಕಾಂಗ್ರೆಸನವರು ಹೋಗಿದ್ದಾರೆ. ಅದಕ್ಕೆ ನನ್ನದೇನೂ ವಿರೋಧವಿಲ್ಲ. ಅದು ಅವರಿಗೆ ಬಿಟ್ಟ ವಿಚಾರ. ಆದರೆ ಇವತ್ತು ನಮ್ಮ ಆಡಳಿತ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ನಮ್ಮ ಆಡಳಿತಾವಧಿ ಎರಡೂಕಾಲು ವರ್ಷದಲ್ಲಿ ಒಂದು ದಿವಸವಾದರೂ ನೆಮ್ಮದಿಯಿಂದ ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ಎರಡು ಸದನಗಳಲ್ಲೂ ಸಹ ಸರಿಯಾದ ರೀತಿಯಲ್ಲಿ ಕಲಾಪವನ್ನು ನಡೆಸುವುದಕ್ಕೆ ಬಿಡಲಿಲ್ಲ. ಇವತ್ತಿಗೂ ಸಹ ಈ ಬಗ್ಗೆ ಚರ್ಚೆ ಮಾಡೋಣ ಎಂದು ಮಾನ್ಯ ನಾಣಯ್ಯನವರನ್ನು ಕರೆದೆವು. ಇಲ್ಲಿ ಮುಚ್ಚಿಡುವ ವಿಚಾರಗಳ್ಯಾವವು ಇಲ್ಲ. ಯಾರೋ ಒಬ್ಬರು ಅಪರಾಧಿ ಎಂದಲ್ಲಿ ನಾವು ಅಪರಾಧಿಗಳಾಗುವುದಿಲ್ಲ. ಅವರು ರಾಜೀನಾಮೆಯನ್ನು ಕೇಳಿದ ತಕ್ಷಣ ನಾವು ರಾಜೀನಾಮೆ ಕೊಡುವ ಪ್ರಶ್ನೆ ಬರುವುದಿಲ್ಲ. ಇನ್ನು ಎರಡೂ ಕಾಲು ವರ್ಷ ಕಳೆದ ಮೇಲೆ ನಾವು ಸರ್ಕಾರವನ್ನು ವಿಸರ್ಜಿಸಿ ನಮ್ಮ ಮಾಲೀಕರಾದ ಜನರ ಮುಂದೆ ನಾವು ಹೋಗುತ್ತೇವೆ. ಚುನಾವಣೆಯಲ್ಲಿ ನಮಗೆ ಜನರು ಯಾರು ಆಡಳಿತ ನಡೆಸಬೇಕು ಎನ್ನುವುದನ್ನು ಹೇಳುತ್ತಾರೆ. ಈ ಮಧ್ಯದಲ್ಲಿಯೇ ಲೋಕಸಭೆ

ಚುನಾವಣೆ ಬಂದಲ್ಲಿ ಯಾರ್‍ಯಾರ ಯೋಗ್ಯತೆಗಳೇನು, ಯಾರ ಸಾಧನೆಗಳೇನು ಎನ್ನುವುದು ಆಗ ಎಲ್ಲರಿಗೂ ತಿಳಿಯುತ್ತದೆ.

ಹೀಗಾಗಿ ನನಗೆ ಅತ್ಯಂತ ಮೆಚ್ಚುಗೆಯಾದ ಭಾಗ್ಯಲಕ್ಷ್ಮಿ ಯೋಜನೆಗಾಗಿ 100 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ. ಈ ಸಂದರ್ಭದಲ್ಲಿ ಈ ರಾಜ್ಯದ ಹಣಕಾಸಿನ ಬಗ್ಗೆ ಒಂದು ಮಾತನ್ನು ಹೇಳಲೇಬೇಕಾಗುತ್ತದೆ.ಈಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಉತ್ತಮವಾಗಿದೆ. ಹಣಕಾಸಿನ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಅಧಿಕಾರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಸಕ್ತ ಸಾಲಿನ ಮೊದಲ 9 ತಿಂಗಳ ಅವಧಿಯಲ್ಲಿ 27,124 ಕೋಟಿ ರೂಪಾಯಿಗಳ ತೆರಿಗೆಯನ್ನು ಸಂಗ್ರಹ ಮಾಡಿದ್ದೇವೆ. ಕಳೆದ ಸಾಲಿನಲ್ಲಿ ಇದೇ ಅವಧಿಯಲ್ಲಿ 20,978 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಯಿತ್ತು. ಇದನ್ನು ಹೋಲಿಕೆ ಮಾಡಿ ನೋಡಿದಾಗ ಶೇಕಡ 29 ರಷ್ಟು ಬೆಳವಣಿಗೆ ಆಗಿದೆ. 31,050 ಕೋಟಿ ರೂಪಾಯಿಗಳ ಯೋಜನಾ ಗಾತ್ರವನ್ನು ನಾವು ನಿಶ್ಚಿತವಾಗಿ ಮುಟ್ಟುತ್ತೇವೆ ಎನ್ನುವ ನಿರೀಕ್ಷೆಯಲ್ಲಿ ನಾವಿದ್ದೇವೆ. ಈ ದಿಶೆಯಲ್ಲಿ ನಮ್ಮ ಹಣಕಾಸಿನ ಸ್ಥಿತಿಗತಿ ಉತ್ತಮವಾಗಿರುವ ಸಂದರ್ಭದಲ್ಲಿ ನಾವು ಅನಗತ್ಯವಾಗಿ ಯಾವುದಕ್ಕೂ ಹಣವನ್ನು ತೆಗೆದು ಇಟ್ಟಿಲ್ಲ. ಆದ್ದರಿಂದ ಈ ಪೂರಕ ಅಂದಾಜನ್ನು ಸದನದ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:** ಪ್ರಸ್ತಾವ ಏನೆಂದರೆ, "2011ರ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2 ಮತ್ತು 3

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ".

**ಪ್ರಸ್ತಾವ ಅಂಗಿಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾಪ ಏನೆಂದರೆ, "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು., ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಗಳು:** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2011ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿ "2011ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಲ್ಪಟ್ಟಿತು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**8. ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸಲು ಪ್ರಸ್ತಾಪ**

**ಶ್ರೀ ಬಿ.ಎನ್.ಬಚ್ಚೇಗೌಡ ಕಾರ್ಮಿಕರ ಸಚಿವರು:–** ಮಾನ್ಯ ಸಭಾಪತಿಗಳೆ, "ಹೊರರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸದನಕ್ಕೆ ಸಲ್ಲಿಸಲು ದಿನಾಂಕ:30–4–2011 ವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪವನ್ನು ಮಂಡಿಸುತ್ತೇನೆ"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಹೊರರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸದನಕ್ಕೆ ಸಲ್ಲಿಸಲು ದಿನಾಂಕ:30–4–2011ವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪವನ್ನು ಮಂಡಿಸಲಾಯಿತು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಹಾಗೂ ಕಾಲಾವಕಾಶ ವಿಸ್ತರಣೆಗೆ ಒಪ್ಪಿಗೆ ನೀಡಲಾಯಿತು)

## 9. ಶಾಸನ ರಚನೆ : ವಿಧೇಯಕ ಮಂಡನೆ

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2011 ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಬಿ.ಶ್ರೀರಾಮುಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು:–** ಮಾನ್ಯ ಸಭಾಪತಿಗಳೆ, 2011 ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "2011ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾಪ ಅಂಗೀಕರಿಸಲ್ಪತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಬಿ.ಶ್ರೀರಾಮುಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು:–** ಮಾನ್ಯ ಸಭಾಪತಿಗಳೆ, "2011ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ಅನುಮತಿ ಮಂಡಿಸತ್ತೇನೆ.

**ಸಭಾಪತಿಯವರು:–** ವಿಧೇಯಕ ಮಂಡಿಸಲಾಗಿದೆ.

## ಪ್ರಶ್ನೋತ್ತರಗಳ ಮಂಡನೆ

**(i) ದಿನಾಂಕ:11.1.2011 ರ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು**

**ಶ್ರೀ ಬಸವರಾಜ ಬೊಮ್ಮಾಯಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು:–** ಮಾನ್ಯಸಭಾಪತಿಗಳೆ, ದಿನಾಂಕ:11–1–2011 ರ ಸಮೂಹ ಎರಡರ

ಸದನದಲ್ಲಿ ಉತ್ತರಿಸುವ ಒಟ್ಟು 6 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

**(ii) ದಿನಾಂಕ:11.1.2011 ರ ಚುಕ್ಕೆರಹಿತ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು.**

**ಶ್ರೀ ಬಸವರಾಜ ಬೊಮ್ಮಾಯಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು:–** ಮಾನ್ಯ ಸಭಾಪತಿಗಳೆ, ದಿನಾಂಕ:11–1–2011 ರ ಸಮೂಹ ಎರಡರ ಸದನದಲ್ಲಿ ಉತ್ತರಿಸುವ ಒಟ್ಟು 6 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

**ರಾಜ್ಯದಲ್ಲಿ ರೈತರ ಆತ್ಮಹತ್ಯೆ**

**39; ಶ್ರೀ ಖಾಜಿ ಅರಶದ ಅಲಿ ವಿ.ಸ.ಕ್ಷೇತ್ರ**

**ಅ)** ಕರ್ನಾಟಕ ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ನಡೆದಿರುವ ರೈತರ ಆತ್ಮಹತ್ಯೆ ಸಂಖ್ಯೆ ಎಷ್ಟು? (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)

**ಆ)** ರೈತರ ಆತ್ಮಹತ್ಯೆ ಘಟನೆಗಳನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಈವರೆಗೂ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)?

**ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು)**

**ಅ)** 2003–04 ರಿಂದ 2010–11 (31–12–2010 ರವರೆಗೆ) ರಾಜ್ಯದಲ್ಲಿ 2597 ರೈತರ ಆತ್ಮಹತ್ಯೆ ಪ್ರಕರಣಗಳು ವರದಿ ಯಾಗಿರುತ್ತದೆ. ವರ್ಷವಾರು ಮತ್ತು ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

**ಆ)** ರೈತರ ಆತ್ಮಹತ್ಯೆ ಘಟನೆಗಳನ್ನು ತಡೆಗಟ್ಟಲು ಕೃಷಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.

1. ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ಹಾಗೂ ಇತರ ಕೃಷಿ ಪರಿಕರಗಳನ್ನು ವಿತರಿಸಲಾಗುತ್ತಿದೆ.

2. ಪವರ್ ಟಿಲ್ಲರ್ ಮತ್ತು ಹೈಟೆಕ್ ಕೃಷಿ ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.
3. ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ ನೀಡಲಾಗುತ್ತಿದೆ.
4. ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಬಗ್ಗೆ ಪ್ರೋತ್ಸಾಹಿಸಲಾಗುತ್ತಿದೆ.
5. ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.
6. ಕೀಟನಾಶಕ, ಪೀಡೆ ನಾಶಕಗಳು ಹಾಗು ಸಿಂಪರಣಾ ಯಂತ್ರಗಳನ್ನು ರಿಯಾಯಿತಿ ದರದ ಒದಗಿಸಲಾಗುತ್ತಿದೆ.
7. ಎಣ್ಣೆ ಕಾಳು, ದ್ವಿದಳ ಧಾನ್ಯ, ಹತ್ತಿ ಬೆಳೆಗಳಿಗೂ ಸಹ ರಿಯಾಯಿತಿ ದರದಲ್ಲಿ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.
8. 2009–10 ನೇ ಸಾಲಿನಿಂದ ಶೇ.3 ರ ಬಡ್ಡಿದರದಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳನ್ನು ಕೃಷಿ ಸಾಲ ನೀಡುವ ಯೋಜನೆ ಜಾರಿಯಲ್ಲಿದೆ.

## ಅನುಬಂಧ

## 2003–04 ರಿಂದ 2010–11 ನೇ ಸಾಲಿನ 31.12.2010 ರವರೆಗೆ ವರ್ಷವಾರು ಮತ್ತು ಜಿಲ್ಲಾವಾರು ರೈತರ ಆತ್ಮಹತ್ಯೆ ಪ್ರಕರಣಗಳ ವಿವರಗಳು

| ಕ್ರ. ಸಂ. | ಜಿಲ್ಲೆಗಳು | 2003–04 | 2004–05 | 2005–06 | 2006–07 | 2007–08 | 2008–09 | 2009–10 | 2010–11 (upto 31–12–2010) | ಒಟ್ಟು |
|---|---|---|---|---|---|---|---|---|---|---|
| 1 | ಬಾಗಲಕೋಟೆ | 24 | 6 | 3 | 7 | 7 | 13 | 5 | | 65 |
| 2 | ಬೆಂಗಳೂರು (ಗ್ರಾ) | 30 | 6 | 7 | 6 | 0 | 1 | 0 | | 50 |
| 3 | ಬೆಂಗಳೂರು ನಗರ | 2 | 0 | 0 | 0 | 0 | 0 | 0 | | 2 |
| 4 | ಬೀದರ್ | 32 | 7 | 9 | 29 | 32 | 29 | 38 | 20 | 196 |
| 5 | ಹಾಸನ | 69 | 37 | 26 | 19 | 28 | 47 | 26 | 16 | 268 |
| 6 | ಚಾಮರಾಜನಗರ | 10 | 2 | 2 | 1 | 3 | 0 | 0 | | 18 |
| 7 | ಹಾವೇರಿ | 38 | 9 | 2 | 14 | 11 | 5 | 20 | 9 | 108 |
| 8 | ಉ.ಕನ್ನಡ | 7 | 0 | 7 | 10 | 6 | 6 | 11 | 3 | 50 |
| 9 | ಧಾರವಾಡ | 31 | 9 | 2 | 4 | 13 | 9 | 7 | 5 | 80 |
| 10 | ಕೊಪ್ಪಳ | 20 | 15 | 11 | 23 | 9 | 6 | 4 | 4 | 92 |
| 11 | ಮಂಡ್ಯ | 46 | 11 | 0 | 8 | 17 | 14 | 8 | | 104 |
| 12 | ಚಿಕ್ಕಮಗಳೂರು | 24 | 22 | 4 | 27 | 35 | 31 | 16 | 27 | 186 |

| | | | | | | | | | | |
|---|---|---|---|---|---|---|---|---|---|---|
| 13 | ರಾಯಚೂರು | 5 | 3 | 2 | 10 | 2 | 4 | 5 | 1 | 32 |
| 14 | ತುಮಕೂರು | 41 | 11 | 6 | 22 | 13 | 12 | 13 | 4 | 122 |
| 15 | ಶಿವಮೊಗ್ಗ | 50 | 12 | 8 | 30 | 20 | 14 | 16 | 6 | 156 |
| 16 | ಕೋಲಾರ | 18 | 10 | 3 | 3 | 1 | 1 | 1 | 2 | 39 |
| 17 | ಮೈಸೂರು | 18 | 1 | 0 | 4 | 7 | 8 | 1 | 1 | 40 |
| 18 | ಉಡುಪಿ | 3 | 1 | 0 | 0 | 1 | 0 | 0 | | 5 |
| 19 | ಕೊಡಗು | 12 | 12 | 13 | 13 | 11 | 8 | 9 | | 85 |
| 20 | ಬೆಳಗಾಂ | 41 | 33 | 13 | 24 | 22 | 24 | 25 | 9 | 191 |
| 21 | ದಾವಣಗೆರೆ | 39 | 12 | 5 | 13 | 9 | 12 | 14 | 8 | 112 |
| 22 | ಬಳ್ಳಾರಿ | 31 | 11 | 5 | 10 | 13 | 7 | 12 | 2 | 91 |
| 23 | ಚಿತ್ರದುರ್ಗ | 55 | 19 | 12 | 19 | 24 | 18 | 20 | | 167 |
| 24 | ಗುಲ್ಬರ್ಗ | 18 | 6 | 7 | 14 | 20 | 35 | 8 | 1 | 109 |
| 25 | ಬಿಜಾಪುರ | 22 | 9 | 9 | 17 | 21 | 18 | 19 | 9 | 124 |
| 26 | ದ.ಕನ್ನಡ | 9 | 5 | 4 | 4 | 5 | 3 | 3 | 2 | 35 |
| 27 | ಗದಗ್ | 13 | 2 | 3 | 15 | 11 | 7 | 6 | 4 | 61 |
| 28 | ರಾಮನಗರ | 0 | 0 | 0 | 0 | 0 | 5 | 1 | | 6 |
| 29 | ಚಿಕ್ಕಬಳ್ಳಾಪುರ | 0 | 0 | 0 | 0 | 1 | 0 | 2 | | 3 |
| 30 | ಯಾದಗಿರಿ | 0 | 0 | 0 | 0 | 0 | 0 | 0 | | |
| | **ಒಟ್ಟು** | **708** | **271** | **163** | **346** | **342** | **337** | **290** | **140** | **2597** |

## ಔರಾದ್–ಸದಾಶಿವಗಡ ರಸ್ತೆ ದುರಸ್ತಿ ಬಗ್ಗೆ

**40; ಮಾನ್ಯ ಶ್ರೀ ಖಾಜಿ ಅರಶದ ಅಲಿ ವಿಧಾನಸಭೆಯಿಂದ ಚುನಾಯಿತರಾದವರು**

ಅ) ಔರಾದದಿಂದ ಸದಾಶಿವಗಡಕ್ಕೆ ಹೋಗುವ ರಾಜ್ಯ ಹೆದ್ದಾರಿ ಸಂಖ್ಯೆ 34 ರಡಿ ಬೀದರ ಜಿಲ್ಲೆಯಲ್ಲಿ ಬರುವ ರಸ್ತೆ ತೀರ ಹದಗೆಟ್ಟಿದ್ದು, ವಾಹನ ಸಂಚಾರಕ್ಕೆ ದುಸ್ತರವಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ರಸ್ತೆ ಸುಧಾರಣೆಗಾಗಿ ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ C.M.ಉದಾಸಿ ಮಾನ್ಯ ಲೋಕೋಪಯೋಗಿ ಸಚಿವರು**

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ಔರಾದದಿಂದ ಸದಾಶಿವಗಡಕ್ಕೆ ಹೋಗುವ ರಾಜ್ಯ ಹೆದ್ದಾರಿ ಸಂಖ್ಯೆ 34ರಡಿ ರಸ್ತೆಯು ಬೀದರ ಜಿಲ್ಲೆಯಲ್ಲಿ ಒಟ್ಟು 138.62 ಕಿಮೀ ಉದ್ದವಿದ್ದು, ಔರಾದ್, ಭಾಲ್ಕಿ. ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಹಾಯ್ದು ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಬರುವ ಈ ರಸ್ತೆ ಸುಧಾರಣೆಗಾಗಿ 2010–11 ನೇ ಸಾಲಿನ ವಿವಿಧ ಯೋಜನೆಗಳಡಿ ಈ ಕೆಳಗೆ ವಿವರಿಸುವಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಲೆಕ್ಕ ಶೀರ್ಷಿಕೆ: ರಾಜ್ಯ ಹೆದ್ದಾರಿ ನವೀಕರಣ:**

1) ಔರಾದ ತಾಲೂಕಿನ ರಸ್ತೆ ಕಿಮೀ 250 ರಿಂದ 14.30 ರವರೆಗೆ ಆಯ್ದ ಭಾಗಗಳಲ್ಲಿ ₹50.00 ಲಕ್ಷ ಮೊತ್ತದಲ್ಲಿ ಡಾಂಬರೀಕರಣ ಕೆಲಸ ಕೈಗೂಳ್ಳಲಾಗುತ್ತಿದೆ.

2) ಭಾಲ್ಕಿ ತಾಲ್ಲೂಕಿನ ರಸ್ತೆ ಕಿಮೀ 66.00–72.90 ರವರೆಗೆ ₹ 86.00 ಲಕ್ಷ ಮೊತ್ತದಲ್ಲಿ ಡಾಂಬರೀಕರಣ ಕೆಲಸ ಮಾಡಲಾಗುತ್ತಿದೆ.

**ಲೆಕ್ಕ ಶೀರ್ಷಿಕೆ: ಡಾ: ನಂಜುಂಡಪ್ಪ ವರದಿ ಯೋಜನೆ:**

1) ಭಾಲ್ಕಿ ತಾಲ್ಲೂಕಿನ ರಸ್ತೆ ಕಿಮೀ 22.00 ರಿಂದ 25.60 ರವರೆಗೆ ₹ 47.50 ಲಕ್ಷ ಮೊತ್ತದಲ್ಲಿ ರಸ್ತೆ ಬಲಪಡಿಸಿ ಸುಧಾರಣೆ ಮಾಡಲಾಗುತ್ತಿದೆ.

**ಲೆಕ್ಕ ಶೀರ್ಷಿಕೆ: 5054–ಇತರೆ ರಸ್ತೆ ನಿರ್ಮಾಣ:**

1) ಭಾಲ್ಕಿ ತಾಲ್ಲೂಕಿನ ಕಿಮೀ 25.60 ರಿಂದ 29.00 ರವರೆಗೆ ₹ 122.50 ಲಕ್ಷ ಮೊತ್ತದಲ್ಲಿ ರಸ್ತೆ ಬಲಪಡಿಸಿ ಸುಧಾರಣೆ ಮಾಡಲಾಗುತ್ತಿದೆ.

2) ಭಾಲ್ಕಿ ಮತ್ತು ಬಸವಕಲ್ಯಾಣ ತಾಲ್ಲೂಕಿನ ರಸ್ತೆ ಕಿಮೀ 72.96 ರಿಂದ 85.00 ರವರೆಗೆ ₹ 30.00 ಲಕ್ಷ ಮೊತ್ತದಲ್ಲಿ ರಸ್ತೆ ಬಲಪಡಿಸಿ ಸುಧಾರಣೆ ಮಾಡಲಾಗುತ್ತಿದೆ.

**ಲೆಕ್ಕ ಶೀರ್ಷಿಕೆ: ಸುವರ್ಣ ರಸ್ತೆ ವಿಕಾಸ ಯೋಜನೆ:**

1) ಭಾಲ್ಕಿ ತಾಲ್ಲೂಕಿನ ರಸ್ತೆ ಕಿಮೀ 29.00 ರಿಂದ 31.60 ರವರೆಗೆ ₹ 78.12 ಲಕ್ಷ ಮೊತ್ತದಲ್ಲಿ ರಸ್ತೆ ಬಲಪಡಿಸಿ ಸುಧಾರಣೆ ಮಾಡಲಾಗುತ್ತಿದೆ.

2) ಬಸವಕಲ್ಯಾಣ ತಾಲ್ಲೂಕಿನ ರಸ್ತೆ ಕಿಮೀ 110.00 ರಿಂದ 116.00 ರವರೆಗೆ ₹ 78.12 ಲಕ್ಷ ಮೊತ್ತದೊಂದಿಗೆ ರಸ್ತೆ ಬಲಪಡಿಸಿ ಸುಧಾರಣೆ ಮಾಡಲಾಗುತ್ತಿದೆ.

ಈ ರಸ್ತೆಯ ಒಟ್ಟು 138.62 ಕಿಮೀ ಉದ್ದದ ಪೈಕಿ 103.52 ಕಿಮೀ ಉದ್ದದ ರಸ್ತೆಯು ವಾಹನ ಸಂಚಾರಕ್ಕೆ ಸುಗಮವಾಗಿದ್ದು, ಅಲ್ಲಲ್ಲಿ ತಗ್ಗುಗುಂಡಿಗಳು ಬಿದ್ದರುತ್ತವೆ. ಉಳಿದ 35.10 ಕಿಮೀ ಉದ್ದದ ರಸ್ತೆಯನ್ನು ಈ ಮೇಲೆ ವಿವರಿಸಲಾದ ವಿವಿಧ ಲೆಕ್ಕ ಶೀರ್ಷಿಕೆಯಡಿ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 103.52 ಕಿಮೀ ರಸ್ತೆಯ ಉದ್ದದಲ್ಲಿ ಅವಶ್ಯಕತೆಗನುಗುಣವಾಗಿ ವಾರ್ಷಿಕ ನಿರ್ವಹಣೆಯಡಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೊಂಡು ಸದರಿ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

**ಬೀದರ್ ಜಿಲ್ಲೆಯಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳು**

**42; ಶ್ರೀ ಖಾಜಿ ಅರಶದ ಅಲಿ ವಿಧಾನ ಸಭೆಯಿಂದ ಚುನಾಯಿತರಾದವರು**

**ಅ)** ಕೇಂದ್ರ ಪ್ರಾಯೋಜಿತ ವಿವಿಧ ಯೋಜನೆ ಗಳನ್ವಯ ಬೀದರ್ ಜಿಲ್ಲೆಯಲ್ಲಿ ನಿರ್ಮಾಣ ಮತ್ತು ಮೇಲ್ದರ್ಜೆಗೇರಿಸುವ ಕುರಿತು ತೆಗೆದುಕೊಂಡ ರಸ್ತೆಗಳಾವುವು? ಮತ್ತು ಈ ರಸ್ತೆಗಳ ಕಾಮಗಾರಿಗಳ ಹಂತ ಯಾವುದು; (ವರ್ಷವಾರು, ರಸ್ತೆವಾರು ವಿವರ ನೀಡುವುದು).

**ಆ)** ಕೇಂದ್ರ ಪ್ರಾಯೋಜಿತ ಅಂತರ ರಾಜ್ಯ ಸಂಪರ್ಕ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯ ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ; (ರಸ್ತೆವಾರು ವಿವರಣೆ ನೀಡುವುದು).

**ಅ)** ಬೀದರ್ ಜಿಲ್ಲೆಯಲ್ಲಿ ಕೇಂದ್ರ ಪಾಯೋಜಿತ ವಿವಿಧ ಯೋಜನೆಗಳ ಅನ್ವಯ ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

**ಆ)** ಪ್ರಸ್ತುತ ಸಾಲಿನಲ್ಲಿ ಅಂತರರಾಜ್ಯ ಸಂಪರ್ಕ ಯೋಜನೆಯಡಿ ಸುಧಾರಣಾ ಕಾಮಗಾರಿ ಬಗ್ಗೆ ಕೈಗೊಳ್ಳಲು ಉದ್ದೇಶಿಸಿರುವ ಪ್ರಸ್ತಾವನೆ ಗಳಲ್ಲಿ ಬೀದರ್ ಜಿಲ್ಲೆಯ ಯಾವುದೇ ರಸ್ತೆಗಳು ಸೇರಿರುವುದಿಲ್ಲ.

# ANNEXURE- 1

DETAILS OF WORKS TAKENUP IN BIDAR DISTRICT UNDER ECONOMIC IMPORTANC
E INTER STATE CONNECTVITY AND CENTRAL ROAD FUND
FROM 2000-01 TO 2010-11 (to end of DECEMBER 2010)

| Year of sanction | Name of work | Estd cost (Rs in lakhs) | Status |
|---|---|---|---|
| **ECONOMIC IMPORTANCE** | | | |
| 2006-07 | Improvements to Zahirabad- Nanded road (Kamalangara to Gunahalli, sh- 4) 0.00 to 15.00 in Bidar District. | 1901.00 | Work completed |
| **INTER STATE CONNECTIVITY** | | | |
| 2007-08 | Improvements to Zahirabad- Nanded road (Kamalangar to Gunahalli, sH-4) 15.00 to 25.00n Bidar District. | 1242.00 | Work completed |
| | Improvements to Zahirabad- Nanded road (Kamalangar to Gunahalli, sH-4) 15.00 to 30.00n Bidar District. | 689.00 | Work completed |

| CENTRAL ROAD FUND | | | |
|---|---|---|---|
| 2000-01 | Improvements to selected reaches from Hokarna village to Maharashtra border in Chikali village (Aurad Ttaluk) (Length 6.40 kms) | 74.52 | Work completed |
| 2000-01 | Improvements to Chitaguppa to Bhemalakhed road from km o to km 28 via udabal Nirna Basilapur, Vittapur in Humnabad Taluk | 98.73 | Work completed |
| 2000-01 | Improvements to road from Belkoini cross to Nittor k via Raskshal in Aurad Taluk in Bidar Dist: (Length 6.20km) | 80.43 | Work completed |
| 2000-01 | Improvements to s lected reaches of road from Mustari to Changlera via Mustariwad, Muttangi from km 4/0 to 12.100 in Humnabad Taluk) Length 8.10 km) | 89.6 | Work completed |
| 2000-01 | Improvements to selected reaches of road form Handi kere cross to Maharashtra border to Sirur village (length 4.00 km) | 75.17 | Work completed |
| 2000-01 | Improvements of selected reaches from Ekamba village to Maharashtr Border in Borathi village | 74.52 | Work completed |

| | | | |
|---|---|---|---|
| 2002-03 | Imporvements & Wideninge to SH Road from Hulsoor-Basavakalayana-Mudabi-Mahagao Cross SH. 11(Basavalayana Bus station to NH.9) (selected-reaches) | 100 | Work completed |
| 2002-03 | Impments to MDR Road form Bidar-Chillargi Road 10 kms | 60 | Work completed |
| 2002-03 | Improvements to NH to Nirna, Basanthapur 04.00 to 12.00km | 50 | Work completed |
| 2002-03 | Improvements of Badar to Manalli road | 50 | Work completed |
| 2002-03 | IImprovments of Madkatti Cross to Basavakalyan road via Gorta Muchalam (MDR from km.5.00 to 10.00 in Bhalki Tq Hulsur Constituency) | 100 | Work completed |
| 2003-04 | Improvemnts of Ahamedbad Nittur Road from km .21 to 25 (Aurad Ahmadabad road km .20.00 to 30.5), in Bidar Dist. (5kms) | 50 | Work completed |
| 2003-04 | Improvements to Halabarga to Bhalki from 0.00 to 12 kms, in Bidar Dis (12kms) | 70 | Work completed |
| 2003-04 | Improvements to Road Bhalki to Madkatti MDR, in Bidar Dist. (12kms) | 80 | Work completed |
| 2003-04 | Improvements to Humnabad Road to Dadagi Cross via jalsingi-Dubalgundi katak Chincholi Cross. | 150 | Work completed |

| | | | |
|---|---|---|---|
| | Yenkur, Bardapur Cross, karab khelgi Cross (Humanabad Bhalki Road) (18kms | | |
| 2003-04 | Improvements to kattihugano Cross to Handikera via Chelakapura-Chitta-katak-Chincholi-Sultanabadwadi-Handikera (25kms) | 250 | Work completed |
| 2003-04 | Improvements to Khanapur-to Halburga Via Dhannur from km.0.00 to 8.00, in Bidar Dist | 50 | Work completed |
| 2003-04 | Improvements to Gadagi to Chillargi Via Chimmakod Road from km.0.00 to 11.00 in Bidar Dist | 60 | Work completed |
| 2003-04 | Improvements of Road from Bhalki to Lakkanagao Via Barhambara in Bhalki Tq-in Bidar Dist | 80 | Work completed |
| 2004-05 | Improvements to road from Dhannur cross to Gorthahalli km 16.20 to 24.00 (aurad Sadashivaghada State Highway 34) in selected reachers. | 60 | Work completed |
| 2004-05 | Improvements to Bhalki to Dadgi cross road km 0.00 to 8.00in selected reaches. | 65 | Work completed |
| 2005-06 | Improvements to road Bhemelkheda to Karanahalli (humnabad tq Bida Dist,-upto Andra Pradesh Border from km.4.00 to 14.40 (Bidar Constituencv) | 50 | Work completed |

| | | | |
|---|---|---|---|
| 2005-06 | Improvements to road from Vanamarnapalli to Raichur (SH-15) from km.61.00 to80.60,(kadavada Bridage to Humnabad –chicholi Border) or Humnabad tq in Bidar dist. (Humnabad Constiuency | 50 | Work completed |
| 2006-07 | Improvements to MDR from Bidar to Chambal from km.0.00 to 10.00 of Bider dist (Bidar constituency) | 100 | Work completed |
| 2006-07 | Imporvements to from Udabal to Hallikhed (B) from km .5.00 to 23.00 of Humnabad Tq in Bidar dist. (Humnabad constituency) | 100 | Work completed |
| 2006-07 | Imporvements to MDR from Tar road from Dongaon (Maqta) Cross to Muriki (Maharashtra Border) Via- DongaMn (M) and Bhkgtamodi of 4,00kms with three CDsin Aurad Tq of Bidar dis | 55 | Work completed |
| 2006-07 | Imporvements to MDR from Murki(Maharastra Border) Via Chimegaon, Malegoan in 11.00kms in Aurad Tq of Bidar dist | 45 | Work completed |
| 2006-07 | Improvements to Zahirabad –Nanded road SH4 in Karnataka from Kamalanagra to Gonalli- from km 43.00 to 69.20 of Bidar dist | 400 | Work completed |

| | | | |
|---|---|---|---|
| 2006-07 | Improvements to Zahirabad –Nanded road SH4 in Karnataka from Kamalanagra to Gonalli- from km30.00 to 36.60 of Bidar dist | 365 | Work completed |
| 2006-07 | Improvements to Zahirabad –Nanded road SH4 in Karnataka from Kamalanagra to Gonalli- from km 36.60 to 43.00 | 385 | Work completed |
| 2006-07 | Improvements to MDR from Ghatboral grama to Maniknagar in Bidar dis (Hulsoor Constituency) | 100 | Work completed |
| 2008-09 | Improvements to MDR from Darewadi (Donganawadi) Via Shivaji Circle, Belkoni Corss, primary Health center, Dongaon bus stand, and Darewadi in Aurad tq, Bidar district | 170 | 6CDs completed.Gr-II matalling is in progress. |
| 2008-09 | Impts: to road from Maharastra Border to Murki Aurad Handarki road (s) 122) from km .62.40 to 76.40 | 200 | Work completed |
| 2008-09 | Improvements of road km.28.00 to 29.00 S.H-100 of Maharashtra Border to Murki-Aurad-Handarki Aurad tq. In Bidar District | 120 | Work completed |
| 2008-09 | Improvements of road km.92.00 to 105.40 S.H.-34 of Aurad-Sadashivgad, Basava Kalvana tq. In Bidar District | 130 | Work is in progress. |

## ಮಂಡ್ಯ ಜಿಲ್ಲೆಯಲ್ಲಿ P W D ಇಲಾಖೆಯಿಂದ LOC ಬಿಡುಗಡೆ ಬಗ್ಗೆ

## 37; ಶ್ರೀ ಮರಿತಿಬ್ಬೇಗೌಡ ಶಿಕ್ಷಕರ ಕ್ಷೇತ್ರ

ಅ) ಮಂಡ್ಯ ವಿಭಾಗದಲ್ಲಿ ಕಳೆದ ಎರಡು ವರ್ಷಗಳಲ್ಲಿ ಯಾವ ಲೆಕ್ಕ ಶೀರ್ಷಿಕೆಗಳಲ್ಲಿ ಎಷ್ಟು, ಕಾಮಗಾರಿಗಳ ಸಂಬಂಧ ಎಷ್ಟು, ಮೊತ್ತದ ಎಲ್.ಓ.ಸಿ ಹಣವನ್ನು ಬಿಡುಗಡೆ ಮಾಡಲಾಗಿದೆ (ವಿವರ ಒದಗಿಸುವುದು)

ಆ) ಪ್ರಸಕ್ತ ಸಮಯದಲ್ಲಿ ಯಾವ ಲೆಕ್ಕ ಶೀರ್ಷಿಕೆಗಳಲ್ಲಿ ಎಷ್ಟು ಕಾಮಗಾರಿ ಗಳಿಗೆ ಹಣ ಬಿಡುಗಡೆ ಸಂಬಂಭ ಜೇಷ್ಠತೆ ಪಟ್ಟಿ, ತಯಾರಿಸಲಾಗಿದೆ (ವಿವರ ಒದಗಿಸುವುದು)

ಇ) ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವಾಗ ಎಷ್ಟು, ಪ್ರಕರಣಗಳಲ್ಲಿ ಯಾವ ಲೆಕ್ಕ ಶೀರ್ಷಿಕೆಗಳಲ್ಲಿ ಎಷ್ಟು ಮೊತ್ತದ ಹಣವನ್ನು ಜೇಷ್ಠತೆ ಉಲ್ಲಂಘಿಸಿ ಪಾವತಿಸಲಾಗಿದೆ: (ವಿವರ ಒದಗಿಸುವುದು)

ಈ) ಜೇಷ್ಠತೆ ಉಲ್ಲಂಘನೆಗೆ ಕಾರಣಗಳೇನು? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು)

## ಶ್ರೀ C. M. ಉದಾಸಿ ಲೋಕೋಪಯೋಗಿ ಸಚಿವರು

ಅ) ಮಂಡ್ಯ ವಿಭಾಗದಲ್ಲಿ ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆಯಾದ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಪ್ರತಿ ಮಾಹೆಯ ಅಂತ್ಯದಲ್ಲಿ ಉಳಿಕೆ ಬಿಲ್ಲುಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ಜೇಷ್ಠತಾ ಪಟ್ಟಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ಅನುಬಂಧದಲ್ಲಿರುವಂತೆ ವಿವಿಧ ಲೆಕ್ಕ ಶೀರ್ಷಿಕೆಯಡಿ 2009–10 ನೇ ಸಾಲಿಗೆ ಒಟ್ಟು ₹ 9763.10 ಲಕ್ಷಗಳು ಹಾಗೂ 2010–11 ನೇ

ಸಾಲಿನಲ್ಲಿ ಡಿಸೆಂಬರ್ 2010ರ ಅಂತ್ಯದವರೆಗೆ ಒಟ್ಟು ₹ 7744.81 ಲಕ್ಷಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾದ ಹಣದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕಾಮಗಾರಿಗಳಿಗೆ, ಸಂಚಾರ ಗಣತಿ ಸಮೀಕ್ಷೆ ಕಾಮಗಾರಿಗಳಿಗೆ ಹಾಗೂ ನಿರ್ವಹಣೆ ಕಾಮಗಾರಿಗಳಿಗೆ ಅದರಂತೆ ಕಲವು ಮುಖ್ಯರಸ್ತೆಗಳನ್ನು ಸುಸ್ಥಿತಿಯಲ್ಲಿಡುವ ಉದ್ದೇಶದಿಂದ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಮತ್ತು ರಸ್ತೆ ನಿರ್ವಹಣೆ ಕಾಮಗಾರಿ ಗಳಿಗೆ, ಟಿ. ನರಸೀಪುರ ತಾಲ್ಲೂಕಿನಲ್ಲಿ ನಡೆದ ತಲಕಾಡು ಪಂಚಲಿಂಗ ದರ್ಶನದ ಮಹೋತ್ಸವದ ಸಂಬಂಧ ತುರ್ತು ಕಾಮಗಾರಿಗಳಿಗೆ ಹಣ ಪಾವತಿಸಲಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆಗಳನ್ನು ಸುಸ್ಥಿತಿ ಯಲ್ಲಿಡುವ ಉದ್ದೇಶದಿಂದ ಕೆಲವು ಸನ್ನಿವೇಶಗಳಲ್ಲಿ ಗುತ್ತಿಗೆದಾರ ರ ಆರ್ಥಿಕ ಸಂಕಷ್ಟಗಳನ್ನು ಅಂದರೆ ಗುತ್ತಿಗೆದಾರರ ಆಶ್ರಿತರ ವೈದ್ಯಕೀಯ ಚಿಕಿತ್ಸೆ, ಮದುವೆ ಇತರ ತುರ್ತುಪರಿಸ್ಥಿತಿ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳನ್ನು ಮಾನವೀಯ ದೃಷ್ಟಿಯಿಂದ ಗಣನೆಗೆ ತೆಗೆದು ಕೊಂಡು ಹಾಗೂ ಕಾಮಗಾರಿಯ ಸ್ಥಿತಿಗತಿಯನ್ನಾಧರಿಸಿ, ಕಾಮಗಾರಿ ಗಳ ಪ್ರಗತಿಯನುಸಾರ ಮತ್ತು ನೈಸರ್ಗಿಕ ವಿಕೋಪಗಳಿಂದು ಉಂಟಾಗುವ ತೊಂದರೆಗಳನ್ನು ಗಣನೆಗೆ ತೆಗೆದುಕೊಂಡು ಹಂತ ಹಂತವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಸಂದರ್ಭಗಳನ್ನು ಹೊರತುಪಡಿಸಿ ಉಳಿದೆಲ್ಲ ಸಮಯದಲ್ಲೂ ಪ್ರತಿ ಮಾಹೆಯಲ್ಲೂ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗುವ ಹಣವನ್ನು ಗುತ್ತಿಗೆದಾರರುಗಳಿಗೆ ವಿಭಾಗಾವಾರು ಬಾಕಿ ಬಿಲ್ಲುಗಳ ಜೇಷ್ಠತೆಯನ್ನಾಧರಿಸಿ ಹಣ ಪಾವತಿಮಾಡಲು ಕ್ರಮಕೈಗೊಳ್ಳಲಾಗಿದೆ. ಆದ್ದರಿಂದ ಜೇಷ್ಠತೆ ಉಲ್ಲಂಘನೆಯಾಗಿರುವುದಿಲ್ಲ.

**ಈ)** ಈ ಪ್ರಶ್ನೆ ಉದ್ಭವಿಸುವುದಿಲ್ಲ.

## 11. ಹಕ್ಕುಚ್ಯುತಿ ಪ್ರಸ್ತಾವದ ಮಂಡನೆಗೆ ಅನುಮತಿ ಕೋರಿ ಚರ್ಚೆ, ಲೋಕಸಭಾ ಸದಸ್ಯರಾದ ಮಾನ್ಯ ಎಚ್. ಡಿ. ಕುಮಾರಸ್ವಾಮಿಯವರು ಸದನದ ಕಲಾಪ ನಡೆಯಲು ಬಿಡುವುದಿಲ್ಲ ಎಂದು ಹೇಳಿರುವ ಬಗ್ಗೆ

**ಶ್ರೀ ಗೋ.ಮಧುಸೂದನ ಪದವೀಧರರ ಕ್ಷೇತ್ರ:-** ಮಾನ್ಯ ಸಭಾಪತಿಗಳೆ, ದಿನಾಂಕ: 2-1-2011 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಮತ್ತು ಅದೇ ದಿನ ಕನ್ನಡ ಪ್ರಭ ಪ್ರತಿಕೆಯಲ್ಲಿ "ಕಲಾಪಕ್ಕೆ ಬಿಡಲ್ಲ-ಕುಮಾರಸ್ವಾಮಿ" ಎಂಬ ತಲೆಬರಹದ ಸುದ್ದಿ ಅಚ್ಚಾಗಿದೆ. ಈ ಸದನದ ಸದಸ್ಯರಲ್ಲದ ಅವರು ಅಥವಾ ಯಾರೇ ಆದರೂ ಈ ರೀತಿ ಹೇಳಿಕೆ ನೀಡುವುದು ಸದನದ ಸದಸ್ಯರ ಹಕ್ಕಿಗೆ ಚ್ಯುತಿ ತಂದಿದೆ. ಈ ಪ್ರಸ್ತಾಪವನ್ನು ಸದನದ ನಿಯಮಾವಳಿ ಸೆಕ್ಷನ್ 175 ರ ಅಡಿಯಲ್ಲಿ ಪ್ರಸ್ತಾಪಿಸಲು ಮತ್ತು ಸದನದ ಹಕ್ಕಿನ ರಕ್ಷಣೆ ಮಾಡಲು ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ಸದನವನ್ನು 6ನೇ ತಾರೀಖಿನಿಂದ ಕರೆಯಲಾಗುತ್ತದೆ ಎಂದು ತಮ್ಮ ಕಡೆಯಿಂದ ಬಂದ ಪ್ರಸ್ತಾವವನ್ನು ನಾವು 1 ನೇ ತಾರೀಖಿನಂದೇ ಪತ್ರಿಕೆಗಳಲ್ಲಿ ಓದಿದ್ದೆವು. ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿರುವಂತಹ ಜನರ ಸಮಸ್ಯೆಗಳ ಬಗ್ಗೆ, ಅನ್ಯ ವರ್ಗಗಳ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪವನ್ನು ಮಂಡಿಸಲು ಬೇಕಾದಂತಹ ತಯಾರಿಯನ್ನು ನಾವು ಮಾಡಿಕೊಂಡೆವು. ಈ ಸಂದರ್ಭದಲ್ಲಿ 2 ನೇ ತಾರೀಖು ಒಂದು ಹೇಳಿಕೆ ಬಂತು. ಯಾರೊ ಒಬ್ಬ ಸಾಮಾನ್ಯ ವ್ಯಕ್ತಿ ಇಂತಹ ಹೇಳಿಕೆಯನ್ನು ಕೊಟ್ಟಿದ್ದರೆ ಅದನ್ನು ನಾವು ಬಹುಶಃ ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ ಅನ್ನಿಸುತ್ತದೆ. ಆದರೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂತವರು, ಕನಕಪುರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿ ರಾಜಕೀಯ ಜೀವನವನನ್ನು ಲೋಕಸಭಾ ಸದಸ್ಯರಾಗಿ ಪ್ರಾರಂಭ ಮಾಡಿದವರು. ನಾನು ಒಬ್ಬ ಸ್ಕೂಲ್ ಮಾಸ್ಟರ್ ಮಗ ನಾನು ಚಿಕ್ಕವನಾಗಿದ್ದಾಗ ವಿಧಾನಸೌಧವನ್ನು ನೋಡೆ ಇರಲಿಲ್ಲ. ಆದರೆ ಅವರು ಮಾಜಿ ಮುಖ್ಯಮಂತ್ರಿ, ಮಾಜಿ ಮಂತ್ರಿ, ಮಾಜಿ ಪ್ರಧಾನ ಮಂತ್ರಿಗಳ ಮಗ. ಬಹುಶಃ ಕುಮಾರಸ್ವಾಮಿಯವರು ಹುಟ್ಟಿದಾಗಲೇ ಅವರ ತಂದೆ ಎಂಎಲ್ಎ ಆಗಿದ್ದರು

ಎಂದು ಕಾಣುತ್ತದೆ. ಅಂದರೆ ಇವರು ಹುಟ್ಟುವಾಗಲೇ ಒಬ್ಬ ಎಂಎಲ್ಎ ಮಗನಾಗಿ ಹುಟ್ಟಿದವರು. ಮಾಜಿ ಲೋಕೋಪಯೋಗಿ ಸಚಿವರಾಗಿದ್ದ, ಈ ದೇಶದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ, ಮಾಜಿ ಮುಖ್ಯಮತ್ರಿಗಳಾಗಿದ್ದವರ ಮಗನಾಗಿ ಅನುಭವವಿರುವ ಹಿನ್ನೆಲೆಯಲ್ಲಿ ನಾವುಗಳು ವಿಧಾನಮಂಡಲವನ್ನು ನೋಡಬೇಕಾದರೆ ಕಷ್ಟಪಟ್ಟು ಯಾರಾದರು ಎಂಎಲ್ಎ ಗಳಿಂದ ಪಾಸ್ ತೆಗೆದುಕೊಂಡು ಒಳಗಡೆ ಬರಬೇಕಾಗಿತ್ತು. ಇಂತಹ ಪರಿಸ್ಥಿತಿ ನಮಗೆ ಇರುವಾಗ, ಇವರು ಅಪ್ಪನ ಕೈಹಿಡಿದುಕೊಂಡು ಬಂದ ಮುಖ್ಯಮಂತ್ರಿಗಳ ಕೊಠಡಿಯನ್ನು ಸಹ ನೋಡಿಕೊಂಡು ಹೋದವರು. ಎರಡು ಸದನಗಳನ್ನು ನೋಡಿದಂತಹ ವ್ಯಕ್ತಿಗೆ, ಈ ಸದನದ ಗಾಂಭೀರ್ಯತೆ ಏನು, ಈ ಸದನದ ಹಕ್ಕುಗಳು ಏನು, ಈ ಸದನದ ಔಚಿತ್ಯ ಏನು, ಈ ಸದನದ ಮಹತ್ವ ಏನು ಎನ್ನುವುದನ್ನು ನಾವು ತಿಳಿಸಿಕೊಡಬೇಕಾದ ದುರ್ದೈವ ನಮಗೆ ಬಂತಲ್ಲ. ಇಂತಹ ವ್ಯಕ್ತಿ ಈ ಸದನ ನಡೆಯಲು ಬಿಡುವುದಿಲ್ಲ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಬರಿ ಹೇಳಿಕೆಯನ್ನು ಕೊಟ್ಟಿರುವುದಕ್ಕೆ ನನಗೆ ದುಃಖವಿಲ್ಲ. ಹೇಳಿಕೆ ಕೊಟ್ಟ ನಂತರದಲ್ಲಿ ಈ ಸದನ ನಡೆಯಬಾರದ ರೀತಿಯಲ್ಲಿ ಬೇಕಾದಂತಹ ಪಿತೂರಿಯನ್ನು ಸಹ ಅವರು ಮಾಡಿದ್ದಾರೆ. ಈಗಾಗಲೇ ಕಳೆದ ಮೂರು ದಿನಗಳಿಂದ ಸದನವನ್ನು ನೋಡುತ್ತಿದ್ದೇವೆ. ಈ ಪಿತೂರಿ ಪ್ರಾರಂಭವಾಗಿರುವುದು ರಾಜ್ಯಪಾಲರ ಭಾಷಣದ ಸಂದರ್ಭದಿಂದ ಈ ರಾಜ್ಯದಲ್ಲಿ ಒಂದು ಸತ್ ಪರಂಪರೆ ಇದೆ, ವರ್ಷದ ಮೊದಲು ಸದನ ಸೇರುವ ಸಂದರ್ಭದಲ್ಲಿ ರಾಜ್ಯಪಾಲರು ಸದಾಶಯದ ಭಾಷಣವನ್ನು ಮಾಡುತ್ತಾರೆ. ಕಳೆದ ಒಂದು ವರ್ಷದಲ್ಲಿ ಸರ್ಕಾರ ಮಾಡಿದ ಸಾಧನೆಗಳು ಏನು, ಏನೇನು ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ, ಮುಂಬರುವ ದಿನಗಳಲ್ಲಿ ಸರ್ಕಾರ ಏನೇನು ಯೋಜನೆಗಳನ್ನು ಹಾಕಿಕೊಂಡಿದೆ, ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು, 2020ರ ಹೊತ್ತಿಗೆ ಭಾರತ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ರಾಷ್ಟ್ರವಾಗ ಬೇಕಾಗಿದೆ ಎಂದು. ಅದಕ್ಕೆ ಬೇಕಾದ ಎಲ್ಲ ಜವಾಬ್ದಾರಿಗಳು ಆಯಾ ಸರ್ಕಾರಕ್ಕೆ ಇರುತ್ತದೆ. ಒಂದೊಂದು ಹೆಜ್ಜೆ ಇಟ್ಟು ಮುಂದುವರೆಯ

ಬೇಕಾಗುತ್ತದೆ. ಕಳೆದ 50-60 ವರ್ಷಗಳಲ್ಲಿ ಎಷ್ಟು ಪ್ರಗತಿಯನ್ನು ನಾವು ಸಾಧಿಸಬೇಕಾಗಿತ್ತು ಅಷ್ಟು ಸಾಧಿಸಲು ಆಗಿಲ್ಲ ಎನ್ನುವ ಕೊರಗು ಎಲ್ಲರಿಗೂ ಇದೆ ಎಂದು ನಾನು ಅಂದುಕೊಳ್ಳುತ್ತೇನೆ. ಜರ್ಮನಿ, ಜಪಾನಿ, ಇಸ್ರೇಲ್ ಇವೆಲ್ಲ ನಮ್ಮ ಜೊತೆಯಲ್ಲಿ ಸ್ವತಂತ್ರ ಪಡೆದಂತಹ ದೇಶಗಳು. ಇವತ್ತು ಅವರೆಲ್ಲರು ಆರ್ಥಿಕವಾಗಿ ಎಷ್ಟು ಮುಂದುವರೆದಿದ್ದಾರೆ. ಬಹುಶಃ ಮುಂದೆ ಮೊದಲ ಪಂಕ್ತಿಯಲ್ಲಿರುವ 8-10 ರಾಷ್ಟ್ರಗಳ ಹೆಸರಿನ ಜೊತೆಯಲ್ಲಿ ಈ ರಾಷ್ಟ್ರಗಳನ್ನು ನೋಡಬಹುದು. ಆದರೆ ಇಷ್ಟೊಂದು ಪುರಾತನ ಇತಿಹಾಸ ಇರುವ, ಪರಂಪರೆ ಇರುವ ದೇಶ ನಮ್ಮದು ಕಳೆದ 60 ವರ್ಷಗಳಲ್ಲಿ ನಾವು ಎಷ್ಟು ಸಾಧನೆ ಮಾಡಬೇಕಾಗಿತ್ತು ಅಷ್ಟು ಸಾಧನೆ ಮಾಡಲು ಆಗಲಿಲ್ಲ ಎನ್ನುವಂತಹ ಕೊರಗು ಇರುವಂತಹ ಸಂದರ್ಭದಲ್ಲಿ, ಈ ಸದನ ನಡೆಯಬಾರದ ರೀತಿಯಲ್ಲಿ ಪಿತೂರಿ ಪ್ರಾರಂಭವಾಗಿದ್ದು ರಾಜ್ಯಪಾಲರ ಭಾಷಣದ ಸಮಯದಿಂದ. ಸದನ ನಡೆಯಲು ಬಿಡುವುದಿಲ್ಲ ಎಂದು ಹೇಳಿದಂತಹ ದಿನದಿಂದ, ರಾಜ್ಯಪಾಲರ ಭಾಷಣದ ಸಮಯದಿಂದ ಸದನ ನಡೆಯಲು ಬಿಡುವುದಿಲ್ಲ ಎಂದು ಹೇಳಿದಂತಹ ದಿನದಿಂದ, ರಾಜ್ಯಪಾಲರ ಭಾಷಣದ ಕ್ಷಣದಿಂದ ಪ್ರಾರಂಭ ಮಾಡಿದರು. ಅವರು ಭಾಷಣ ಮಾಡಲು ಬಿಡಲಿಲ್ಲ. ಕರ್ನಾಟಕದ ಭವ್ಯ ಪ್ರಜಾಪ್ರಭುತ್ವದ ಪರಂಪರೆ, ಸ್ವತಂತ್ರದ ನಂತರದ ಪರಂಪರೆ ಏನು ಇದೆ ಅದನ್ನು ಮುರಿದು ಒಬ್ಬ ರಾಜ್ಯಪಾಲರು ಒಂದು ಅಕ್ಷರವನ್ನು ಮಾತನಾಡದ ರೀತಿಯಲ್ಲಿ.. ನನ್ನ ಭಾಷಣದ ಓದಲಾಗಿದೆ ಎಂದು ಪರಿಗಣಿಸಿ ಎನ್ನುವಂತೆ ಅವರು ಮಾಡಿಕೊಂಡಿರುವ ಮನವಿಯನ್ನು ತಾವು ಕೇಳಿಸಿಕೊಂಡಿರಬಹುದು ಅನ್ನಿಸುತ್ತದೆ. ಆದರೆ ಅವರ ಮನವಿ ನಮಗೆ ಕೇಳಿದ ರೀತಿಯಲ್ಲಿ ಕೆಳಗಡೆ ಮನೆಯಲ್ಲಿ ವಿರೋಧ ಪಕ್ಷದವರು ಅಂದು ಗಲಾಟೆ ಮಾಡಿದರು. ಅಲ್ಲಿಂದ ಪ್ರಾರಂಭವಾದ ಪಿತೂರಿ ಮುಂದುವರೆಯಿತು, ನಿಯಮಾವಳಿಗಳನ್ನು ಬಿಟ್ಟು ಸದನದಲ್ಲಿ ನಡೆದುಕೊಂಡರು. ಇಲ್ಲಿ ನನಗೆ ಅರ್ಥವಾಗದಿರುವ ಸಂಗತಿ ಎಂದರೆ, 45 ನಿಮಿಷದಲ್ಲಿ ಪ್ರಶ್ನೋತ್ತರ ಮುಗಿಯುತ್ತಿತ್ತು, ಈ ಪ್ರಶ್ನೋತ್ತರ ಬೇಡ ಎಂದು ಕಳೆದ ಮೂರು ದಿನಗಳಿಂದ ಅವರು ನಿಲುವಳಿ ಸೂಚನೆಗೆ ತಮ್ಮ ಪ್ರಸ್ತಾಪವನ್ನು ಮಂಡಿಸುತ್ತಲೇ ಇದ್ದಾರೆ.

ಅವರ ಮನವಿ ನಡೆಯಲಿಲ್ಲ, ತಾವು ಅದಕ್ಕೆ ರೂಲಿಂಗ್ ಕೊಟ್ಟರಿ, ಮತ್ತೆ ಮನವಿ ಮೇಲೆ ಮರು ಮನವಿ, ಅದರ ಮೇಲೆ ಕಿರು ಮನವಿ ನಂತರ ಕಿರಿಕಿರಿ ಮನವಿ ಪ್ರಾರಂಭವಾಯಿತು. ಆ ಕಿರಿಕಿರಿ ಮನವಿ ಇನ್ನು ಮುಂದುವರೆದಿದೆ. ಇವತ್ತಿಗೂ ಸದನ ನಡೆಯಲು ಅವರು ಬಿಡುತ್ತಿಲ್ಲ. ತಾವು ಕರೆದಿರುವಂತಹ ಈ ಸದನ... ಸದನವನ್ನು ಕರೆಯಿರಿ ಎಂದು ಸರ್ಕಾರ ತಮಗೆ ಸೂಚಿಸುತ್ತದೆ. ಸದನ ಕರೆಯುವುದು ತಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ. ಈ ಸದನವನ್ನು ತಾವು ಕರೆದಿದ್ದಿರಿ, ಆದರೆ ಈ ಸದನ ನಡೆಯಲು ನಾವು ಬಿಡುವುದಿಲ್ಲ ಎನ್ನುವುದು ಬಹುಶಃ ಇದು ಪ್ರಜಾಪ್ರಭುತ್ವದಲ್ಲಿ ನಡೆದಂತಹ ರಾಜಕೀಯ ವಾದಂತಹ ಭಯೋತ್ಪಾದನೆ ಎಂದು ನಾನು ಹೇಳಲು ಇಷ್ಟಪಡುತ್ತೇನೆ. this is a political terrorism. ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳಂಕ ತರುವ ರೀತಿಯಲ್ಲಿ ಇವರು ಈ ಒಂದು ಹೇಳಿಕೆಯನ್ನು ನೀಡಿದ್ದಾರೆ. ಅದಕ್ಕೆ ತಕ್ಕ ಹಾಗೆ ನಡೆದುಕೊಂಡಿದ್ದಾರೆ ಇದನ್ನು ಸದನ ಗಂಭೀರವಾಗಿ ಸ್ವೀಕಾರ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಇಷ್ಟೇ ಅಲ್ಲ ಈ ವ್ಯಕ್ತಿಯ ಉದ್ಧಟತನ ಇನ್ನು ಮುಂದುವರೆದಿದೆ. ಇಷ್ಟಕ್ಕೆ ನಿಲ್ಲಿಸಲಿಲ್ಲ. ಕೆಳಮನೆ ಬಗ್ಗೆ ಮಾತನಾಡುತ್ತಾ "ಇಂದಿನ ವಿಧಾನಸಭೆ ಹೆಂಡದಂಗಡಿ" ಎಂದು ಹೇಳಿದ್ದಾರೆ ಇಂಗ್ಲೀಷನಲ್ಲಿ Arrack shop ಎಂದು ಹೇಳುತ್ತಾರೆ. 6 ಕೋಟಿ ಜನರ ಆಶೋತ್ತರಗಳ ಬಗ್ಗೆ, ದುಃಖ–ದುಮ್ಮಾನಗಳ ಬಗ್ಗೆ ಇಲ್ಲಿ ನಾವು ಇಷ್ಟು ಗಂಭೀರವಾಗಿ ಚಿಂತನೆ ಮಾಡುವ, ಚರ್ಚೆ ಮಾಡುವ ಈ ಸ್ಥಾನ ಹೆಂಡದಂಗಡಿಯೇ? ಈ ಸದನವನ್ನು ಇಷ್ಟು ಕೀಳಾಗಿ ಕಾಣುವ ಇವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ನಂಬಿಕೆ ಇದೆಯೇ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಈ ಸದನಗಳು ಪ್ರಜಾಪ್ರಭುತ್ವದ ಎರಡು ದೇವಾಲಯಗಳು, ಕಾನೂನಿನ ರಕ್ಷಣೆಯ ಭವನಗಳು, ಈ ಸದನಗಳು ಪ್ರಜಾಪ್ರಭುತ್ವದ ಎರಡು ದೇವಾಲಯಗಳು, ಕಾನೂನಿನ ರಕ್ಷಣೆಯ ದೇವಾಲಯಗಳು. ಈ ಸದನದ ಹಕ್ಕಿನ ಬಗ್ಗೆ, ಬರೀ ಹಕ್ಕಿನ ಬಗ್ಗೆ ನನಗೆ ಚಿಂತೆ ಇಲ್ಲ. ಈ ಸದನದ ಗೌರವದ ಬಗ್ಗೆ. ಈ ಸದನದ ಅಸ್ತಿತ್ವದ ಬಗ್ಗೆ. ಈ ಸದನದ ಪ್ರಮಾಣಿಕತೆಯ ಬಗ್ಗೆ ರಸ್ತೆಯಲ್ಲಿ ನಿಂತು ಮಾತನಾಡುತ್ತಾರೆ ಎಂದರೆ ಇದನ್ನು ನಾವು ಗಂಭೀರವಾಗಿ

ಪರಿಗಣಿಸಬೇಕಾಗುತ್ತದೆ. ತಮ್ಮಲ್ಲಿ ನಾನು ವಿಶೇಷವಾದ ಮನವಿಯನ್ನು ಮಾಡುತ್ತೇನೆ. ಹಿಂದೆ ಒಂದು ಸಾರಿ ಈ ಸದನ ಒಬ್ಬ ಜಿಲ್ಲಾಧಿಕಾರಿ ಸದಸ್ಯರು ಹಕ್ಕುಚ್ಯುತಿ ಮಾಡಿದ ಕಾರಣಕ್ಕಾಗಿ, ಆ ವ್ಯಕ್ತಿಯನ್ನು ಸದನಕ್ಕೆ ಕರೆಯಿಸಿ ಛೀಮಾರಿಯನ್ನು ಹಾಕಲಾಗಿತ್ತು. ಅವತ್ತು ನಡೆದಿದ್ದು ಬರೀ ಒಬ್ಬ ಸದಸ್ಯರ ಹಕ್ಕುಚ್ಯುತಿ. ಇವತ್ತು ಎಲ್ಲ ಸದಸ್ಯರ ಹಕ್ಕುಚ್ಯುತಿಯಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಗೌರವಕ್ಕೆ ಚ್ಯುತಿ ಬರುವ ಹಾಗೆ ಅವರು ನಡೆದುಕೊಂಡಿದ್ದಾರೆ. ಸಭಾಧ್ಯಕ್ಷರ ಪೀಠಕ್ಕೆ ಅಗೌರವವನ್ನು ತೋರಿಸಿದ್ದಾರೆ. ಈ ವ್ಯಕ್ತಿಯನ್ನು ಸದನಕ್ಕೆ ಕರೆದು ಛೀಮಾರಿಯನ್ನು ಹಾಕಬೇಕು, ಈ ವ್ಯಕ್ತಿಯ ರಾಜಕೀಯ ಭಯೋತ್ಪಾದನೆ ಇದೆ. ಇದರ ಹಿಂದೆ ರಾಜಕೀಯದ ಮೇಲಾಟದ ಪಿಡುಗು ಇದೆ. ಇದರ ಹಿಂದೆ ರಾಜಕೀಯ ಅಧಿಕಾರದ ಬಲ ಇದೆ, ರಾಜಕೀಯ ಅಧಿಕಾರದ ದುರಂಹಕಾರವಿದೆ. ವ್ಯಕ್ತಿಗೆ ದುರಂಹಕಾರವಿದೆ, ವ್ಯಕ್ತಿಗೆ ದುರಂಹಕಾರವಿದ್ದರೆ ಅದನ್ನು ತನ್ನ ಮನೆಯಲ್ಲಿ ಇಟ್ಟುಕೊಳ್ಳಬೇಕು. ತಮ್ಮ ದುರಂಹಕಾರ ಮಾತುಗಳಿಂದ ಸದನದ ಗೌರವಕ್ಕೆ ಕುತ್ತು ತರುವಂತೆ ನಡೆದುಕೊಳ್ಳಬಾರದು. ವ್ಯಕ್ತಿಯ ದುರಂಹಕಾರದ ಮಾತುಗಳಿಂದ ಇವತ್ತು ಸದನದ ಪ್ರತಿಷ್ಠೆ ಬಲಿಯಾಗುತ್ತಿರುವುದನ್ನು ನಾವು ಸಹಿಸಲು ಸಾಧ್ಯವಿಲ್ಲ. ಈ ಕಾರಣಕ್ಕೆ ತಮ್ಮಲ್ಲಿ ಕಳಕಳಿಯ ಮನವಿ ಎಂದರೆ, ಆ ವ್ಯಕ್ತಿಯನ್ನು ಸದನಕ್ಕೆ ಕರೆಯಿಸಬೇಕು, ನಮ್ಮ ಹಕ್ಕುಚ್ಯುತಿ ಸಮಿತಿಗೆ ಇದನ್ನು ಕೊಡಬೇಕು ಎಂದು ನಾನು ಕೇಳುತ್ತಿಲ್ಲ, ಇದು ಹಕ್ಕುಚ್ಯುತಿ ಸಮಿತಿಗೆ ಕೊಡುವಂತಹ ಸಂಗತಿಯಲ್ಲ. ಯಾರೊ ಒಬ್ಬ ಸದಸ್ಯರ ಹಕ್ಕುಚ್ಯುತಿಯಾದರೆ, ಯಾರೊ ವ್ಯಕ್ತಿಗೆ ಅವನು ಸಾರ್ವಜನಿಕ ಸೇವೆ ಮಾಡಲು ಅಡ್ಡಿ ಬಂದಿರುವ ವಿಚಾರವಾಗಿದ್ದರೆ ಅದನ್ನು ಖಂಡಿತವಾಗಿ ಸದನದ ಹಕ್ಕುಚ್ಯುತಿ ಸಮಿತಿಗೆ ಕೊಡಬಹುದು ಆದರೆ ಇಡೀ ಸದನದ ಎಲ್ಲ ಸದಸ್ಯರ, ಆಡಳಿತ ಪಕ್ಷದ ಸದಸ್ಯರ, ವಿರೋಧ ಪಕ್ಷದ ಸದಸ್ಯರ ಹಕ್ಕು, ಗೌರವ, ಮನ್ನಣೆ, ಮರ್ಯಾದೆ ಎಲ್ಲವನ್ನೂ ಹರಾಜು ಹಾಕುವಂತಹ ಕೆಲಸವನ್ನು ಮಾಡಿದ್ದಾರೆ. ಈ ಕಾರಣಕ್ಕಾಗಿ ರಾಜಕೀಯ ಭಯೋತ್ಪಾದನೆಗೆ ನಾವು ಖಂಡಿತವಾಗಿ ಇತಿಶ್ರೀ ಹಾಡಬೇಕು. ಆ ವ್ಯಕ್ತಿಯ ರಾಜಕೀಯದ ಭಯೋತ್ಪಾದನೆ, ಆ ಪಕ್ಷದ ರಾಜಕೀಯ ಭಯೋತ್ಪಾದನೆ, ಆ ಮನೆತನದ

ರಾಜಕೀಯದ ಭಯೋತ್ಪಾದನೆ, ಆ ವ್ಯಕ್ತಿಯ ಹೇಳಿಕೆಯನ್ನು ಈ ಎಲ್ಲ ಹಿನ್ನೆಲೆಗಳಿಂದ ನೋಡಬೇಕು, ಆ ವ್ಯಕ್ತಿ ಈ ರೀತಿಯ ಹೇಳಿಕೆ ಕೊಡಲು ಏನೆಲ್ಲಾ ಹಿನ್ನೆಲೆಗಳು ಇವೆ ಎನ್ನುವುದನ್ನು ನೋಡಬೇಕು. These are all consequential evidences ಈ ಎಲ್ಲ evidenceಗಳನ್ನು ತಾವು ನೋಡಬೇಕು, ಆಕುಟುಂಬ ಯಾವ ರೀತಿ ನಡೆದುಕೊಂಡಿದೆ, ಆ ವ್ಯಕ್ತಿಯ ಪಕ್ಷ ಯಾವ ರೀತಿ ನಡೆದುಕೊಂಡಿದೆ ಎನ್ನುವುದನ್ನು ನೋಡಬೇಕು. ಅವರು ಒಂದು ಪಕ್ಷದ ರಾಜಾಧ್ಯಕ್ಷರು, ಕೇಂದ್ರದಲ್ಲಿ ಮಂತ್ರಿಗಳಾಗಬೇಕು ಎಂದು ಕನಸು ಕಂಡವರು. ಈ ರೀತಿಯ ಹೇಳಿಕೆಗಳನ್ನು ಕೊಟ್ಟುಬಿಟ್ಟರೆ ಕೇಂದ್ರ ಸರ್ಕಾರಕ್ಕೆ ನಾನು ಹತ್ತಿರವಾಗಿ ಬಿಡುತ್ತೇನೆ ಇದರಿಂದ ಮಂತ್ರಿಯಾಗಿ ಬಿಡುತ್ತೇನೆ ಎನ್ನುವ ಕನಸನ್ನು ಕಾಣುತ್ತಿದ್ದಾರೆ. ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತೇನೆ. ಸದನಕ್ಕೆ ಈ ವ್ಯಕ್ತಿಯನ್ನು ಕರೆಸಿ ಛೀಮಾರಿ ಹಾಕಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಾ, ನನ್ನ ಈ ಹಕ್ಕುಚ್ಯುತಿ ಪ್ರಸ್ತಾಪವನ್ನು ನಾನು ಮಂಡಿಸುತ್ತೇನೆ. ನನ್ನ ಜೊತೆಗೆ ಹಕ್ಕುಚ್ಯುತಿ ಪ್ರಸ್ತಾವವನ್ನು ನಾನು ಮಂಡಿಸುತ್ತೇನೆ. ನನ್ನ ಜೊತೆಗೆ ಹಕ್ಕುಚ್ಯುತಿ ಪ್ರಸ್ತಾಪದ ನೋಟಿಸಿಗೆ ಮಾನ್ಯ ಸಿದ್ದರಾಜುರವರು ಸಹಿ ಹಾಕಿದ್ದಾರೆ, ಅವರು ಇದನ್ನು ಅನುಮೋದಿಸುತ್ತಾರೆ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ ಬೃಹತ್ ನೀರಾವರಿ ಸಚಿವರು:-** ಮಾನ್ಯ ಸಭಾಪತಿಗಳೆ, ಮಾನ್ಯ ಮಧುಸೂದನ್ ರವರು ಮಂಡಿಸಿರುವ ಈ ಹಕ್ಕುಚ್ಯುತಿ ವಿಚಾರದ ಬಗ್ಗೆ ಹೇಳಬೇಕಾದರೆ, ಅವರು ಮಂಡಿಸಿರುವುದು ಒಬ್ಬ ಮಾಜಿ ಮುಖ್ಯಮಂತ್ರಿಯವರ ವಿರುದ್ಧ. ಅದಕ್ಕಿಂತ ಮುಖ್ಯವಾಗಿ ಅವರು ಈಗ ಹಾಲಿ ಲೋಕಸಭಾ ಸದಸ್ಯರಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ತಾವು ದಯಮಾಡಿ ಪರಿಶೀಲನೆ ಮಾಡಬೇಕು. ಒಬ್ಬ ಹಾಲಿ ಲೋಕಸಭಾ ಸದಸ್ಯರ ಮೇಲೆ ಹಕ್ಕುಚ್ಯುತಿ ಮಂಡನೆ ಮಾಡುವುದು ಸೂಕ್ತವೇ ಅಥವಾ ಲೋಕಸಭಾ ಸ್ಪೀಕರ್‌ರವರಿಗೆ ಇದನ್ನು ಕಳುಹಿಸಬೇಕೆ ಎನ್ನುವುದು ದಯಮಾಡಿ ತಾವು ಪರಿಶೀಲನೆ ಮಾಡಿ ಅದಕ್ಕೆ ಸೂಕ್ತವಾದ ಸೂಚನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:** ಮಾನ್ಯ ಮಸ್ಕಿಯವರು ಯಾವ ರೀತಿ ಹಕ್ಕುಚ್ಯುತಿ ಯಾಗಿದೆ ಎನ್ನುವುದನ್ನು ಮಾತ್ರ ಅತ್ಯಂತ ಸೂಕ್ಷ್ಮವಾಗಿ ಒಂದೆರಡು ಮಾತು ಗಳಲ್ಲಿ ಹೇಳಿ ಮುಗಿಸಬೇಕು.

**ಶ್ರೀ ಮನೋಹರ್ ಮಸ್ಕಿ ಪದವೀಧರರ ಕ್ಷೇತ್ರ:** ಸನ್ಮಾನ್ಯ ಸಭಾಪತಿ ಯವರೇ, ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ತಾವು ಹೇಳಿದಂತೆ ಹೆಚ್ಚು ವಿಷಯಗಳನ್ನು ವಿವರಿಸಿದೆ. ಈ ಹಕ್ಕುಚ್ಯುತಿ ಹೇಗೆ ಪ್ರಸ್ತುತ ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ತಿಂಗಳ 2 ನೇ ತಾರೀಖಿನಂದು ಎಲ್ಲ ದಿನ ಪತ್ರಿಕೆಗಳಲ್ಲಿ ಈ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳು ಹಾಗು ಲೋಕಸಭಾ ಸದಸ್ಯರಾಗಿರುವಂತಹ ಮಾನ್ಯ ಕುಮಾರಸ್ವಾಮಿಯವರು ಈ ಸದನವನ್ನು ನಡೆಸುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಹೇಳಿಕೆಯನ್ನು ನೀಡಿದ್ದಾರೆ. ಅದನ್ನು ಓದಿದಾಗ, ನಮ್ಮೆಲ್ಲರಿಗೂ ಆಘಾತ ಮತ್ತು ಆಶ್ಚರ್ಯವಾಯಿತು. ಸದನದ ಸದಸ್ಯರಲ್ಲದ ಒಬ್ಬ ವ್ಯಕ್ತಿ ಸಂವಿಧಾನಾತ್ಮಕವಾಗಿ ಈ ಸದನ ಅಸ್ತಿತ್ವಕ್ಕೆ ಬಂದಿದೆ. ಇಲ್ಲಿ ಹೇಳಿರುವಂತಹ ಕೆಲಸಗಳನ್ನು ಮಾಡುವುದಕ್ಕೋಸ್ಕರ ಈ ಸದನ ಅಸ್ತಿತ್ವಕ್ಕೆ ಬಂದಿದೆ. ಇಲ್ಲಿ ಸಂವಿಧಾನ ಬದ್ಧವಾಗಿ ನಡೆಯುವ ಕೆಲಸವನ್ನು ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಹೇಳುವುದು ಮಾನ್ಯ ಮಧುಸೂದನ್‌ರವರು ಹೇಳಿದಂತೆ ಇದೊಂದು ಭಯೋತ್ಪಾದನೆ ಆಗಿದೆ ಮತ್ತು ರಾಜದ್ರೋಹವಾಗಿದೆ. ಸಂವಿಧಾನ ದತ್ತವಾಗಿರು ವಂತಹ ಕಾರ್ಯಗಳನ್ನು ಇಲ್ಲಿ ನಡೆಯುವುದಕ್ಕೆ ರಾಜ ದ್ರೋಹವಾಗುತ್ತದೆ. ಆದ್ದರಿಂದ ಇದು ಬಹಳ ಬಿಡುವುದಿಲ್ಲ ಎಂದು ಹೇಳುವುದು ರಾಜ್ಯದ್ರೋಹ

ವಾಗುತ್ತದೆ, ಆದ್ದರಿಂದ ಇದು ಬಹಳ ಗಂಭೀರವಾಗಿರುವಂತಹ ಪ್ರಶ್ನೆ ಆಗಿದೆ. ಈ ಸದನಕ್ಕೆ ತನ್ನದೇ ಆಗಿರುವಂತಹ ಗೌರವ ಇದೆ. ಈ ಸದನದ ಗೌರವಕ್ಕೆ ಚ್ಯುತಿ ಬಂದಿದೆ ಎನ್ನುವುದು ಒಂದು ಭಾಗವಾದರೆ, ಸಂವಿಧಾನವನ್ನು ಆಚರಣೆಗೆ ತರುವುದಿಲ್ಲ ಎಂದು ಹೇಳುವ ಮಟ್ಟಿಗೆ ಈ ಹೇಳಿಕೆಯನ್ನು ವ್ಯಾಪ್ತಿ ಹೋಗಿದೆ. ಈ ದೇಶದ ಅತ್ಯುನ್ನತ ಸಂವಿಧಾನಾತ್ಮಾಕ ಸಂಸ್ಥೆ ಆಗಿರುವಂತಹ ಸಂಸತ್‌ಭವನದ ಮೇಲೆ ದಾಳಿ ಆಯಿತು. ಅದೊಂದು ಭೌತಿಕವಾಗಿರುವಂತಹ ದಾಳಿಯಾಗಿತ್ತು. ಅಫ್ಜಲ್ ಗುರು ನೇತೃತ್ವದಲ್ಲಿ ಸಂಸತ್ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕುವ ರೀತಿಯಲ್ಲಿ ದಾಳಿ ನಡೆಯಿತು. ಅವರನ್ನು ನೇಣಿಗೆ ಹಾಕುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಅದು ಬೇರೆ ವಿಚಾರ. ಆದರೆ, ಈ ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎನ್ನುವುದನ್ನು ಕೂಡ ಸಂವಿಧಾನಾತ್ಮಕವಾಗಿ ರಚನೆಯಾಗಿರುವಂತಹ ಈ ಸದನದ ಮೇಲೆ ನಡೆಯುತ್ತಿರುವಂತಹ ದಾಳಿ ಎನ್ನುವುದನ್ನು ನನ್ನ ಭಾವನೆಯಾಗಿದೆ. ಮಾನ್ಯ ಕುಮಾರಸ್ವಾಮಿಯವರ ಈ ಹೇಳಿಕೆಯಿಂದಾಗಿ ಸದನದ ಗೌರವಕ್ಕೆ ಚ್ಯುತಿ ಬಂದಿದೆ ಮತ್ತು ಈ ಸದನದ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆ. ಆದ್ದರಿಂದ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟವರ ಹೇಳಿಕೆಗಳನ್ನು ದಿನಪತ್ರಿಕೆಗಳ ಪ್ರತಿಗಳನ್ನು ಈಗಾಗಲೇ ನನ್ನ ನೋಟಿಸನ ಜೊತೆಗೆ ತಮಗೆ ಕಳುಹಿಸಿ ಕೊಟ್ಟಿದ್ದೇನೆ. ಇದನ್ನು ಒಬ್ಬ ಸದಸ್ಯನಿಗೆ ಆಗಿರುವಂತಹ ಹಕ್ಕುಚ್ಯುತಿ ಎಂದು ಪರಿಗಣಿಸದೇ ನಾನು ಈಗಾಗಲೇ ಹೇಳಿರುವಂತೆ ಸದನದ ಪ್ರತಿಷ್ಠೆ, ಸದನದ ಎಲ್ಲ ಸದಸ್ಯರ ಹಕ್ಕಿನಚ್ಯುತಿ ಮತ್ತು ಈ ದೇಶದ ಸಂವಿಧಾನದವನ್ನು ಪ್ರಶ್ನೆ ಮಾಡಿರುವಂತಹ ಸಂದರ್ಭವನ್ನು ಗಮನಿಸಿ ತಾವು ಈ ಹಕ್ಕುಚ್ಯುತಿಗೆ

ಅವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಮಧುಸೂದನ್ ರವರು ಪ್ರಸ್ತಾಪ ಮಾಡಿರುವಂತಹ ಈ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಪ್ರಸ್ತಾಪ ಮಾಡದೇ ನೇರವಾಗಿ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರಾದಂತಹ ಬಸವರಾಜ ಬೊಮ್ಮಾಯಿ ಯವರು, 'ಅವರು ಲೋಕಸಭೆಯ ಸದಸ್ಯರಾಗಿದ್ದಾರೆ. ಈ ವಿಚಾರವನ್ನು ಲೋಕಸಭೆಯ ಸಭಾಧ್ಯಕ್ಷರಿಗೆ ಕಳುಹಿಸಿಕೊಡಬೇಕೇ ಹೇಗೆ ಎನ್ನುವುದನ್ನು ಪರಿಶೀಲಿಸಬೇಕು' ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದು ತಮಗೆ ಬಿಟ್ಟ ವಿಚಾರವಾಗಿದೆ. ಆದರೆ, ನನಗೆ ತಿಳಿದಮಟ್ಟಿಗೆ ಈ ಸದನ ಲೋಕಸಭೆಯಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಅವರು ಲೋಕಸಭೆಯ ಸದಸ್ಯರಾಗಿದ್ದರೂ ಸಹ ಈ ಸದನಕ್ಕೆ ಅಗೌರವವನ್ನು ತೋರಿಸಿದರೆ, ಅದನ್ನು ಹಕ್ಕುಚ್ಯುತಿ ಎಂದು ಪರಿಗಣಿಸುವುದಕ್ಕೆ ಅಡ್ಡಿಯಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಈ ಹಕ್ಕುಚ್ಯುತಿ ಪ್ರಸ್ತಾಪವನ್ನು ತಾವು ಅಂಗೀಕರಿಸಬೇಕು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಸಿದ್ದರಾಜು ವಿಧಾನಸಭಾ ಕ್ಷೇತ್ರ:** ಸನ್ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯ ಮತ್ತು ರಾಷ್ಟ್ರದ ಆಡಳಿತ ಪ್ರತ್ಯೇಕವಾಗಿರುತ್ತದೆ. ಆದರೆ ಸಂವಿಧಾನ ತನ್ನ ವಿಶೇಷವಾಗಿರುವಂತಹ ಅಧಿಕಾರ ಕೊಟ್ಟು ಸರ್ಕಾರವನ್ನು ಮಾಡುವುದಕ್ಕೆ ತನ್ನದೇ ಆಗಿರುವಂತಹ ಕಾನೂನು ಕಟ್ಟಳೆಗಳನ್ನು ರೂಪಿಸಿರುತ್ತದೆ. ನಾವು ಚುನಾಯಿತ ಪ್ರತಿನಿಧಿಗಳಾಗಿ, ಸದನವನ್ನು ಪ್ರವೇಶ ಮಾಡುವುದಕ್ಕೂ ಮೊದಲು, ಈ ರಾಷ್ಟ್ರದ ಸಂವಿಧಾನದತ್ತವಾಗಿರುವಂತಹ ಕಾನೂನು ಕಟ್ಟಳೆಗಳನ್ನು ಗೌರವಿಸಿ, ತನ್ಮೂಲಕ ಈ ನಾಡಿನ ಮತ್ತು ಈ ದೇಶದ ಜನರಿಗೆ ಸಾಮಾಜಿಕ ನ್ಯಾಯವನ್ನು ನೀಡುವುದಕ್ಕೆ ಕಂಕಣಬದ್ಧವಾಗಿ ಕೆಲಸ ಮಾಡುತ್ತೇವೆ ಮತ್ತು ಸಂವಿಧಾನದ

ಅಡಿಯಲ್ಲಿ ನಾವು ಕೆಲಸ ಮಾಡುತ್ತೇವೆ ಎಂದು ಹೇಳಿ ಪ್ರಮಾಣವನ್ನು ಮಾಡಿ ನಾವೆಲ್ಲಾ ಈ ಸದನವನ್ನು ಪ್ರವೇಶಿಸುತ್ತೇವೆ. ಈ ರಾಷ್ಟ್ರದ ಪ್ರತಿಷ್ಠೆಯ ಪ್ರತೀಕ ಪ್ರಜಾಪ್ರಭುತ್ವದ ಕೇಂದ್ರ ಬಿಂದುವಾಗಿರುವಂತಹ ಸಂಸತ್‌ನ್ನು ಪ್ರವೇಶ ಮಾಡಿರುವಂತಹ ಮಾನ್ಯ ಕುಮಾರಸ್ವಾಮಿಯವರು ಈ ದೇಶದ ಕಾನೂನು ಮತ್ತು ಈ ದೇಶದ ಸಂವಿಧಾನವನ್ನು ಗೌರವಿಸುತ್ತೇನೆ ಎಂದು ಪ್ರಮಾಣ ಮಾಡಿ ಸಂಸತ್ ಸದಸ್ಯರಾಗಿದ್ದಾರೆ. ಮಾನ್ಯ ಮನೋಹರ ಮಸ್ಕಿಯವರು ಹೇಳಿದಂತೆ ರಾಜ್ಯ ಮತ್ತು ರಾಷ್ಟ್ರ ಸರ್ಕಾರಗಳು ತಮ್ಮದೇ ಆಗಿರುವಂತಹ ವಿಶಿಷ್ಟ ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಸನ್ಮಾನ್ಯ ಕುಮಾರಸ್ವಾಮಿಯವರು ಕಾನೂನಿನ ಪರಿಮಿತಿಯನ್ನು ತಿಳಿಯದೇ ಈ ಹೇಳಿಕೆಯನ್ನು ಕೊಟ್ಟಿರುವಂತಹ ವ್ಯಕ್ತಿ ಎಂದು ನಾನು ಭಾವಿಸುವುದಿಲ್ಲ. ಈ ದೇಶದ ಆಡಳಿತಾತ್ಮಕವಾಗಿರುವ ಸಂವಿಧಾನಾತ್ಮಕ ವಿಧಿ ವಿಧಾನಗಳು ತಿಳಿದಿದ್ದರೂ ಸಹ ಅವರು ಈ ರೀತಿ ಈ ದೇಶದ ಸಂವಿಧಾನಕ್ಕೆ ಅಪಚಾರ ಎಸಗುವಂತಹ ಹೇಳಿಕೆಯನ್ನು ನೀಡಿದ್ದಾರೆ. ಅವರು ಈ ಸದನವನ್ನು ನಡೆಸುವುದನ್ನು ಬಿಡುವುದಿಲ್ಲ ಎಂದು ಹೇಳುವುದರ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ವ್ಯಕ್ತಿ ಎಷ್ಟೇ ಎತ್ತರಕ್ಕೆ ಹೋಗಬಹುದು. ಆದರೆ ಸಂವಿಧಾನ ಕೊಟ್ಟಿರುವಂತಹ ಕಾನೂನಿನ ಚೌಕಟ್ಟಿಗೆ ತಲೆಯನ್ನು ತಗ್ಗಿಸಬೇಕಾಗುತ್ತದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಸದುದ್ದೇಶ ವನ್ನು ಇದನ್ನು ಮರುಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಅತ್ಯುನ್ನತವಾದ ಸ್ಥಾನವನ್ನು ಪಡೆದುಕೊಂಡಿದೆ. ಆದ್ದರಿಂದ ಅವರ ಹೇಳಿಕೆಯಿಂದ ಸದನದ ನಿಯಮಾಳಿಗಳ ನಿಯಮ 175 ರ

ಪ್ರಕಾರ ಸದನದಲ್ಲಿ ಇರುವಂತಹ ಅಂದರೆ ತಮ್ಮನ್ನು ಒಳಗೊಂಡಂತೆ ಎಲ್ಲ ಸದಸ್ಯರ ಹಕ್ಕುಚ್ಯುತಿ ಆಗಿದೆ. ಅವರ ಹೇಳಿಕೆ ನಾವೆಲ್ಲರೂ ತಲೆತಗ್ಗಿಸುವಂತೆ ಮಾಡಿದೆ ಎಂದು ಹೇಳುವ ಮೂಲಕ ಮಾನ್ಯ ಮಧುಸೂದನ್‌ರವರು ತಂದಿರುವಂತಹ ಹಕ್ಕುಚ್ಯುತಿ ಪ್ರಸ್ತಾಪನೆಯನ್ನು ನಾನು ಅನುಮೋದಿಸುತ್ತಿದ್ದೇನೆ ಎಂದು ಹೇಳುವುದರ ಮೂಲಕ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:** ಹಕ್ಕುಚ್ಯುತಿ ಎನ್ನುವುದು ಸದನದಲ್ಲಿ ಬಹಳ ಗಂಭೀರವಾಗಿರುವಂತಹ ಸಂಗತಿಯಾಗಿದೆ. ಗೌರವಾನ್ವಿತ ಸದಸ್ಯರು ಕೆಲವೊಂದು ದಾಖಲೆಗಳನ್ನು ನನಗೆ ಕಳುಹಿಸಿಕೊಟ್ಟು ಇದರ ಬಗ್ಗೆ ಪರಿಶೀಲಿಸಿ, ತೀರ್ಮಾನ ಮಾಡಬೇಕು. ನಮ್ಮ ಹಕ್ಕುಚ್ಯುತಿ ಆಗುವಂತಹ ಸಂದರ್ಭ ಬಂದಿದೆ. ನಮ್ಮ ಹಕ್ಕುಗಳಿಗೆ ರಕ್ಷಣೆ ಕೊಡಬೇಕು. ಹಕ್ಕುಚ್ಯುತಿಯನ್ನುಂಟು ಮಾಡಲು ಪ್ರಯತ್ನ ಮಾಡಿದವರಿಗೆ ಶಿಕ್ಷೆ ಆಗಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಇನ್ನೂ ಸ್ವಲ್ಪ ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಹಕ್ಕುಚ್ಯುತಿ ಬಗ್ಗೆ ಮಾತನಾಡುವಾಗ ಕಾನೂನನ್ನು ಪೂರ್ಣ ಪ್ರಮಾಣದಲ್ಲಿ ನೋಡಬೇಕಾ ಗುತ್ತದೆ. ನಮ್ಮ ಸಂವಿಧಾನ, ನಾವು ನಡೆದು ಬಂದ ಹಾದಿ, ನಮಗೆ ನಾವೇ ಹಾಕಿಕೊಂಡಿರುವಂತಹ ಪದ್ಧತಿಗಳು ಇವುಗಳೆಲ್ಲದರ ಆಧಾರದ ಮೇಲೆ ಅದನ್ನು ಪೂರ್ಣವಾಗಿ ಪರಿಶೀಲಿಸಿ ಸೂಕ್ತ ಸಮಯದಲ್ಲಿ ನಿರ್ಣಯವನ್ನು ನೀಡುತ್ತೇನೆ. ಅಲ್ಲಿಯವರೆಗೆ ಈ ಹಕ್ಕುಚ್ಯುತಿ ನಿರ್ಣಯ ಹಾಗೆ ಇರುತ್ತದೆ ಎಂದು ಹೇಳುತ್ತಾ, ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನದ ಸಂಜೆ 4 ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 13 ನೇ ಜನವರಿ ಮಾಹೆ 2011 ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)**